

# ಅಪರಂಜಿ

ತಿಳಿನಗೆಯ ಕಾರಂಜಿ

ಅಕ್ಟೋಬರ್ - 2015



**ದಸರಾ ವಿಶೇಷ**





**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ



# ಅಪರಂಜಿ


ತಿಳಿನಗೆಯ ಕಾರಂಜಿ

ಸಂಪುಟ 33


ಸಂಚಿಕೆ - 1

ಅಕ್ಟೋಬರ್ - 2015

## *ಈ ಸಂಚಿಕೆಯಲ್ಲಿ .....*



**ದಸರಾ ವಿಶೇಷ**



| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ರಂಗು ರಂಗಿನ ಛತ್ರಿ... | **ವತ್ಸನ** | 4 |
| ಪುಸ್ತಕ ಪರಿಚಯ | **ಸಿ.ಆರ್. ಸತ್ಯ** | 9 |
| ಮಾಯಾ ಮಾರ್ಜಾಲ | **ಎಂ.ಕೆ. ಭಾಸ್ಕರ ರಾವ್** | 13 |
| ಸಹವಾಸ ರಾದ್ಧಾಂತ | **ಗಣೇಶ ಹೆಗ್ಗಡೆ** | 16 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 19 |
| ಚಿನ್ನ ನೀನಿಲ್ಲದಿರೆ... | **ಕೃಷ್ಣ ಸುಬ್ಬರಾವ್** | 22 |
| ತುಂತುರು | **ದಂನಾಶ** | 25 |
| ಮಾರಾಯ್ರಾ ಅದು.... | **ವಸುಮತಿ ಉಡುಪ** | 26 |
| ಹುಟ್ಟು ಹಬ್ಬದ..... | **ಬೇಲೂರು ರಾಮಮೂರ್ತಿ** | 29 |
| ಮೇಯ್ಡ್ ಇನ್...... | **ರೇಖಾ ಹೆಗಡೆ ಬಾಳೇಸರ** | 31 |
| ಚಪ್ಪಲಿಗೂ ಚಪಲ | **ಸಿ.ಎನ್. ಕೃಷ್ಣಮಾಚಾರ್** | 35 |
| ಐ.ಎಸ್.ಐ..... | **ಪ್ರಶಾಂತ ಅಡೂರ** | 39 |

**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



'ಕಾಂಗ್ರೆಸ್ ಜೊತೆ ಮೈತ್ರಿ' – ಮಾಜೀ ಪ್ರಧಾನಿಗಳು

***● 'ಮೈತ್ರಿ' ಅನ್ನುವ ಪದವನ್ನು ಹೊಸದಾಗಿ ಅರ್ಥೈಸಬೇಕು !!***

★★★

ಇಂದಿನಿಂದ ಲೋಡ್ ಶೆಡ್ಡಿಂಗ್ – ಸುದ್ದಿ

***● Candle Light ಡಿನ್ನರ್‌ಗೆ ಸಕಾಲ !!***

★★★

ಕೆ.ಎ.ಎಸ್.; 621 ಅರ್ಜಿ ತಿರಸ್ಕಾರ – ಪತ್ರಿಕೆ

***● ಇನ್ನೊಂದು ಹಗರಣಕ್ಕೆ ನಾಂದಿ ?!***

★★★

'ಪ್ರೌಢ ಪ್ರಬಂಧಗಳ ಗುಣಮಟ್ಟ ಕುಸಿತ' – ಹೇಳಿಕೆ

***● ಮತ್ತೆ ಅವು ಹೇಗೆ 'ಪ್ರೌಢ' ಆದವು ?!***

★★★

ಮಡಿಕೇರಿಯಲ್ಲಿ ಕಾಂಗ್ರೆಸ್ ಸದಸ್ಯರು – ಬಿ.ಬಿ.ಎಂ.ಪಿ. ಸುದ್ದಿ

***● ಇಳಿದು ಬಾ ತಾಯಿ.... ?!***

★★★

ಸೋನಿಯಾ ಮತ್ತೆ ಅಧ್ಯಕ್ಷೆ – ದೆಹಲಿ ಸುದ್ದಿ

***● ಹಾಳೂರಿಗೆ...... !!***

★★★

ವಿಮಾನದಲ್ಲಿ ಚಿನ್ನದ ಗಟ್ಟಿ ಪತ್ತೆ – ಸುದ್ದಿ

***● ಯಾರೋ ಮರೆತು ಹೋಗಿರಬೇಕು !!***


★★★

ಕಾರ್ಪೊರೇಟರ್–ಗಳು ಕೇರಳದಿಂದ ಬಿಡದಿಗೆ – ಪತ್ರಿಕೆ

***● ಪಾಪ, ಅಲೆಮಾರಿಗಳು !!***

★★★

# ಆರ್. ಶೇಷಗಿರಿರಾವ್



ಅಪರಂಜಿ ಪತ್ರಿಕೆಯ ಮೊದಲ ಸಂಪಾದಕ ಶ್ರೀ ಆರ್. ಶೇಷಗಿರಿರಾವ್ ಇನ್ನಿಲ್ಲ. ನಮ್ಮೆಲ್ಲರ ಅತ್ಯಂತ ಆತ್ಮೀಯ ಗೆಳೆಯ ಶೇಷಗಿರಿ ನಿಧನರಾದ ಸುದ್ದಿಯನ್ನು ಅವರ ಮಗ ಪ್ರಶಾಂತ್ ಫೋನಿನಲ್ಲಿ ಹೇಳಿದಾಗ ನನಗೆ ನಂಬಲೂ ಸಾಧ್ಯವಾಗಲಿಲ್ಲ. ಸದಾ ನಗುಮೊಗದ, ಸಾತ್ವಿಕ ನಡವಳಿಕೆಯ ಸಜ್ಜನ ವ್ಯಕ್ತಿ, ನಮ್ಮೊಂದಿಗೆಲ್ಲಾ ಬೆರೆತು, ಪತ್ರಿಕೆಯ ನಿರ್ವಹಣೆಯಲ್ಲಿ ಸಹಾಯ ಹಸ್ತ ನೀಡುತ್ತಿದ್ದ ಶೇಷಗಿರಿಯ ಅಗಲಿಕೆಯ ನೋವು ಮಾಸಲು ಬಹುಕಾಲ ಬೇಕಾಗಬಹುದು.

ಶೇಷಗಿರಿ ನನಗೆ ಮೊದಲು ಪರಿಚಯವಾದದ್ದು ಮೂವತ್ತೆರಡು ವರ್ಷಗಳ ಹಿಂದೆ 1983ರ ಮಾರ್ಚ್‌ನಲ್ಲಿ. ಆಗಿನ್ನೂ ನಮ್ಮ ತಂದೆ ರಾ.ಶಿ. ಬದುಕಿದ್ದರು. ಒಂದು ಸಂಜೆ ಅ.ರಾ.ಸೇ. ಅವರು ತಮ್ಮ ಮಿತ್ರರೊಬ್ಬರೊಡನೆ ನಮ್ಮ ಮನೆಗೆ ನಮ್ಮ ತಂದೆಯವರನ್ನು ನೋಡಲು ಬಂದರು. ''ಇವನೇ ಶೇಷಗಿರಿ. ಇವನ ಸಂಪಾದಕತ್ವದಲ್ಲಿ ಕೊರವಂಜಿಯನ್ನು ಪುನಃ ಪ್ರಾರಂಭಿಸುವ ಯೋಜನೆಗೆ ರಾ.ಶಿ.ಯವರ ಒಪ್ಪಿಗೆ ಪಡೆಯಲು ಬಂದಿದ್ದೇನೆ'' ಅಂತ ಅ.ರಾ.ಸೇ. ನನಗೆ ಶೇಷಗಿರಿಯವರನ್ನು ಪರಿಚಯಿಸಿದರು. ನಮ್ಮ ತಂದೆಯವರು ವೃದ್ಧಾಪ್ಯದಿಂದ ಬಳಲುತ್ತಿದ್ದರೂ ಬಂದವರೊಡನೆ ಬಹು ಸರಸವಾಗಿ ಮಾತನಾಡಿ ಹೊಸ ಪತ್ರಿಕೆಯ ಪ್ರಾರಂಭಕ್ಕೆ ಶುಭ ಹಾರೈಸಿ ಕಳಿಸಿದರು. ಶೇಷಗಿರಿಯನ್ನು ಕುರಿತು ಅವರು ಹೇಳಿದ ಮಾತು ಇಂದಿಗೂ ನನ್ನ ನೆನಪಿನಲ್ಲಿದೆ. ''ಅ.ರಾ.ಸೇ., ಹೇಳ್ತಾನೇ ಅಂತ ನಿನ್ನ ವೃತ್ತಿ ಎಲ್ಲಾ ಮರೆತು ಪತ್ರಿಕೆ ಗಿತ್ರಿಕೆ ಅಂತ ಅದರಲ್ಲೇ ಮುಳುಗಬೇಡ. ಎಲ್ಲಾದರಲ್ಲೂ ಹಿತ ಮಿತ ಇರಲಿ, ಹೊಸ ಪತ್ರಿಕೆಗೆ ಅಪರಂಜಿ ಅಂತ ಹೆಸರಿಡಿ, ಕೊರವಂಜಿ ಅಂತ ಬೇಡ. ಅದರ ಅಧ್ಯಾಯ ಇಲ್ಲಿಗೇ ಮುಗಿಯಲಿ'' ಅಂತ ಹೇಳಿ ಅವರನ್ನು ಆಶೀರ್ವದಿಸಿ ಕಳಿಸಿದ್ದರು. ಪತ್ರಿಕೆಯ ಮೊದಲ ದಿನಗಳಲ್ಲಿ ಶೇಷಗಿರಿಯವರು ವಹಿಸಿದ್ದ ಆಸಕ್ತಿ ದಕ್ಷತೆಗಳಿಂದ ಅಪರಂಜಿಗೆ ಒಂದು ಭದ್ರ ಬುನಾದಿ ದೊರೆಯಿತು. ಚಿತ್ರದುರ್ಗದಲ್ಲಿ ಅಪರಂಜಿಯ ಮೊದಲ ಸಂಚಿಕೆಯ ಬಿಡುಗಡೆ ಸಮಯದಲ್ಲಿ ಶೇಷಗಿರಿಯವರ ಸಂಭ್ರಮ, ನಿರ್ವಹಣಾ ಕೌಶಲ್ಯ, ನನ್ನ ಬಗ್ಗೆ ಅವರು ತೋರಿದ ಪ್ರೀತಿ ಇವೆಲ್ಲಾ ಎಂದಿಗೂ ಮರೆಯಲಾಗದ ಸಂಗತಿಗಳು. ಶೇಷಗಿರಿಯವರ ಸಾಹಿತ್ಯಾಸಕ್ತಿ ಅದಮ್ಯ. ಮರಾಠಿ ಭಾಷೆಯಲ್ಲಿ ಅವರಿಗೆ ಅಸಾಧಾರಣ ಪಾಂಡಿತ್ಯವಿತ್ತು. ಈ ಎರಡೂ ಗುಣಗಳು ಸಮ್ಮಿಳಿತಗೊಂಡುದರ ಫಲಶ್ರುತಿ, ಅವರು ಕನ್ನಡಕ್ಕೆ ಅನುವಾದಿಸಿದ ಮರಾಠಿ ಪುಸ್ತಕ ''ಸಮಾನಾಂತರ''. ತದ್ರೂಪಿಯಾಗಿ ಇರುವವನೊಬ್ಬನ ಅನ್ವೇಷಣೆಯನ್ನು ಈ ಕಾದಂಬರಿಯಲ್ಲಿ ಬಹು ನಿಗೂಢವಾಗಿ ಆಸಕ್ತಿ ಮೂಡಿಸುವಂತೆ ಶೇಷಗಿರಿಯವರು ಹೆಣೆದಿದ್ದಾರೆ.

ಅಪರಂಜಿಯ ನಿರ್ವಹಣೆಯಲ್ಲಿ ಶೇಷಗಿರಿ ನಮ್ಮೆಲ್ಲರಿಗೂ ಬೆನ್ನೆಲುಬಾಗಿ ನಿಂತಿದ್ದರು. ಅವರ ಅಕಾಲಿಕ ಅಗಲಿಕೆ ಅಪರಂಜಿ ಬಳಗಕ್ಕೆ ತುಂಬಲಾರದ ನಷ್ಟ. ಭಗವಂತನು ಅವರ ಮಕ್ಕಳು ಮೊಮ್ಮಕ್ಕಳಿಗೆ ಈ ಅಗಲಿಕೆಯನ್ನು ಭರಿಸುವ ಶಕ್ತಿ ಕೊಡಲಿ ಮತ್ತೆ ಅಗಲಿದ ಗೆಳೆಯನ ಆತ್ಮಕ್ಕೆ ಶಾಂತಿಯನ್ನು ನೀಡಲಿ ಎಂದು ಅಪರಂಜಿ ಮಂಡಿಯೂರಿ ಪ್ರಾರ್ಥಿಸುತ್ತಾಳೆ.

❑

*ಶರಲೇಖನ ಪುನರಾಗಮನ*



# ರಂಗು ರಂಗಿನ ಛತ್ರಿ ಪ್ರಕರಣ

**- ವತ್ಸನ**

**ಕ**ಳೆದ ಮಾರ್ಚ್ ತಿಂಗಳಲ್ಲಿ ಘೋಷಾಲ್ ಎಂಬ ಕುಖ್ಯಾತ ರೌಡಿಯ ಬಣ್ಣವನ್ನು ಶರಲೇಖ ಬಯಲು ಮಾಡಿದ್ದರ ಬಗ್ಗೆ ನಾನು ಬರೆದಿದ್ದು ನಿಮಗೆ ನೆನಪಿರಬಹುದು. ಆ ಘಟನೆಯ ನಂತರ ಶರಲೇಖ ''ತೀರ ಅನ್ಯಾಯ ಕಣಯ್ಯ. ಆ ಘೋಷಾಲ್ ನೋಡಿದ್ಯಾ. ನಮ್ಮ ಮೊದಲ ಭೇಟಿಯಲ್ಲಿ ಆತ ತನ್ನ ಸಭ್ಯ ಮುಖವಾಡದಿಂದ ನಮ್ಮನ್ನೇ ಮರುಳು ಮಾಡಿಬಿಟ್ಟ. ಮನುಷ್ಯನ ಮನಸ್ಸಿನಲ್ಲಿ ಏನಿದೆ ಅಂತ ತಿಳುದುಕೊಳ್ಳೋದು ಅಷ್ಟು ಸುಲಭ ಅಲ್ಲ'' ಅಂತೆಲ್ಲಾ ಪೇಚಾಡಿಕೊಂಡಿದ್ದ. ಈ ವಿಷಯ ಅವನನ್ನು ಒಂದೆರಡು ವಾರಗಳು ಬಹುವಾಗಿ ಕಾಡಿತ್ತು. ಅನಂತರ ಒಂದು ಬೆಳಗ್ಗೆ ''ಸ್ವಲ್ಪ ಕಾಲ ನಾನು ಲದ್ದಾಕ್‌ಗೆ ಹೋಗಿ ಬರ್ತೀನೆ. ನನ್ನ ವೃತ್ತಿಯ ಬಗ್ಗೆ ನಾನು ಕಲಿಯೋದು ಬೇಕಾದಷ್ಟಿದೆ'' ಅಂತ ಹೇಳಿ ಹೊರಟೇ ಬಿಟ್ಟ. ಶರಲೇಖ ಯಾವಾಗಲೂ ಹೀಗೆ. ಬಹಳ ಸೀಕ್ರೆಟಿವ್. ಖ್ಯಾತ ಪತ್ತೇದಾರನ ಹತ್ತಿರ ಇನ್ನೇನು ನಿರೀಕ್ಷಿಸೋಕ್ಕಾಗತ್ತೆ ಅಂತ ನಾನೂ ಸುಮ್ಮನಾದೆ. ಆರು ತಿಂಗಳುಗಳಾದರೂ ಶರಲೇಖನ ಸುದ್ದಿಯೇ ಇರಲಿಲ್ಲ. ಮೊನ್ನೆ ಬೆಳಗ್ಗೆ ಹಠಾತ್ತಾಗಿ ಅವ ನಮ್ಮ ಫ್ಲಾಟಿನಲ್ಲಿ ಪ್ರತ್ಯಕ್ಷನಾದ! ಮೊದಲೇ ಅವನದ್ದು ತೆಳು ಪ್ರಕೃತಿ. ಇನ್ನೂ ತೆಳುವಾಗಿದ್ದ ಹಾಗೆ ಕಾಣಿಸಿತು. ''ಹೇಗಿತ್ತು ಲದ್ದಾಕ್? ಅಲ್ಲಿ ಎಲ್ಲಿದ್ದೆ? ಏನೇನಾಯಿತು?'' ಅಂತೆಲ್ಲಾ ಅವನ ಮೇಲೆ ಪ್ರಶ್ನೆಗಳ ಮಳೆಯನ್ನೇ ಸುರಿಸಿದೆ. ಆತ, ನಸು ನಗುತ್ತ, ''ಎಲ್ಲಾ ಹೇಳ್ತೇನೆ. ಏನು ಅವಸರ. ಮೊದಲು ಸರೋಜಮ್ಮನವರಿಗೆ ಹೇಳಿ ಮಸಾಲೆ ದೋಸೆ ಮಾಡಿಸು. ಹಿಮಾಲಯಾ ತಪ್ಪಲಿನಲ್ಲಿದ್ದು ನಾಲಿಗೆಯೆಲ್ಲಾ ಕೆಟ್ಟು ಹೋಗಿದೆ'' ಅಂತ ಹೇಳಿ ಒಳಕ್ಕೆ ಹೋದ. ಪಾಪ ಈಗತಾನೆ ಬಂದಿದ್ದಾನೆ. ಈವಾಗ್ಲೇ ಯಾಕೆ ಪಾಟೀಸವಾಲು. ಒಂದೆರಡು ದಿನ ಬಿಡೋಣ ಅಂತ ನಾನೂ ಸುಮ್ಮನಾದೆ. ಆ ಒಂದೆರಡು ದಿನ ಸಿಗಲೇ ಇಲ್ಲ. ಅವ ಬಂದ ಮಾರನೆಯ ದಿನಾನೇ ಒಂದು ಅತ್ಯಂತ ನಿಗೂಢವಾದ ಕೇಸ್ ನಮ್ಮ ಮಡಿಲಲ್ಲಿ ಬಂದು ಬಿದ್ದಿತು. ಅದಾದದ್ದು ಹೀಗೆ.

ಮಾರನೆಯ ಬೆಳಗ್ಗೆ ತಿಂಡಿ ತಿಂದು ಪೇಪರ್ ಓದುತ್ತಿದ್ದಾಗ ಒಮ್ಮೆಲೇ ಹೊರಬಾಗಿಲ ಕರೆಘಂಟೆ ಟ್ರಿನ್‌ಗುಟ್ಟಿತು. ಬಾಗಿಲು ತೆರೆದು ನೋಡಿದರೆ ಸಂಭಾವಿತ ವ್ಯಕ್ತಿಯಂತೆ ಕಾಣಿಸುತ್ತಿದ್ದ ಒಬ್ಬರು ಮತ್ತೊಬ್ಬ ಪೋಲೀಸ್ ಅಧಿಕಾರಿಯಂತೆ ಕಾಣುತ್ತಿದ್ದ ವ್ಯಕ್ತಿಯೊಡನೆ ಬಂದಿದ್ದರು. ನನ್ನನ್ನು ನೋಡಿ, ''ಶರಲೇಖ ಅವರು ಇದ್ದಾರೆಯೇ?'' ಅಂತ ಕೇಳುತ್ತಲೇ ಇಬ್ಬರೂ ಒಳಕ್ಕೆ ಬಂದರು. ಶರಲೇಖನಿಗೆ ಅವರಿಬ್ಬರ ಪರಿಚಯವಿತ್ತು ಅಂತ ಕಾಣುತ್ತೆ. ಅವರನ್ನು ಆದರದಿಂದ ಸ್ವಾಗತಿಸಿ, ನನಗೆ ಅವರನ್ನು ಪರಿಚಯಿಸಿದ. ''ಇವರು ಶ್ರೀಮಾನ್..... (ಹೆಸರು ಹೇಳುವ ಹಾಗಿಲ್ಲ. ನ್ಯಾಷನಲ್ ಸೀಕ್ರೆಟ್) ನಮ್ಮ ನಾಡಿನ ಖ್ಯಾತ ಅಣು ವಿಜ್ಞಾನಿಗಳು. ಮುಂಬೈನಲ್ಲಿ ವಾಸ. ಅವರೊಂದಿಗಿರುವವರು

ಶ್ರೀಮಾನ್... ಇವರು ನಮ್ಮ ಗೂಢಾಚಾರ ಇಲಾಖೆಯ ಮುಖ್ಯಸ್ಥರು. ನಿನ್ನೆಯೇ ಫೋನ್ ಮಾಡಿ ಇಂದು ಬರುತ್ತೇವೆಂದು ತಿಳಿಸಿದ್ದರು'' ಎಂದು ಬಂದವರನ್ನು ನನಗೆ ಪರಿಚಯಿಸಿ ಅನಂತರ ಅವರನ್ನು ಕುರಿತು, ''ನೀವು ಬಂದ ಕಾರಣದ ಬಗ್ಗೆ ಎಲ್ಲಾ ವಿವರವಾಗಿ ಹೇಳಿ. ವತ್ಸನ ನನ್ನ ನಿಕಟವರ್ತಿ. ಅವನ ಮುಂದೆ ನಿಸ್ಸಂಕೋಚವಾಗಿ ಮನಬಿಚ್ಚಿ ಮಾತನಾಡಬಹುದು'' ಎಂದ ಶರಲೇಖ.

(ಓದುಗ ಮಹಾಶಯಾ, ಈ ಕೇಸು ಬಹಳ ಗುಪ್ತವಾದದ್ದು ಹಾಗೂ ಬಯಲಾದರೆ ರಾಷ್ಟ್ರದ ಹಿತಕ್ಕೆ ಧಕ್ಕೆಯಾಗುವ ಸಾಧ್ಯತೆ ಇರುವಂತಹುದು. ಹಾಗಾಗಿ ನಿಜವಾದ ಹೆಸರುಗಳನ್ನು ಬಳಸುವುದು ಅಸಾಧ್ಯ. ಆದರೆ ಕಥನ ಮುಂದೆ ಸಾಗಬೇಕಾದರೆ ಪಾತ್ರಗಳನ್ನು ಗುರುತಿಸಲೇ ಬೇಕಲ್ಲವೇ. ಅದಕ್ಕೇ ನಮ್ಮ ಅಣು ವಿಜ್ಞಾನಿಯನ್ನು ದ್ರೋಣ ಅಂತ ಕರೆದು, ಹಿರಿಯ ಪೋಲೀಸ್ ಅಧಿಕಾರಿಯನ್ನು ಶಲ್ಯ ಅಂತ ಕರೆಯೋಣ. ಕಥನ ಮುಂದೆ ಸಾಗಿದಂತೆ ಅಗತ್ಯ ಬಿದ್ದಾಗ ಹೊಸ ಪಾತ್ರಗಳು ಮಹಾಭಾರತದ ಪಾತ್ರಗಳ ಹೆಸರುಗಳನ್ನು ಹೋಲುವಂತಾದರೆ ಅದಕ್ಕೆ ಮುಖ್ಯಕಾರಣ ಗೌಪ್ಯವನ್ನು ಕಾಪಾಡುವ ಉದ್ದೇಶ ಎಂದು ನೆನಪಿದ್ದರೆ ಸಾಕು)

ಸರೋಜಮ್ಮನವರು ಅತಿಥಿಗಳ ಮುಂದೆ ಕಾಫಿ ತಂದಿಟ್ಟು ಒಳಕ್ಕೆ ಹೋದ ಮೇಲೆ ದ್ರೋಣರು ತಮ್ಮ ಮಾತನ್ನು ಪ್ರಾರಂಭಿಸಿದರು. ''ಶರಲೇಖ ಅವರೇ, ನಮ್ಮ ಇಲಾಖೆ ಒಂದು ಮಹತ್ತರವಾದ ಕ್ಷಿಪಣಿಯನ್ನು ವಿನ್ಯಾಸ ಮಾಡುವ ಯೋಜನೆಯನ್ನು ಕೈಗೊಂಡಿದೆ. ಈ ಕ್ಷಿಪಣಿಯ ಹೆಚ್ಚುಗಾರಿಕೆ ಎಂದರೆ ಅದರ ಅತಿ ಸೂಕ್ಷ್ಮ ನಿಯಂತ್ರಣ ವ್ಯವಸ್ಥೆ. ಈ ವ್ಯವಸ್ಥೆಯನ್ನು ನಮ್ಮ ನಿಯಂತ್ರಣ ವಿಜ್ಞಾನಿಗಳ ತಂಡ ಸಿದ್ಧಪಡಿಸುತ್ತಿದೆ. ಇನ್ನು ಹತ್ತು ದಿನಗಳಲ್ಲಿ ಅವರ ಕೆಲಸ ಯಶಸ್ವಿಯಾಗಿ ಮುಕ್ತಾಯಗೊಳ್ಳಬಹುದು. ಇಂತಹ ಪರಿಸ್ಥಿತಿಯಲ್ಲಿ ಮೊನ್ನೆ ಒಂದು ಆತಂಕಕಾರಿ ಸುದ್ದಿ ಶಲ್ಯರ ಗಮನಕ್ಕೆ ಬಂದಿತು. ಅದನ್ನ ಶಲ್ಯರೇ ಹೇಳುತ್ತಾರೆ'' ಎಂದು ಶಲ್ಯರಿಗೆ ಮುಂದುವರಿಸುವಂತೆ ಸೂಚಿಸಿದರು.

''ಶತ್ರು ದೇಶದ ಗೂಢಚಾರರ ನಡುವೆ ನಡೆದ ಮಾತುಕತೆಯ ತುಣುಕೊಂದು ಇತ್ತೀಚೆಗೆ ನಮ್ಮ ಗಮನಕ್ಕೆ ಬಂತು. ಅದರ ಪ್ರಕಾರ ದ್ರೋಣರು ನಡೆಸುತ್ತಿರುವ ಕ್ಷಿಪಣಿ ನಿಯಂತ್ರಣ ವ್ಯವಸ್ಥೆಯ ಮಾಹಿತಿಯನ್ನು ಕದಿಯಲು ಅವರು ಹಂಚಿಕೆ ಹೂಡಿರುವರಂತೆ. ನಮ್ಮ ವಿಜ್ಞಾನಿಗಳ ತಂಡದ ಒಬ್ಬ ದೇಶದ್ರೋಹಿ ಅವರಿಗೆ ಮಾಹಿತಿ ನೀಡಲು ಒಪ್ಪಿರುವನಂತೆ. ಆ ಖದೀಮ ಯಾರು ಎಂದು ಗುರುತಿಸುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಸುಮ್ಮ ಸುಮ್ಮನೆ ಪುರಾವೆಗಳಿಲ್ಲದೇ ಯಾರು ಯಾರಮೇಲೋ ಅನುಮಾನ ಪಟ್ಟರೆ ನಮ್ಮ ಪ್ರಾಜೆಕ್ಟಿನ ಯಶಸ್ಸಿಗೇ ಕುಂದು ಬರಬಹುದು. ನಿಜವಾದ ದ್ರೋಹಿಯನ್ನು ಆದಷ್ಟು ಬೇಗ ಕಂಡುಹಿಡಿಯಲು ನಿಮ್ಮ ಸಹಾಯ ಕೋರಿ ಇಲ್ಲಿಗೆ ಬಂದಿದ್ದೇವೆ'' ಎನ್ನುತ್ತಾ ಶಲ್ಯರು ತಮ್ಮ ಮಾತನ್ನು ಮುಗಿಸಿದರು.

ಶರಲೇಖ ಒಂದೆರಡು ನಿಮಿಷ ಮೌನವಾಗಿದ್ದ. ಅನಂತರ ಏನನ್ನೋ ನಿರ್ಧರಿಸಿ, ''ನಾಡಿದ್ದು ಶನಿವಾರ. ವೀಕೆಂಡ್ ರಿಟ್ರೀಟ್ ಎನ್ನುವ ನೆಪದಲ್ಲಿ ನಿಮ್ಮ ವಿಜ್ಞಾನಿಗಳ

ತಂಡವನ್ನು ಯಾವುದಾದರೊಂದು ರಿಸಾರ್ಟಿನಲ್ಲಿ ಕಲೆಹಾಕುವುದಕ್ಕಾಗುತ್ತದೆಯೇ? ಹಾಗಾದಲ್ಲಿ ನಾನೂ ಅಲ್ಲಿದ್ದು ನಿಮ್ಮ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬಹುದು'' ಎಂದು ಹೇಳಿದ. ದ್ರೋಣರು ಮಿತಭಾಷಿ. ''ಆಗಲಿ. ವ್ಯವಸ್ಥೆ ಮಾಡುವೆ. ಧನ್ಯವಾದಗಳು'' ಎಂದು ಹೇಳಿ ಶಲ್ಯರೊಂದಿಗೆ ಹೊರಟುಬಿಟ್ಟರು. ಮಾರನೆಯ ಬೆಳಗ್ಗೆ ನಮ್ಮ ಫ್ಲಾಟಿನ ಮುಂದೆ ಬಂದು ನಿಂತ ಇನೋವಾ ಹತ್ತಿ ಏರ್ಪೋರ್ಟ್‌ಗೆ ತೆರಳಿದೆವು. ಅಲ್ಲಿ ನಮ್ಮ ರಕ್ಷಣಾದಳದ ವಿಮಾನವೊಂದು ನಮ್ಮನ್ನು ಪುಣೆಗೆ ಕರೆದೊಯ್ಯಿತು. ಪುಣೆಯಲ್ಲಿ ಇಳಿದ ತಕ್ಷಣ ರಕ್ಷಣಾದಳದ ಜೀಪೊಂದರಲ್ಲಿ ನಾವು ಎರಡು ಘಂಟೆಗಳ ಯಾತ್ರೆ ಮಾಡಿ ಪಂಚ್‌ಗನಿ ಎಂಬ ವಿಹಾರಧಾಮವನ್ನು ಸೇರಿದೆವು. ಅಲ್ಲಿ ಬಹು ಸುವ್ಯವಸ್ಥಿತವಾದ ಕಾಟೇಜೊಂದರಲ್ಲಿ ನಾವಿಬ್ಬರೂ ಇಳಿದುಕೊಂಡಾಗ ಸಂಜೆಯಾಗಿತ್ತು. ಎಂಟು ಘಂಟೆಯ ಹೊತ್ತಿಗೆ ಊಟಕ್ಕೆಂದು ಡೈನಿಂಗ್ ಹಾಲಿಗೆ ಹೋದಾಗ ಅಲ್ಲಿ ದ್ರೋಣರು ನಮಗಾಗಿ ಕಾಯುತ್ತಿದ್ದರು. ನಮ್ಮನ್ನು ನೋಡಿದ ತಕ್ಷಣ ಬಹು ಆತ್ಮೀಯತೆಯಿಂದ ಸ್ವಾಗತಿಸಿ, ''ಬನ್ನಿ ನಮ್ಮ ವಿಜ್ಞಾನಿಗಳನ್ನು ನಿಮಗೆ ಪರಿಚಯಿಸುವೆ'' ಎನ್ನುತ್ತಾ ಹತ್ತಿರದಲ್ಲಿದ್ದ ಮೇಜಿನತ್ತ ನಮ್ಮನ್ನು ಕರೆದೊಯ್ದರು. ಮೇಜಿನ ಸುತ್ತ ಕುಳಿತಿದ್ದ ಆರು ಜನರೂ ಅತ್ಯಂತ ಪ್ರತಿಭಾವಂತರೆಂಬುದು ಅವರನ್ನು ನೋಡಿದ ತಕ್ಷಣ ತಿಳಿಯುವಂತಿತ್ತು. (ನಮ್ಮ ಕಥನದ ಸಲುವಾಗಿ ಅವರನ್ನು ಕರ್ಣ, ಧರ್ಮರಾಜ, ಭೀಮ, ಅರ್ಜುನ, ನಕುಲ ಮತ್ತು ಸಹದೇವ ಎಂದು ಹೆಸರಿಸುವೆ.) ಪರಿಚಯವಾದನಂತರ ಸ್ವಲ್ಪಕಾಲ ಲೋಕಾಭಿರಾಮವಾಗಿ ಮಾತನಾಡಿ ನಾವೆಲ್ಲರೂ ಊಟಕ್ಕೆ ತೆರಳಿದೆವು. ಊಟದ ನಂತರ ನಾವು ಕಾಟೇಜಿಗೆ ಮರಳುವಾಗ ನಮ್ಮ ಪಕ್ಕದ ಕುಟೀರದಲ್ಲಿ ಆ ಆರು ಜನರ ಬಿಡಾರ ಎಂಬ ಅಂಶ ತಿಳಿಯಿತು.

ಕಾಟೇಜ್ ಸೇರಿದ ನಂತರ ನಾನು, ''ಅಲ್ಲಾ ಶರಲೇಖ, ಈ ಆರು ಜನರೂ ಅಷ್ಟು ಸಂಭಾವಿತರಂತೆ ಕಾಣುತ್ತಾರೆ. ಇವರಲ್ಲಿ ಖದೀಮ ಯಾರು ಅಂತ ಹೇಗೆ ಹುಡುಕ್ತೀಯೋ? ಏನಾದರೂ ಪ್ಲಾನ್ ಮಾಡಿದ್ದೀಯಾ?'' ಅಂತ ಶರಲೇಖನನ್ನ ಕೇಳಿದೆ. ಶರಲೇಖ ತನ್ನ ಹಂಚಿಕೆಯ ವಿವರ ಹೇಳಲು ಪ್ರಾರಂಭಿಸಿದ.

''ನೋಡು ವತ್ಸನ, ನಾನು ಇಲ್ಲಿಂದ ಲದ್ದಾಕ್ ಹೋದನಂತರ ಅಲ್ಲಿನ ಮುಖ್ಯ ಪಟ್ಟಣ ಲೇಹ್‌ನಬಳಿ ಇರುವ ಥಿಕ್ಸೆ ಮೊನಾಸ್ಟರಿಯಲ್ಲಿ ಉಳಿದುಕೊಂಡೆ. ಅದೊಂದು ಬಹು ಪ್ರಾಚೀನ ಬೌದ್ಧ ವಿಹಾರ. ಅಲ್ಲಿ ವಿಪಾಸನಾ, ಧ್ಯಾನಗಳ ಜೊತೆಗೆ ಒಂದು ವಿಶಿಷ್ಟ ವಿದ್ಯೆಯನ್ನೂ ಕಲಿಯುವ ಅವಕಾಶವಿದೆ. ಅದು ಸ್ವಪ್ನಭೇದನ ವಿದ್ಯೆ. ಈ ವಿದ್ಯೆಯನ್ನು ಕರಗತಮಾಡಿಕೊಂಡವರು, ಯಾವುದೇ ವ್ಯಕ್ತಿಯ ಕನಸನ್ನು ಪ್ರವೇಶಿಸಿ ಆ ಕನಸಿನ ಲೋಕದ ಪ್ರಜೆಯಾಗುವುದು ಸಾಧ್ಯ. ಆರು ತಿಂಗಳುಗಳ ಕಾಲ ಬೌದ್ಧ ಭಿಕ್ಕು ರಿನ್‌ಪೋಛೆ ಅವರಿಂದ ನಾನು ಈ ವಿದ್ಯೆಯನ್ನು ಕಲಿತೆ. ಇಂದು ರಾತ್ರಿ ನಾನು ಈ ವಿಜ್ಞಾನಿಗಳಲ್ಲಿ ಪ್ರತಿಯೊಬ್ಬನ ಕನಸನ್ನೂ ಪ್ರವೇಶಿಸಿ ಅವನ ಅಂತರಂಗವನ್ನು ಪರಿಶೀಲಿಸಿ ಗುಟ್ಟನ್ನು ತಿಳಿಯುವ ಪ್ರಯತ್ನ ಮಾಡುವನಿದ್ದೇನೆ. ನಿನಗೆ ನನ್ನೊಂದಿಗೆ ಬರುವ ಇಷ್ಟವಿದ್ದರೆ ನಿನ್ನನ್ನೂ ನನ್ನ ಜೊತೆಯಲ್ಲಿ ಕರೆದೊಯ್ಯುವೆ. ಬರ್ತೀಯೇನು ಹೇಳು?'' ಅಂತ ಪ್ರಶ್ನಿಸಿದ

ಶರಲೇಖ. ನನಗೋ ಒಂದು ಕಡೆ ಗಾಬರಿ, ಇನ್ನೊಂದು ಕಡೆ ಕುತೂಹಲ. ಕೊನೆಗೆ ಕುತೂಹಲವೇ ಗೆದ್ದಿತು. ''ಬರ್ತೀನಿ'' ಅಂತ ಹೇಳಿದೆ. ಶರಲೇಖ ತನ್ನ ಜೇಬಿನಿಂದ ಒಂದು ಪುಟಾಣಿ ಬುಗುರಿಯನ್ನು ತೆಗೆದ. ನೆಲ್ಲಿಕಾಯಿನಷ್ಟು ಗಾತ್ರವಿದ್ದ ಆ ಕಂಚಿನಿಂದ ಮಾಡಿದ್ದ ಬುಗುರಿಯನ್ನು ನನ್ನ ಕೈಗಿತ್ತು, ''ಇವತ್ತು ರಾತ್ರಿ ಮಲಗುವಾಗ ಈ ಬುಗುರಿಯನ್ನು ಬಲಗೈಲಿ ಹಿಡಿದು ಮಲಗು. ನಿನ್ನ ಕನಸನ್ನು ನಾನು ಪ್ರವೇಶಿಸಿ ನಿನ್ನ ಮುಷ್ಟಿ ಬಿಚ್ಚಿ ಬುಗುರಿಯನ್ನು ನೋಡಲು ಹೇಳುತ್ತೇನೆ. ಬುಗುರಿ ನಿನ್ನ ಕಣ್ಣಿಗೆ ಬಿದ್ದ ತಕ್ಷಣ ನಿನಗೆ ಇದು ಕನಸೆಂಬ ಅರಿವು ಬರುತ್ತದೆ. ಆಗ ನಾವಿಬ್ಬರು ಮಿಕ್ಕವರ ಕನಸುಗಳನ್ನು ಪ್ರವೇಶಿಸಿ ಅವರ ಕನಸುಗಳನ್ನು ವೀಕ್ಷಿಸುವಾಗ ಆ ಲೋಕದಲ್ಲೇ ಮುಳುಗದೇ ಸಾಕ್ಷೀಭಾವದಿಂದ ನೋಡುವುದು ಸಾಧ್ಯವಾಗುತ್ತದೆ. ಒಂದು ಎಚ್ಚರಿಕೆ. ಯಾವಕಾರಣಕ್ಕೂ ಬುಗುರಿಯನ್ನು ಕೈಯಿಂದ ಬಿಡಬೇಡ. ಬೇರೆಯವರ ಕನಸಿನಿಂದ ಎಚ್ಚರಗೊಳ್ಳುವುದು ನಿನ್ನ ಕನಸಿನಿಂದ ಎಚ್ಚರಗೊಳ್ಳುವಷ್ಟು ಸುಲಭವಲ್ಲ'' ಎಂದ ಶರಲೇಖ.

ರಾತ್ರಿ ಬುಗುರಿ ಹಿಡಿದು ಮಲಗಿದಾಗ ಸ್ವಲ್ಪ ಹೊತ್ತು ಆತಂಕದಿಂದ ನಿದ್ರೆ ಬರಲಿಲ್ಲ. ಆಮೇಲೆ ಯಾವ ಮಾಯದಿಂದಲೋ ಮಲಗಿದೆ ಅಂತ ಕಾಣುತ್ತೆ. ಎಚ್ಚರವಾದಾಗ ನಾನು ಒಂದು ಪರೀಕ್ಷೆ ಹಾಲ್‌ನಲ್ಲಿ ಕುಳಿತಿದ್ದೆ. ದೂರದಿಂದ ಇನ್ವಿಜಿಲೇಟರ್ ಪ್ರಶ್ನೆ ಪತ್ರಿಕೆಗಳನ್ನು ಹಿಡಿದು ಬರುತ್ತಿದ್ದರು. ಅವತ್ತಿನ ಪರೀಕ್ಷೆ ಯಾವ ವಿಷಯದ್ದು ಎಂಬುದೇ ಮರೆತುಹೋಗಿತ್ತು. ಎಷ್ಟು ಪ್ರಯತ್ನಪಟ್ಟರೂ ವಿಷಯವೇ ನೆನಪಿಗೆ ಬರಲೊಲ್ಲದು. ಇನ್ನು ಪರೀಕ್ಷೆಗೆ ಬರೆದಹಾಗೆಯೇ ಅಂತ ಅತೀವ ಗಾಬರಿ. ಅಷ್ಟರಲ್ಲಿ ಪಕ್ಕದಲ್ಲಿ ಕುಳಿತ ವಿದ್ಯಾರ್ಥಿ ಏನನ್ನೋ ಪಿಸುಗುಟ್ಟಿದ. ನನಗೋ ಮೊದಲೇ ಪರೀಕ್ಷೆ ಆತಂಕ. ''ಏನು ಹಾಗೆ ಪಿಸುಗುಟ್ಟುತ್ತೀಯಾ, ಜೋರಾಗಿ ಬೊಗಳು'' ಅಂತ ರೇಗಿದೆ. ಆತ ''ಮುಷ್ಟಿ ಬಿಚ್ಚಿ ನೋಡು'' ಅಂತ ಹೇಳಿದ. ಮುಷ್ಟಿ ಬಿಚ್ಚಿ ನೋಡಿದೆ. ಕಂಚಿನ ಬುಗುರಿ! ತಕ್ಷಣ ಪಕ್ಕಕ್ಕೆ ತಿರುಗಿ ನೋಡಿದೆ ಶರಲೇಖ ಕೂತಿದ್ದ. ನನ್ನನ್ನು ನೋಡಿ ''ಬಾ, ಈಗ ಮೊದಲು ಧರ್ಮರಾಜನ ಕನಸನ್ನು ಪ್ರವೇಶಿಸೋಣ'' ಎನುತ್ತಾ ಕೈ ಹಿಡಿದ.


ಪರೀಕ್ಷೆ ಹಾಲ್ ತಕ್ಷಣ ಮಾಯವಾಯಿತು. ಯಾವುದೋ ಬೆಟ್ಟಗುಡ್ಡಗಳ ಮೇಲೆ ನಾವಿಬ್ಬರೂ ಬೇಗ ಬೇಗ ನಡೆಯುತ್ತಿದ್ದೆವು. ಅಷ್ಟರಲ್ಲಿ ನಮ್ಮ ಮುಂದೆ ಧರ್ಮರಾಜ ಕಾಣಿಸಿದ. ಆತ ತೀವ್ರ ಆತಂಕದಲ್ಲಿದ್ದಂತೆ ಕಂಡಿತು. ನಮ್ಮನ್ನು ನೋಡಿದ ತಕ್ಷಣ ''ನೀವು ಯಾರಾದರೂ ನನ್ನ ಕಾರ್ ನೋಡಿದಿರಾ? ಬಿಳೀ ಬಣ್ಣದ ಟೊಯಟಾ ಕಾರು. ಇಲ್ಲೇ ನಿಲ್ಲಿಸಿದ್ದೆ. ಈಗ ನೋಡಿದರೆ ಅದು ಮಂಗಮಾಯ. ಪೋಲೀಸರಿಗೆ ಹೇಳೋಣ ಅಂದರೆ ಅದರ ನಂಬರ್ ಸಹಾ ಮರೆತು ಹೋಗಿದೆ'' ಅಂತ ಹಲುಬಿದ. ಶರಲೇಖ ಅವನತ್ತ ತಿರುಗಿ ಗಡುಸಿನ ಕಂಠದಿಂದ ''ಕಾರ್ ಇರಲಿ, ನಿಯಂತ್ರಣ ವ್ಯವಸ್ಥೆ ಮಾರಾಟಕ್ಕೆ ಎಷ್ಟು ದುಡ್ಡು ಬಂತು ಅಂತ ಹೇಳು?'' ಅಂತ ಗದರಿಸಿದ. ಧರ್ಮರಾಜ ''ಯಾವ ನಿಯಂತ್ರಣ? ನನ್ನ ಕಾರು, ನನ್ನ ಕಾರು'' ಎನ್ನುತ್ತಾ ನಮ್ಮಿಂದ ದೂರ ಸರಿದ. ಶರಲೇಖ ''ಅವನ ಕನಸೇ ಅವನಿಗೆ ಮುಖ್ಯ. ಹಾಗಾಗಿ ಇವ ನಿರ್ದೋಷಿ, ಆಗ ಭೀಮನತ್ತ ಸಾಗೋಣ'' ಎಂದ.

ತಕ್ಷಣ ನಾವುಗಳು ಒಂದು ದೋಣಿಯಲ್ಲಿ ಸಾಗುತ್ತಿದ್ದೆವು. ಹುಟ್ಟುಹಾಕುವ ದೋಣಿ ಅದು. ಭೀಮ ಮುಂದೆ ಕುಳಿತು ಹುಟ್ಟು ಹಾಕುತ್ತಿದ್ದ. ಹಿಂದಿನಿಂದ ಪೋಲೀಸ್ ದೋಣಿಯೊಂದು ನಮ್ಮನ್ನು ಅಟ್ಟಿಸಿಕೊಂಡು ಬರುತ್ತಿತ್ತು. ಭೀಮ ಎಷ್ಟು ಜೋರಾಗಿ ಹುಟ್ಟುಹಾಕಿದರೂ ದೋಣಿ ಮುಂದೆ ಸಾಗುತ್ತಲೇ ಇರಲಿಲ್ಲ. ಹಿಂದಿನ ದೋಣಿ ಹತ್ತಿರ ಹತ್ತಿರ ಬರುತ್ತಿತ್ತು. ಶರಲೇಖ, ''ಹಿಂದಿನ ದೋಣಿಯಲ್ಲಿರುವ ಪೋಲೀಸರಿಗೆ ನಿಯಂತ್ರಣ ವಿನ್ಯಾಸ ಮಾರಿದ್ದೆಲ್ಲಾ ತಿಳಿದಿದೆ'' ಅಂತ ಹೇಳಿದ. ಭೀಮ, ''ನಿಮ್ಮ ಮಾತು ಅರ್ಥವೇ ಆಗ್ತಾ ಇಲ್ಲ. ಆವರು ಬರ್ತಿರೋದು ನಾನು ಪರೀಕ್ಷೇಲಿ ಕಾಪಿ ಮಾಡಿದ್ದಕ್ಕೆ. ಈಗ ಅವರು ನನ್ನನ್ನ ಹಿಡಿದರೆ ಪುನಃ ಪರೀಕ್ಷೆಗೆ ಕೂತ್ಕೋ ಬೇಕು'' ಅಂತ ಹೇಳುತ್ತಾ ಅಳುಕ್ಕೇ ಪ್ರಾರಂಭಿಸಿದ. ಶರಲೇಖ ''ಮುಂದೆ ಸಾಗೋಣ. ಇಲ್ಲಿ ಪ್ರಯೋಜನ ಇಲ್ಲ'' ಎಂದು ಹೇಳಿದ ತಕ್ಷಣ ನಾವು ಆಗಸದಲ್ಲಿ ಹಾರುತ್ತಿದ್ದೆವು, ಅಲ್ಲ, ಅಲ್ಲ, ಬೀಳುತ್ತಿದ್ದೆವು. ನನ್ನ ಬಲ ಪಕ್ಕದಲ್ಲಿ ಶರಲೇಖ ಎಡ ಪಕ್ಕದಲ್ಲಿ ಕರ್ಣ. ಮೂವರೂ ಒಂದೇ ರಭಸದಲ್ಲಿ ನೆಲದತ್ತ ಸಾಗಿದ್ದೆವು. ಶರಲೇಖ ಕರ್ಣನನ್ನು ಕುರಿತು, ''ನಿಯಂತ್ರಣ ವ್ಯವಸ್ಥೆಯ ಮಾರಾಟದ ಬಗ್ಗೆ ಎಲ್ಲಾ ತಿಳಿದಿದೆ. ನೀನು ನಿಜ ಹೇಳಿದರೆ ಬೀಳುವುದನ್ನು ನಿಲ್ಲಿಸಬಲ್ಲೆ'' ಅಂತ ಹೇಳಿದ. ತಕ್ಷಣ ನಾವೆಲ್ಲಾ ನೆಲದ ಮೇಲಿದ್ದೆವು. ಕರ್ಣನ ಮುಖ ವಿವರ್ಣವಾಗಿತ್ತು. ''ನೀನು ಯಾರು? ನನ್ನ ಹಾದಿಗೆ ಅಡ್ಡ ಬರಲು ನಿನಗೇನು ಅಧಿಕಾರ?'' ಅಂತ ಕೂಗಲು ಪ್ರಾರಂಭಿಸಿದ. ತಕ್ಷಣ ಜೋರಾಗಿ ಮಳೆ ಬರಲು ಪ್ರಾರಂಭವಾಯಿತು. ಕರ್ಣ ಎಲ್ಲಿಂದಲೋ ಛತ್ರಿಯೊಂದನ್ನು ಹೊರತೆಗೆದು ಬಿಚ್ಚಿದ. ಅದೊಂದು ರಂಗು ರಂಗಿನ ಛತ್ರಿ. ಶರಲೇಖ ನನ್ನನ್ನು ಕುರಿತು, ''ಇಲ್ಲಿ ನಮ್ಮ ಕೆಲಸ ಮುಗಿಯಿತು. ಇನ್ನು ನಿನ್ನ ಕನಸಿಗೆ ನಿನ್ನನ್ನು ಬಿಟ್ಟು ನಾನು ಹೋಗುವೆ'' ಅಂತ ಹೇಳಿದ ನಂತರ ನಾನು ಪುನಃ ನನ್ನ ಪರೀಕ್ಷೆ ಹಾಲ್‌ನಲ್ಲಿದ್ದೆ. ನಿದ್ರೆ ಸಾಕು ಎನಿಸಿ ಎಚ್ಚರಗೊಂಡಾಗ ಬೆಳಕು ಹರಿದಿತ್ತು. ಹೊರಗೆ ಜೋರಾಗಿ ಮಳೆ. ನಾನು ಎದ್ದು ಕಾಟೇಜಿನ ವೆರಾಂಡಾಗೆ ಬಂದಾಗ ಅಲ್ಲಿ ದ್ರೋಣ ಮತ್ತು ಶರಲೇಖ ಆಗಲೇ ಕುಳಿತಿದ್ದರು. ಪಕ್ಕದ ಮೇಜಿನ ಮೇಲೆ ಹಬೆಯಾಡುತ್ತಿದ್ದ ಕಾಫಿ ಕಪ್ಪುಗಳು ಆಹ್ವಾನಿಸುತ್ತಿದ್ದವು. ನಾನೊಂದು ಕಪ್ಪನ್ನು ಹಿಡಿದು ಅವರೊಂದಿಗೆ ಕುಳಿತೆ. ಮಳೆ ಸುರಿಯುತ್ತಲೇ ಇತ್ತು. ಪಕ್ಕದ ಕಾಟೇಜಿನಿಂದ ವಿಜ್ಞಾನಿಗಳು ಛತ್ರಿಗಳನ್ನು ಹಿಡಿದು ಡೈನಿಂಗ್ ಹಾಲಿನತ್ತ ಬೆಳಗಿನ ಉಪಹಾರಕ್ಕೆ ಸಾಲಾಗಿ ಹೊರಟಿದ್ದರು. ಮುಂಚೂಣಿಯಲ್ಲಿದ್ದ ಕರ್ಣನ ಕೈಯಲ್ಲಿ ವರ್ಣರಂಜಿತ ಛತ್ರಿಯೊಂದು ರಾರಾಜಿಸುತ್ತಿತ್ತು!

ಮಳೆಯ ಪರದೆಯ ಮೂಲಕ ಪಶ್ಚಿಮ ಘಟ್ಟಗಳ ನಿಸರ್ಗ ಸೌಂದರ್ಯವನ್ನು ಸವಿಯುತ್ತಾ ನಾವು ಮೂವರೂ ಮಂತ್ರಮುಗ್ಧರಾಗಿ ಕುಳಿತಿದ್ದೆವು. ಸ್ವಲ್ಪ ಹೊತ್ತಿನ ಬಳಿಕ ವಿಜ್ಞಾನಿಗಳು ಉಪಹಾರ ಮುಗಿಸಿ ತಮ್ಮ ಕುಟೀರಕ್ಕೆ ಹಿಂತಿರುಗುತ್ತಿದ್ದರು. ವರ್ಣರಂಜಿತ ಛತ್ರಿ ಮತ್ತು ಅದರ ಒಡೆಯ ಮಾತ್ರ ಕಾಣಲಿಲ್ಲ. ಶರಲೇಖ ದ್ರೋಣರತ್ತ ಪ್ರಶ್ನಾರ್ಥಕ ದೃಷ್ಟಿ ಹಾಯಿಸಿದ. ''ಕರ್ಣರು ಶಲ್ಯರ ರಥದಲ್ಲಿ ಪ್ರಯಾಣ ಬೆಳೆಸಿರಬಹುದು'' ಎಂದು ಹೇಳಿ ನಸು ನಕ್ಕರು.

❑

ಪುಸ್ತಕ ಪರಿಚಯ




# ಪೊಲೀಸ್ ಎನ್ ಕೌಂಟರ್

**- ಡಾ. ಡಿ.ವಿ. ಗುರುಪ್ರಸಾದ್**

(ಸುಂದರ ಪ್ರಕಾಶನ, ಬೆಲೆ: ರೂ.195/-)

ಗರಿ ಗರಿಯಾದ ಸಮವಸ್ತ್ರ ತೊಟ್ಟು, ಮಿರುಗುವ ಬೆಲ್ಟ್ ಬೂಟುಗಳನ್ನು ಏರಿಸಿ, ಕೈನಲ್ಲಿ ಬಂದೂಕವನ್ನೋ ಲಾಠಿಯನ್ನೋ ಹಿಡಿದು ನಿಂತಿರುವ ಒಬ್ಬ ಪೊಲೀಸ್ ಅಧಿಕಾರಿಯನ್ನು ಸಮಾಜ ಯಾವ ರೀತಿಯಲ್ಲಿ ಕಾಣುತ್ತದೆ? ನಮ್ಮ ಸಮಾಜದ ಒಂದು ವರ್ಗ-ಅಸಹಾಯಕ ವರ್ಗ. ಈ ವರ್ಗ ಹಣವಿಲ್ಲದ, ದುರ್ಬಲವಾದ, ಯಾವ ರಾಜಕೀಯ ಅಥವಾ ಗಣ್ಯ ವ್ಯಕ್ತಿಗಳ ಸಹಾಯವಿಲ್ಲದೆ, ತಮ್ಮ ಮೇಲೆ ಇತರರು ಎಸಗುವ ಅತ್ಯಾಚಾರ, ಹಲ್ಲೆ, ಕೊಲೆ-ಇವನ್ನು ಎದುರು ಹಾಕಿಕೊಳ್ಳಲಾಗದ ಶಕ್ತಿಹೀನ ವರ್ಗ. ಈ ವರ್ಗದವರಿಗೆ ಒಬ್ಬ ಪೊಲೀಸ್ ಅಧಿಕಾರಿ ದೇವರ ಸಮಾನ! ಮತ್ತೊಂದು ವರ್ಗವಿದೆ. ಈ ವರ್ಗದವರು ಒಬ್ಬ ಪೊಲೀಸ್ ಅಧಿಕಾರಿ ಜವಾಬ್ದಾರಿಯುತ, ಸಮಾಜ ರಕ್ಷಣೆಗೆಂದು ತನ್ನ ಜೀವನವನ್ನೇ ಮುಡಿಪಾಗಿಟ್ಟಿರುವ ವ್ಯಕ್ತಿ ಎಂಬ ಅರಿವಿದ್ದರೂ, ಆ ಅಧಿಕಾರಿಯ ದಕ್ಷತೆಯ ಬಗ್ಗೆ, ಆತನ ಪ್ರಾಮಾಣಿಕತೆಯ ಬಗ್ಗೆ, ಸಂದೇಹವುಳ್ಳವರಾಗಿದ್ದು, ಸಂದಿಗ್ಧ ಪರಿಸ್ಥಿತಿಯಲ್ಲಿ, ಬೇರಾವ ಮಾರ್ಗವೂ ತೋರದಿದ್ದಾಗ, ಪೊಲೀಸರ ಮೊರೆ ಹೋಗುವವರು! ಮತ್ತೊಂದು ವರ್ಗ: ರಾಜಕಾರಣಿಗಳು, ''ಗಣ್ಯ ವ್ಯಕ್ತಿ''ಗಳು, ನಮ್ಮ ಸಮಾಜವನ್ನು ಒಳಗಿನಿಂದಲೇ ನುಂಗು ಹಾಕುತ್ತಿರುವ ಪ್ರಭಾವಿತರ ವರ್ಗ. ಈ ವರ್ಗದವರಿಗೆ ಪೊಲೀಸರು ಆಟದ ಬೊಂಬೆಗಳಷ್ಟೇ! ಇಂತಹ ಪರಿಸರದಲ್ಲಿ, ಒಬ್ಬ ಪೊಲೀಸ್ ಅಧಿಕಾರಿಯಾಗಲೀ ಅಥವಾ ಒಬ್ಬ ಕೆಳಗಿನ ಪೇದೆಯೇ ಆಗಲೀ ಯಾವ ರೀತಿಯಲ್ಲಿ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬಹುದು? ಇದೊಂದು ಮಾನಸಿಕ, ದೈಹಿಕ, ವೃತ್ತಿಪರ ಒತ್ತಡಗಳಿಂದ ಕೂಡಿರುವ ಸಮಸ್ಯೆ-ಉತ್ತರವೂ ಬಹು ಕ್ಲಿಷ್ಟವಾದದ್ದೇ! ಕಾರಣ? ಪೊಲೀಸ್ ಅಧಿಕಾರಿ ಆತನ ಸಮವಸ್ತ್ರದ ಒಳಗೆ ನಮ್ಮಂತೆಯೇ ಒಬ್ಬ ಮನುಷ್ಯನಲ್ಲವೆ?

ಡಾ. ಗುರುಪ್ರಸಾದ್ ಅವರ ''ಪೊಲೀಸ್ ಎನ್ ಕೌಂಟರ್'' ಕಾದಂಬರಿಯನ್ನು ಓದಿ ಮುಗಿಸಿದಾಗ ಕಾದಂಬರಿಯ ಶೀರ್ಷಿಕೆಯೇ ನಮಗೆ ದ್ವಂದ್ವ ಅರ್ಥಗಳನ್ನು ಸೂಚಿಸುತ್ತದೆ. ಓದುಗನೇ ಪೊಲೀಸಿನವರ ವ್ಯಕ್ತಿತ್ವಗಳೊಂದಿಗೆ (ಅಪರೂಪವಾಗಿ) ಮಾಡುವ 'ಎನ್ ಕೌಂಟರ್'' ಒಂದಾದರೆ, ಮತ್ತೊಂದು ಪೊಲೀಸರು ವೃತ್ತಿಪರವಾಗಿ ಭೂಗತ ಪಾತಕಿಗಳೊಡನೆ ಸರ್ವೇಸಾಧಾರಣವಾಗಿ ನಡೆಸುವ ''ಎನ್ ಕೌಂಟರ್'' ನಮ್ಮ ಸಮಾಜದ ಭದ್ರತೆಗೆ ಹಾಗೂ ಶಾಂತಿಯುತ ನೆಮ್ಮದಿಯ ಜೀವನಕ್ಕೆ ನಾವು ಪೊಲೀಸರನ್ನು ಮೊರೆಹೋಗಿರುವುದಂತೂ ನಿಜ. ಆದರೆ ಅವರ ಅಂತರಾಳವನ್ನು ನಾವು ಎಂದಾದರೂ

ಹೊಕ್ಕಿ ನೋಡಿದ್ದೇವೆಯೆ? ಒಂದು ಭಯಾನಕ ಪರಿಸ್ಥಿತಿಯಲ್ಲಿ, ಶಾಂತಿಯ ಪ್ರತೀಕವೋ ಎಂಬಂತೆ. ಸಂಯಮದಿಂದ, ಅಧಿಕಾರದ ದರ್ಪದಿಂದ, ಘಟನೆಗಳನ್ನು ಹತೋಟಿಗೆ ತರುವ ಆ ಅಧಿಕಾರಿಯ ಮನಸ್ಸಿನಲ್ಲಿ ಆತನದೇ ವೈಯಕ್ತಿಕ ತಳಮಳಗಳು ಏನಿದ್ದಾವು? ಆತನ ನಿಲುವು ತಾನೇ ಯಾವ ಕಡೆ ವಾಲುತ್ತದೆ? ಕಾನೂನು ರಕ್ಷಣೆಗೆ ಪಣ ತೊಟ್ಟು ನಿಂತಿರುವ ಆತ ಕಾನೂನಿನ ಕಡೆ ನಿಷ್ಪಕ್ಷಪಾತನಾಗಿ, ದೃಢವಾಗಿ ನಿಲ್ಲುತ್ತಾನೆಯೇ? ಅಥವಾ ಕೆಲವು ''ಗಣ್ಯವ್ಯಕ್ತಿ''ಗಳ (ಅವನ ಹಿರಿಯ ಅಧಿಕಾರಿಗಳೂ ಸೇರಿ!) ಭ್ರಷ್ಟಾಚಾರದ ಬಲೆಗೆ ತನ್ನ ಕೈ ಚಾಚುತ್ತಾನೆಯೇ? ಕಾದಂಬರಿ ಕೇವಲ ಒಂದು ಕಾಲ್ಪನಿಕ ಕೃತಿ ಎಂದು ಗುರುಪ್ರಸಾದ್ ತಮ್ಮ ಮುನ್ನುಡಿಯಲ್ಲಿ ಒತ್ತಿ ಹೇಳಿದ್ದಾರೆ. ಆದರೆ ಒಬ್ಬ ಸಾಮಾನ್ಯ ಓದುಗನಿಗೆ ಕಥೆಯಲ್ಲಿ ಮೂಡಿಬರುವ ಘಟನೆಗಳು ವಾಸ್ತವ ರೂಪಗಳನ್ನೇ ಪಡೆಯುತ್ತವೆ. ಇದಕ್ಕೆ ಕಾರಣ: ಸ್ವತಃ ಒಬ್ಬ ಪೊಲೀಸ್ ಅಧಿಕಾರಿಯಾಗಿದ್ದು ವೃತ್ತಿ ಪರವಾಗಿ ನಾನಾ ಬಗೆಗಳ ಅನುಭವಗಳನ್ನು ಪಡೆದಿರುವ ಗುರುಪ್ರಸಾದ್ ಅವರ ಬರವಣಿಗೆಯಲ್ಲಿ ಘಟನೆಗಳ ಬಗ್ಗೆ, ವ್ಯಕ್ತಿಗಳ ಬಗ್ಗೆ ಒಂದು ರೀತಿಯ ನೈಜಕತೆಯನ್ನಂತೂ ಕಾಣಬಹುದು. ಕಥೆಯಲ್ಲಿ ಬಂದು ಹೋಗುವ ಪೊಲೀಸರು (ಅಧಿಕಾರಿಗಳೂ ಇತರೇ ವರ್ಗದವರೂ ಸೇರಿ), ಭೂಗತ ಪಾತಕಿಗಳು, ಪೊಲೀಸ್ ಇಲಾಖೆಯನ್ನೇ ಕೈನಲ್ಲಿ ಇಟ್ಟುಕೊಂಡಿರುವ ಕೆಲವು ಧುರೀಣರು, ಸಮಾಜಘಾತಕರು- ಇವರೆಲ್ಲರೂ ನಮಗೆ ಅಪರಿಚಿತರೇನಲ್ಲ. ನಮ್ಮ ದೈನಂದಿನ ಜೀವನದಲ್ಲಿ ಅವರೆಲ್ಲರೂ ನಮ್ಮ ಬಳಿಯಲ್ಲಿ ಇರುವವರೇ! ಆದರೂ ಕನ್ನಡದ ಓದುಗರಿಗೆ ಇದೊಂದು ಅಪರೂಪದ ಓದಬಹುದಾದ ಪುಸ್ತಕ. ಏಕೆಂದರೆ ಪೊಲೀಸಿನವರ ಬಗ್ಗೆ ಗುರುಪ್ರಸಾದ್ ಚಿತ್ರಿಸಿರುವ ವೃತ್ತಿಪರ ವಿವರಗಳು ಸಾಧಾರಣ ಜನತೆಗೆ ತಿಳಿದಿರಲಾರದು ಎಂದರೆ ತಪ್ಪಾಗಲಾರದು. ಈ ವಿವರಗಳ ವ್ಯಾಪ್ತಿಯಲ್ಲಿ ಪೊಲೀಸ್ ವೃತ್ತಿಗೆ ಆಯ್ಕೆಯಾಗುವ, ನಂತರ ಪಡೆಯುವ ತರಬೇತಿಗಳ ಬಗ್ಗೆ ಅಪೂರ್ವ ಮಾಹಿತಿಗಳಿವೆ. ಒಬ್ಬ ಅಧಿಕಾರಿ ತನ್ನ ವೃತ್ತಿ ಜೀವನವನ್ನು ವರ್ಗಾಯಿಸಿದ ಯಾವುದೋ ಒಂದು ಠಾಣೆಯಲ್ಲಿ ನೈತಿಕ ಸ್ಥಿತಿಯನ್ನು ಎದುರಿಸುವ ಪರಿಸ್ಥಿತಿಗಳ ಚಿತ್ರಣಗಳಿವೆ. ಪೋಲಿಸರ ಸಹಾಯ ಯಾಚಿಸಲು ಬರುವ ನತದೃಷ್ಟರು, ಕಳ್ಳರು, ಮಾಹಿತಿದಾರರು, ಹಿರಿಯ ಅಧಿಕಾರಿಗಳು, ಪೊಲೀಸರನ್ನೇ ಕೊಳ್ಳಲು ಬರುವ ಊರಿನ ''ಶ್ರೀಮಂತರು'' ದೂರದ ಮುಖ್ಯ ಕಛೇರಿಯಿಂದಲೇ ಹಕ್ಕು ಚಲಾಯಿಸುವ ಇಲಾಖೆಯ ಮುಖ್ಯಸ್ಥರು-ಇವರೆಲ್ಲರೂ ಸೇರಿದ್ದಾರೆ.

ಈ ಕಾದಂಬರಿಯಲ್ಲಿ, ಗುರುಪ್ರಸಾದ್ ಅವರು ಲತಾ, ಸೂರ್ಯಕಿರಣ, ಸ್ಟಾನ್ಲಿ ಜೋಸೆಫ್, ಎಸ್.ಪಿ. ಕುಮಾರ್, ರಾಜೇಂದ್ರ ಸಿಂಗ್, ಭೂಗತ ಪಾತಕಿ ಕಾಸಿಂ ಖಾನ್, ಸಚಿವರೊಬ್ಬರು, ಅಸಹಾಯಕ ಹೆಣ್ಣು ಅವಳ ಮಗಳು-ಇಂತಹ ಕಾಲ್ಪನಿಕ ವ್ಯಕ್ತಿಗಳ ಸುತ್ತಲೂ ತಮ್ಮ ಕಥೆಯನ್ನು ಹೆಣೆದಿದ್ದಾರೆ. ಈ ಪಾತ್ರಗಳು ಓದುಗನನ್ನು ಪೊಲೀಸರ ''ಒಳ ಪ್ರಪಂಚ''ಕ್ಕೆ ಕೊಂಡೊಯ್ಯುತ್ತದೆ. ಇಲಾಖೆಯಲ್ಲಿ ಕಾನೂನು ಬದ್ಧವಾಗಿ, ಅತ್ಯಂತ ಪ್ರಾಮಾಣಿಕವಾಗಿ, ಜನರ ಸೇವೆಗೆ ತಮ್ಮನ್ನು ಮುಡಿಪಾಗಿಟ್ಟುಕೊಂಡಿರುವ ಪೊಲೀಸ್


ಅಧಿಕಾರಿಗಳನ್ನೂ ಸೃಷ್ಟಿಸಿದ್ದಾರೆ. ಇದು ಪೊಲೀಸರ ಪ್ರಾಮಾಣಿಕತೆಯ ಬಗ್ಗೆ ಅನೇಕರು ಕಲ್ಪಿಸಿಕೊಂಡಿರುವ ಸಂಶಯಗಳನ್ನು ನಿವಾರಿಸುವ ಪ್ರಯತ್ನವೆಂದೂ ಹೇಳಬಹುದು. ಅಂತಹ ಓದುಗರಿಗೆ ಈ ಕಾದಂಬರಿ ಆಶಾಭಾವನೆಯನ್ನು ಮೂಡಿಸುತ್ತದೆ. ಗುರುಪ್ರಸಾದ್ ಅವರದು ಬರವಣಿಗೆಯಲ್ಲಿ ಎತ್ತಿದ ಕೈ. ಸುಮಾರು 45 ಪುಸ್ತಕಗಳನ್ನು ಪ್ರಕಟಿಸಿರುವ ಹೆಮ್ಮೆ ಅವರದಾಗಿದೆ. ಇಂಗ್ಲೀಷ್, ಕನ್ನಡದಲ್ಲಿ 700ಕ್ಕೂ ಹೆಚ್ಚು ಲೇಖನಗಳನ್ನು ನಿಯತಕಾಲಿಕೆಗಳಲ್ಲಿ ಬರೆದಿದ್ದಾರೆ. ಇವಲ್ಲಿ ಪೊಲೀಸ್, ಕಾನೂನು, ಭದ್ರತೆ, ಪ್ರವಾಸ, ಹಾಸ್ಯ ('ಅಪರಂಜಿ'ಯ ಬರಹಗಳೂ ಸೇರಿ) –ಹೀಗೆ ಎಲ್ಲಾ ಪ್ರಾಕಾರಗಳೂ ಇವೆ. ಹಾಗಾಗಿ, ''ಪೊಲೀಸ್ ಎನ್ ಕೌಂಟರ್'' ಕನ್ನಡದ ಓದುಗನಿಗೆ ಒಂದು ಉತ್ತಮ ಕೊಡುಗೆ, ಗನ್ ಹಿಡಿಯುವ ಕೈನಲ್ಲಿ ಪೆನ್ ಹಿಡಿದರೂ ಸರಿ, ಇದೊಂದು ಸಾರ್ಥಕ ಸಾಧನೆ ಎಂದು ಹೇಳಬಹುದಾದ ಕಾದಂಬರಿ!

**– ಸಿ.ಆರ್. ಸತ್ಯ**

---

**ದಸರಾ ವಿಶೇಷ**

ಮುಮ್ಮಡಿ ಕೃಷ್ಣರಾಜ ಒಡೆಯರು ಕಾಳಿದಾಸ ಮಹಾಕವಿಯ ಶಾಕುಂತಲವನ್ನು ಕನ್ನಡಕ್ಕೆ ಅನುವಾದ ಮಾಡಿದರು. ಈ ನಾಟಕಕ್ಕೆ ಅದರ ಮೂರು ಪಟ್ಟು ವ್ಯಾಖ್ಯಾನ ಬರೆದು. ರತ್ನಾವಳಿ ನಾಟಕವನ್ನು ವತ್ಸರಾಜ ಕಥ ಎಂದು ಬರೆದು. ಅವರು ಹಲವು ಹಳೆಯ ತಾಳೇಗರಿ ಗ್ರಂಥಗಳನ್ನು ಸಂಶೋಧಿಸಿ, ಪರಿಷ್ಕರಿಸಿ ಬರೆದು ಪ್ರಕಟಿಸಿದರು. ಅವರಿಗೆ ಸಾಹಿತ್ಯಾಭಿರುಚಿ ಹೆಚ್ಚಿತ್ತು. ಭಾರತ, ಭಾಗವತ, ರಾಮಾಯಣಗಳ ಕನ್ನಡ ಅನುವಾದಗಳನ್ನು ತಾವೂ ಮಾಡಿ ಇತರ ಪಂಡಿತರಿಂದಲೂ ಮಾಡಿಸಿದರು. ಕನ್ನಡದಲ್ಲಿ ಪಂಚತಂತ್ರದ ಕಥೆಗಳನ್ನು ಬರೆದರು. ಕೃಷ್ಣಕಥಾ ಸಂಗ್ರಹ, ರಾಮಾವತಾರದ ಕಥೆ ಇವರ ವಿಶಿಷ್ಟ ಕೃತಿಗಳಾಗಿವೆ. ಮೈಸೂರು ಒಡೆಯರ ಕಲೆಯ ಅರಮನೆ ಗೋಡೆಗಳು ಸಾಕ್ಷಿಯಾಗಿದ್ದರೆ ಅವರ ಕಲಾಪ್ರೇಮಕ್ಕೆ ಇಂದಿಗೂ ಸಾಕ್ಷಿಯಾಗಿ ಜಗನ್ಮೋಹನ ಕಲಾಶಾಲೆ ಪ್ರತ್ಯಕ್ಷವಾಗಿ ಉಳಿದಿದೆ. 1851ರಲ್ಲಿ ಕಲಾಕೃತಿಗಳ ಸಂಗ್ರಹ, ರಕ್ಷಣೆಗಳಿಗೆ ಈ ವಾಸ್ತುವನ್ನು ಕಟ್ಟಿಸಿದರು. ಅವರ ಕಾಲದ ಅತ್ಯುತ್ತಮ ವರ್ಣಚಿತ್ರಗಳನ್ನು ಇಲ್ಲಿ ಕಾಣಬಹುದು.




ಇತ್ತೀಚೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ 2012ನೇ ಸಾಲಿನ ಪುಸ್ತಕ ಬಹುಮಾನಗಳನ್ನು ಪ್ರಕಟಿಸಿದ್ದು, ಸಿ.ಆರ್. ಸತ್ಯ ಅವರಿಗೆ ಕನ್ನಡದಿಂದ ಇಂಗ್ಲಿಷ್ ಅನುವಾದಿತ ಕೃತಿ ವಿಭಾಗದಲ್ಲಿ ಅವರು ಅನುವಾದ ಮಾಡಿರುವ ಇಂಗ್ಲಿಷ್ ಪುಸ್ತಕ ''ಸೆಂಟಿನಲ್ಸ್ ಆಫ್ ಗ್ಲೋರಿ''ಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಿದೆ. ಈ ಪುಸ್ತಕ ಸತ್ಯ ಅವರೇ ಬರೆದಿರುವ ''ಅಳಿವಿಲ್ಲದ ಸ್ಥಾವರ'' ಎಂಬ ಕನ್ನಡದ ಸಂಶೋಧನ ಕೃತಿಯ ಇಂಗ್ಲಿಷ್ ರೂಪಾಂತರವಾಗಿದೆ. ಈ ಪುಸ್ತಕದಲ್ಲಿ ಸತ್ಯ ಅವರು ಕೇರಳದ ತಿರುವನಂತಪುರದಲ್ಲಿರುವ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಅನಂತಪದ್ಮನಾಭಸ್ವಾಮಿ ದೇವಸ್ಥಾನದ ನಿರ್ಮಿತ ವಸ್ತುವಾದ ಕಲ್ಲುಗಳ ಮೇಲೆ ಆಳವಾದ ಸಂಶೋಧನೆಯನ್ನು ನಡೆಸಿದ ರೋಚಕ ನಿರೂಪಣೆಯಿದೆ. ದೇಗುಲದ ನಿರ್ಮಾಣ ಹಂತಗಳು, ಅದನ್ನು ನಿರ್ಮಿಸಿದ ಕೇರಳದ ರಾಜಮನೆತನದವರು, ಕಲ್ಲುಗಳ ವೈಜ್ಞಾನಿಕ ವಿಶ್ಲೇಷಣೆ, ಅವುಗಳ ಮೂಲ ಗಣಿಗಳು, ಅವನ್ನು ರೂಪಿಸಿದ ಶಿಲ್ಪಿಗಳು, ತಾಂತ್ರಿಕ ರೀತಿನೀತಿಗಳು, ಅವರು ಉಪಯೋಗಿಸಿದ ಸಲಕರಣೆಗಳು, ನಿರ್ಮಾಣ ಕಾರ್ಯಗಳ ಕಾಲಾವಧಿಗಳು - ಹೀಗೆ, ವೈಜ್ಞಾನಿಕ ಹಾಗೂ ತಾಂತ್ರಿಕ ಹಿನ್ನಲೆಯಲ್ಲಿ ಮತ್ತು ಕೇರಳದ ಅನೇಕ ಪರಿಣತರ ಸಹಾಯದಿಂದ ಸತ್ಯ ಅವರು ಸಂಶೋಧನೆಯನ್ನು ಮಾಡಿ ಓದುಗರಿಗೆ ಕುತೂಹಲ ಮೂಡಿಸುವ ಪುಸ್ತಕವನ್ನು ಹೊರತಂದಿದ್ದಾರೆ. ''ಅಳಿವಿಲ್ಲದ ಸ್ಥಾವರ''ಕ್ಕೆ 2012ರಲ್ಲಿ ಕರ್ನಾಟಕ ಸಾಂಸ್ಕೃತಿಕ ಅಕಾಡೆಮಿ ''ಕರ್ನಾಟಕ ಭೂಷಣ'' ಪ್ರಶಸ್ತಿಯನ್ನು ಸತ್ಯ ಅವರಿಗೆ ನೀಡಿತ್ತು. ಈಗ ದೊರಕಿರುವ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯು ಸತ್ಯ ಅವರ ಬರವಣಿಗೆಗೆ ಮತ್ತಷ್ಟು ಹಿರಿಮೆ ತಂದಿದೆ. ನವೆಂಬರ್ 7ರಂದು ಧಾರವಾಡದಲ್ಲಿ ನಡೆಯಲಿರುವ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಅಮೆರಿಕನ್ನಡ ದತ್ತಿ ನಿಧಿ ಹಣದಿಂದ 5,000/-ರೂ ನಗದು, ಪ್ರಶಸ್ತಿ ಪತ್ರ, ಹಾಗೂ ಪುರಸ್ಕಾರ ನೀಡಲಾಗುತ್ತದೆ.

❑

**ದಸರಾ ವಿಶೇಷ**

ನವರಾತ್ರಿ ಉತ್ಸವವೆಂಬುದು ಮೈಸೂರು ಅರಸರಿಗೆ ವಿಜಯನಗರದ ಅರಸರು ಕೊಟ್ಟು ಒಂದು ಅಪೂರ್ವ ಬಳುವಳಿ. ಇದೊಂದು ಅರ್ಥಪೂರ್ಣ ಹಾಗೂ ಮಹತ್ವ ಪೂರ್ಣವಾದ ಧಾರ್ಮಿಕ ಪರ್ವ. ಸಾಂಸ್ಕೃತಿಕ ಹಬ್ಬ ಮೊದಲಿಗೆ ಇದನ್ನು ಆಚರಿಸಿದವರು ವಿಜಯನಗರದ ಅರಸರು. ಈ ಧಾರ್ಮಿಕ ಉತ್ಸವಕ್ಕೆ ಹೊಸ ಆಯಾಮವನ್ನೇ ಕೊಟ್ಟಿದ್ದರು. ಮಹಾರಾಜರು ಆನೆ ಅಂಬಾರಿಯಲ್ಲಿ ಕುಳಿತುಕೊಳ್ಳುವ ದಸರಾ ಕೊನೆಗೊಂಡಿದ್ದು 1970ರಲ್ಲಿ

# ಮಾಯಾ ಮಾರ್ಜಾಲ

**- ಎಂ.ಕೆ. ಭಾಸ್ಕರ ರಾವ್**

**ಬೆ**ಕ್ಕು ಅಡ್ಡ ಬಂತು, ತುಸು ಹೊತ್ತು ಕಾದು ಮುಂದಕ್ಕೆ ಹೋಗೋಣ..... ಇದು ಸಾಮಾನ್ಯವಾಗಿ ಕೇಳಿ ಬರೋ ಮಾತು. ಒಂಟಿ ಬ್ರಾಹ್ಮಣ ಎದುರಾದರೆ, ಬೆಕ್ಕು ಅಡ್ಡ ಹಾಯ್ದರೆ ಅಪಶಕುನ ಎಂಬ ನಂಬಿಕೆಯಲ್ಲಿ ಚಾಲ್ತಿಗೆ ಬಂದ ಮಾತು.

**ಬೆಕ್ಕು ಇರಬೇಕೋ ಬೇಡವೋ ಎಂಬುದರ ಬಗ್ಗೆ ಒಂದು ಸಿವಿಲ್ ವಾರ್ ನಮ್ಮ ಬಿಲ್ಡಿಂಗ್‌ನಲ್ಲಿ ಶುರುವಾಗಿದೆ.**

ಬೆಕ್ಕಿನ ಪುರಾಣಕ್ಕೆ ಹೋಗೋ ಮೊದಲು ಒಂಟಿ ಬ್ರಾಹ್ಮಣ ಕಥೆಯನ್ನು ಕೇಳಿ ಶ್ರವಣ ಭಾಗ್ಯ ಹೊಂದೋಣ. ತಿಥಿ, ಮಾಸಿಕ, ಪಿಂಡದಾನದಂಥ ಅಪರಕರ್ಮ ಮಾಡಿಸಲು ಹೋಗುವವರನ್ನು, ಸತ್ಯನಾರಾಯಣ ವ್ರತವನ್ನೋ, ಸತ್ಯಗಣಪತಿ ವ್ರತವನ್ನೋ, ಗಣಪತಿ, ಗೃಹಶಾಂತಿ ಹೋಮ ಹವನವನ್ನೋ, ಪಾರಾಯಣವನ್ನೋ ಮಾಡಿಸಲು ಸ್ಕೂಟರ್/ಬೈಕುಗಳಲ್ಲಿ ಧಾವಂತದಲ್ಲಿ ದೌಡಾಯಿಸುವವರನ್ನು ಅವರ ಹೊರ ವೇಷ ನೋಡಿಯೇ ಬ್ರಾಹ್ಮಣ ಎಂದು ಗುರುತಿಸಬಹುದು.

ಕೋರ್ಟು ಕಚೇರಿಗೆ ಹೋಗುವವರನ್ನು ಅವರು ಬ್ರಾಹ್ಮಣರೇ ಆಗಿದ್ದರೂ ಹೇಗೆ ಗುರುತಿಸುವುದು? ಅವರ ವೇಷ ಭೂಷಣ ಸುತ್ತಮುತ್ತ ಇರುವವರೆಲ್ಲರ ಹಾಗೇ ಇರುವುದರಿಂದ ಅವರು ಒಂಟಿಯಾಗಿ ಬಂದರೂ ಸೈ ಜಂಟಿಯಾಗಿ ಬಂದರೂ ಸೈ, ಅವರು ಬ್ರಾಹ್ಮಣರೆನ್ನಲು ಮೇಲ್ನೋಟಕ್ಕೆ ಸಾಬೀತಾಗುವ ಲಕ್ಷಣವಿರೋಲ್ಲ. ಹಾಗಾಗಿ ಅವರು ಎದುರಾದರೂ ಅದು ಅಪಶಕುನವಲ್ಲ! ಹಾಗೆಂದ ಮಾತ್ರಕ್ಕೆ ಎಲ್ಲರೂ ಹಾಗೆ ಭಾವಿಸುತ್ತಾರೆ ಎಂದೇನೂ ಇಲ್ಲ. ನಾನಿರುವ ಫ್ಲಾಟಿನಲ್ಲಿ ನನ್ನ ಪಕ್ಕದ್ದೇ ಮನೆಯಲ್ಲಿ ಒಂದು ಬ್ರಾಹ್ಮಣ ಕುಟುಂಬವಿದೆ. ಅವರು ಹೊರ ಹೊರಡುವುದಕ್ಕೂ ನಾನು ಬಾಗಿಲಿನಿಂದ ಹೊರ ಬೀಳುವುದಕ್ಕೂ ತಾಳೆಯಾಯಿತೆಂದರೆ ಅವರು ಅಂದು ಕಚೇರಿಗೆ ಲೇಟ್ ಎಂದೇ ಅರ್ಥ. ಏಕೆಂದರೆ ಅವರಿಗೆ ನಾನು ಬ್ರಾಹ್ಮಣ ಎಂಬುದು ಗೊತ್ತಿದೆ.

ನನ್ನನ್ನು ಕಂಡರೆ ಅವರು ಮತ್ತೆ ಮನೆಯೊಳಗೆ ಮುಖ ಊದಿಸಿಕೊಂಡು ತೂರಿಕೊಳ್ಳುತ್ತಾರೆ. ಒಂದೈದು ನಿಮಿಷ ಕುಳಿತು ಶಕುನ ಸರಿಯಾಯಿತೆನ್ನಿಸಿದ ಬಳಿಕ ಗಡಿಬಿಡಿಯಲ್ಲಿ ಹೊರ ಹೊರಡುತ್ತಾರೆ. ಅಂಥ ದಿವಸಗಳಲ್ಲೇ ಅದೃಷ್ಟ ಕೈಕೊಡುತ್ತದೆ. ಯಾವಾಗಲೂ ಸಮಯಕ್ಕೆ ಸರಿಯಾಗಿ ಬರದ ಬಿಎಂಟಿಸಿ ಅಂದೇ ಈ ಮಹಾಶಯ ಗಡಿಬಿಡಿಯಲ್ಲಿ ಹೊರಟ ದಿವಸವೇ ಕರೆಕ್ಟ್ ಟೈಮಿಗೆ ಹೋಗಿಬಿಟ್ಟಿರುತ್ತದೆ. ಇನ್ನೊಂದು ಬಸ್ ಕಾದು ಹೋಗೋ ಹೊತ್ತಿಗೆ ಬಾಸ್‌ನ ಕಣ್ಣು ಕೆಂಪಾಗಿರುತ್ತದೆ. ಈ ಇಪ್ಪತ್ತು ವರ್ಷದಲ್ಲಿ ಇದು ಪದೇ ಪದೇ ಎಂಬಂತೆ ಘಟಿಸಿದೆ.

ಉಳಿದಂತೆ ಪಕ್ಕದ ಮನೆಯಾತನಿಗೆ (ಇನ್ನು ಮುಂದೆ ಪ.ಮ. ಎನ್ನೋಣ) ನಾನು ಎಂದರೆ ಇಷ್ಟ. ನಾವು ಬಾಗಿಲು ತೆರೆಯುವುದಕ್ಕೆ ಮೊದಲೇ ನಮ್ಮ ಮನೆ ಮುಂದೆ ಬಿದ್ದ

ಪತ್ರಿಕೆಗಳನ್ನು ಒಯ್ದು ನೋಡಿ ಹಾಕಿರುತ್ತಾನೆ. ಆ ಮೂಲಕ ಪತ್ರಿಕೆ ಚಂದಾ ಉಳಿಸಿಕೊಳ್ಳುತ್ತಾನೆ. ನಮ್ಮ ಮನೆಗೆ ಬರುವ ವಾರ/ಮಾಸ ಪತ್ರಿಕೆಗಳನ್ನು ಪ.ಮ. ಮನೆಯಾಕೆ ನಮ್ಮಿಂದ ಪಡೆದು ನಾವು ಪರತ್ ಕೇಳುವವರೆಗೂ ಇಟ್ಟುಕೊಂಡು ಅಕ್ಷರ ಅಕ್ಷರವನ್ನೂ ಓದುತ್ತಾರೆ. ಆದರೆ ಕಚೇರಿಗೆ ಹೊರಡೋ ಸಮಯದಲ್ಲಿ ಮಾತ್ರ ನನ್ನ ಮುಸುಡಿ ಎಂದರೆ ಪ.ಮ.ಗೆ ಖುಲ್ಲಂಖುಲ್ಲಾ ಆಗದು.

ನನ್ನಿಂದಾಗುವ ಅಪಶಕುನದಿಂದ ಪಾರಾಗಲು ಅವರು ಇತ್ತೀಚೆಗೆ ಒಂದು ಪರಿಹಾರವನ್ನು ಕಂಡುಕೊಂಡಿದ್ದಾರೆ. ಕಚೇರಿಗೆ ಹೊರಡಲು ಇನ್ನೇನು ತಯಾರು ಅನ್ನೋ ಹೊತ್ತಿಗೆ ಅವರ ಪತ್ನಿ ಬಾಗಿಲ ಹೊರ ಬಂದು ನನ್ನ ಮನೆ ಬಾಗಿಲನ್ನೇ ನೋಡುತ್ತ ಗಂಡನಿಗೆ ಹೊರಡಲು ಕೈಸನ್ನೆ ಮಾಡುತ್ತಾರೆ. ಆತ ಒಂದು ಕೈಲಿ ಬುತ್ತಿ ಇನ್ನೊಂದರಲ್ಲಿ ಚೀಲ ಹಿಡಿದು ಧಡಧಡ ಮೆಟ್ಟಿಲಿಳಿದು ತಿರುಗಿ ಹೆಂಡತಿಯ ಮುಖವನ್ನೂ ನೋಡದೆ ಹೋಗುತ್ತಾರೆ.

ಅಪಶಕುನದ ನನ್ನ ಮುಖದೊಂದಿಗಿನ ಮುಖಾಮುಖಿಯನ್ನು ನಿವಾರಿಸಿಕೊಂಡ ಪ.ಮ.ಗೆ ಇನ್ನೊಂದು ಅವಸ್ಥೆ ಬೆಕ್ಕಿನ ರೂಪದಲ್ಲಿ ವಕ್ಕರಿಸಿಕೊಂಡಿದೆ. ಆರೆಂಟು ತಿಂಗಳ ಹಿಂದೆ ಬೆಕ್ಕೊಂದು ನಮ್ಮ ಫ್ಲಾಟಿನಲ್ಲಿ ಏಕಾಏಕಿ ಕಾಣಿಸಿಕೊಂಡು ತನ್ನ ಹಕ್ಕು ಸ್ಥಾಪಿಸಿತು. ಮ್ಯಾಂವ್ ಮ್ಯಾಂವ್ ಎನ್ನುತ್ತ ಅವರು ಇವರೆಲ್ಲರ ಕಾಲು ಪ್ಯಾಂಟು ಸೀರೆ ಚೂಡಿದಾರ್‌ಗೆ, ಕುರ್ಚಿ, ಸೋಫಾಗಳಿಗೆ ಮೈ ಒರೆಸಿ ಬೇರೆ ಬೆಕ್ಕುಗಳಿಗೆ ಇಲ್ಲಿ ಜಾಗವಿಲ್ಲ ಎಂದು ಸ್ವಾಮ್ಯ ಸಾಧಿಸಿ ನೆಲೆಯೂರಿತು.

ನಮ್ಮ ಫ್ಲಾಟಿನಲ್ಲೇ ಇರುವ ಮುಸ್ಲಿಂ ಕುಟುಂಬಕ್ಕೆ ನಾಯಿ ಎಂದರೆ ಆಗುವುದಿಲ್ಲ. ಆದರೆ ಬೆಕ್ಕು ಸಮ್ಮತ. ಅದಕ್ಕೆ ಹಾಲು ಹಾಕೀ ಹಾಕಿ ಆ ಕುಟುಂಬ ಧನ್ಯವಾಯಿತು. ಅವರ ಮಗ್ಗುಲ ಮನೆಯ ಮಾರ್ವಾಡಿ ಕುಟುಂಬವೂ ಬೆಕ್ಕಿಗೆಂದೇ ಹೊಸ ಬಟ್ಟಲೊಂದನ್ನು ಖರೀದಿಸಿ ತಂದು ಹಾಲು ಎರೆಯಲಾರಂಭಿಸಿತು. ಬೆಕ್ಕಿಗೆ ಹಾಲು ಹಾಕಿದರೆ ಸ್ವರ್ಗ ಪ್ರಾಪ್ತಿಯಂತೆ ಎಂದು ಮಾರ್ವಾಡಮ್ಮ ನನ್ನವಳಿಗೆ ಹೇಳಿದಾಗ ನಾವೂ ಯಾಕೆ ಸ್ವರ್ಗದಲ್ಲಿ ಸೀಟು ರಿಸರ್ವ್ ಮಾಡಬಾರದು ಎಂದು ಆಕೆಗೆ ಅನ್ನಿಸಿತ್ತು. ನನ್ನ ಪುಣ್ಯ ವರಾತ ಹೆಚ್ಚಲಿಲ್ಲ. ಈ ಮಧ್ಯೆ ಎರಡೆರಡು ಮನೆ ಕ್ಷೀರಾತಿಥ್ಯ ಬಡಕಲು ಬೆಕ್ಕನ್ನು ಟುನ್‌ಟುನ್ ಮಾಡಿತು. ಮೈಕೈ ತುಂಬಿಕೊಂಡ ಹೆಣ್ಣಿನ ವಾಸನೆ ಹಿಡಿದ ಗಂಡು ಗಡವಾ ಬೆಕ್ಕೊಂದು ಬಂದು ಲೌವ್ ಮಾಡಿ ಮುಂದಿನ ಕೆಲಸ ಮಾಡಿತು. ಪರಿಣಾಮ ಮೊದಲ ಹೆರಿಗೆಗೇ ಐದು ಮರಿ.

ಈಗಂತೂ ಬಾಣಂತಿ ಬೆಕ್ಕನ್ನೂ ಹಸಿ ಮರಿಗಳನ್ನೂ ಪೋಷಿಸುವ ಹೊಣೆ ಆ ಎರಡು ಕುಟುಂಬದ ಮೇಲೆ ಬಿತ್ತು. ನನ್ನ ಹೆಂಡತಿ, ಮಕ್ಕಳೆಲ್ಲರ ಬುದ್ಧಿಭಾವವನ್ನೆಲ್ಲ ಆವರಿಸಿದ್ದ ಡಿಪ್ಪಿ ಎಂಬ ಕಾಕರ್ಸ್ ಸ್ಪ್ಯಾನಿಯಲ್ ನಿಧನಾನಂತರ ಯಾವ ಸಾಕು ಪ್ರಾಣಿಯ ಸಹವಾಸವೂ ಬೇಡ ಎಂಬ ತೀರ್ಮಾನಕ್ಕೆ ಬಂದಿದ್ದೆವಾಗಿ ಬೆಕ್ಕಿನ ಸಂಸಾರದ ಉಸಾಬರಿ ನಮಗೆ ಬರಲಿಲ್ಲ. ಬಾಗಿಲ ಬಳಿ ಬಂದು ಮ್ಯಾಂವ್ ಎಂದ ಅದಕ್ಕೆ ಪೊರಕೆ ಎತ್ತಿ ಬೆದರಿಸಿದ ಬಳಿಕ ಆ ಕಿರಿಕಿರಿಯೂ ಇಲ್ಲವಾಯಿತು.

ಆದರೆ ಆರೆಂಟು ತಿಂಗಳಿಂದ ಸಾಕಿದವರು? ಬಿಡುವುದಾದರೂ ಹೇಗೆ? ದೂಡಿ ದೂರ ಮಾಡುವುದಾದರೂ ಹೇಗೆ? ಬಿಟ್ಟೇನೆಂದರೂ ಬಿಡುವ ಸ್ಥಿತಿಯಲ್ಲಿ ಬೆಕ್ಕು ಮತ್ತದರ ಸಂಸಾರವೂ ಇರಲಿಲ್ಲ. ತಮಿಳುನಾಡಿನಿಂದ ಬಂದು ಬೆಂಗಳೂರಿನ ಸ್ಲಮ್‌ಗಳಲ್ಲಿ

ನೆಲೆಯೂರಿ ನಮ್ಮನ್ನೇ ಹೆದರಿಸುವವರಂತೆ ಈ ಮಾರ್ಜಾಲ ಕುಟುಂಬ ಸ್ವಾಮ್ಯ ಸ್ಥಾಪಿಸಿಬಿಟ್ಟಿತ್ತು. ಇಡೀ ಅಪಾರ್ಟ್‌ಮೆಂಟ್‌ನಲ್ಲಿ ಅವುಗಳದೇ ಕಾರುಬಾರು.

ಐದು ಮರಿ, ತಾಯಿ ಬೆಕ್ಕು ಅದರ ಬೆನ್ನುಬಿದ್ದ ಗಂಡು ಬೆಕ್ಕು ಯಾವಾಗ ಯಾವ ಕಡೆಯಿಂದ ಬರುತ್ತವೆಂದು ಊಹಿಸಲಾಗದ ಸ್ಥಿತಿ ಈಗ ಅಪಾರ್ಟ್‌ಮೆಂಟ್‌ನಲ್ಲಿದೆ. ಇದು ಇತರರಿಗೆ ತುಸು ಕಿರಿಕಿರಿಯಾಗಿದ್ದರೆ ನನ್ನ ಪ.ಮ.ನಿಗೆ ಯಾತನಾಮಯ ಸ್ಥಿತಿ. ಯಮಯಾತನೆಯ ಸಂಕಟದಲ್ಲಿ ಪರದಾಡುತ್ತಿರುವ ಪ.ಮ. ಗೋಳಿಗೆ ತಕ್ಷಣದ ಪರಿಹಾರ ಇದ್ದಂತಿಲ್ಲ.

ಎಡದಿಂದ ಬಲಕ್ಕೆ ಬೆಕ್ಕು ಹೋದರೆ ಶುಭ ಶಕುನವೆಂದೂ ಬಲದಿಂದ ಎಡಕ್ಕೆ ಹೋದರೆ ಅಪಶಕುನವೆಂದೂ ಪ.ಮ. ಪತ್ನಿ ನನ್ನ ಹೆಂಡತಿಗೆ ಹೇಳಿದ್ದಾರಂತೆ. ಒಂದು ಬೆಕ್ಕು ಆ ಕಡೆಯಿಂದ ಅಡ್ಡ ಹೋದರೆ ಇನ್ನೊಂದು ಈ ಕಡೆಯಿಂದ ಅಡ್ಡ ಹಾಯುವುದು ಸಾಮಾನ್ಯವಾಗಿದೆ. ಎಡದಿಂದ ಹೋಯಿತು ಎಂದು ಮನೆಯಿಂದ ಹೊರ ಬಂದು ಪ.ಮ. ಮೆಟ್ಟಿಲು ಇಳಿಯೋ ಹೊತ್ತಿಗೆ ಇನ್ನೊಂದು ವಿರುದ್ಧ ದಿಕ್ಕಿನಲ್ಲಿ ಹಾಯುವುದು ಮಾಮೂಲಾಗಿದೆ. ಒಂದೊಂದು ದಿನವಂತೂ ಪ.ಮ. ಮಹಾಶಯ ಎರಡು ಮೂರು ಬಾರಿ ಮನೆಯೊಳಕ್ಕೆ ಹೋಗಿ ಹೋಗಿ ಕಚೇರಿಗೆ ಮಧ್ಯಾಹ್ನದ ಹೊತ್ತಿಗೆ ಹೋಗುವಂತಾಗಿದೆ.

ಕಾಟ ತಡೆಯಲು ಅನ್ಯ ಮಾರ್ಗ ಕಾಣದ ಪ.ಮ. ಸೊಸೈಟಿಗೆ ಪತ್ರ ಬರೆದು ಬೆಕ್ಕುಗಳ ನಿಯಂತ್ರಣ ಕ್ರಮಕ್ಕೆ ಸಲಹೆ ಮಾಡಿದ್ದಾರೆ. ಬೆಕ್ಕು ಇರುವುದರಿಂದ ಬಿಲ್ಡಿಂಗ್‌ನಲ್ಲಿ ಇಲಿ ಕಾಟ ಕಡಿಮೆಯಾಗಿದೆ ಎಂಬ ವಾದ ಮಂಡಿಸಲು ಅದನ್ನು ಸಾಕುತ್ತಿರುವವರು ಮುಂದಾಗಿದ್ದಾರೆ. ಇಲಿ ಇದ್ದರೆ ಪ್ಲೇಗು ಬರೋ ಸಾಧ್ಯತೆ ಇದೆ ಎಂದು ಹೆದರಿಸಲೂ ಅವರು ಹವಣಿಸಿದ್ದಾರೆಂದು ಮಾಹಿತಿ ಇದೆ. ಬೆಕ್ಕಿನ ಮೂಲಕ ಸ್ವರ್ಗ ಪ್ರಾಪ್ತಿಯಾಗುತ್ತದೆಂದು ನಂಬಿರುವ ಪ.ಮ. ಪತ್ನಿ ಧರ್ಮಸಂಕಟದಲ್ಲಿ ಬಿದ್ದಿದ್ದಾರೆ.

ಈ ಮಧ್ಯೆ ಬೆಕ್ಕುಗಳನ್ನು ಹೊರಕ್ಕೆ ಹಾಕಲೆಂದು ನನ್ನಂಥ ತಟಸ್ಥರು ಮಾಡಿದ ಯತ್ನ ಫಲ ನೀಡಿಲ್ಲ. ಚೀಲದಲ್ಲಿ ಹಾಕಿ ಊರ ಹೊರಗೆ ಕನಕಪುರ ರಸ್ತೆಯಲ್ಲಿ ಬಿಟ್ಟು ಬಂದರೆ ಮರು ಬೆಳಗ್ಗೆ ಹೊತ್ತಿಗೆ ಅವು ಹಾಜರು! ವಿಳಾಸ ಗೊತ್ತಿಲ್ಲದಿದ್ದರೂ ಸರಿಯಾಗೇ ಬರುವ ಭಿಕ್ಷುಕರಂತೆ ಆ ಬೆಕ್ಕುಗಳ ಪಟಾಲಮ್ಮು ನಮ್ಮನ್ನು ಅಣಕಿಸುತ್ತಿದೆ. ಬೆಕ್ಕಿನ ಪರ ವಿರೋಧದಲ್ಲಿ ಸಣ್ಣದೇ ಆದ ರೀತಿಯಲ್ಲಾದರೂ ಒಂದು ಸಿವಿಲ್ ವಾರ್ ನಮ್ಮ ಬಿಲ್ಡಿಂಗ್‌ನಲ್ಲಿ ಶುರುವಾಗಿದೆ.

ಒಂಟಿ ಬ್ರಾಹ್ಮಣನನ್ನೇ ಸಹಿಸದ ಪ.ಮ. ಈಗ ಬೆಕ್ಕುಗಳ ಸೇನೆಯನ್ನೇ ಎದುರಿಸಬೇಕಾಗಿದೆ. ಇಲ್ಲಿಗೇ ಪ್ರಕರಣ ಇತ್ಯರ್ಥವಾಗುವ ಸಂಭವ ಇಲ್ಲ. ನನ್ನ ಹೆಂಡತಿ ಇದೀಗ ನೀಡಿರುವ ತಾಜಾ ಸುದ್ದಿ ಪ್ರಕಾರ ಆ ಬೆಕ್ಕು ಮತ್ತೆ ಗರ್ಭಿಣಿಯಂತೆ! ಟಿವಿ ಸೀರಿಯಲ್‌ಗಳ ವಿಚಾರದಲ್ಲಿ ಚರ್ಚೆ ಮುಗಿದ ಬಳಿಕ ಅಪಾರ್ಟ್‌ಮೆಂಟ್ ಹೆಂಗಳೆಯರ ಚರ್ಚಾ ವಸ್ತು ಗರ್ಭಿಣಿ ಬೆಕ್ಕು. ಅದು ಈ ಬಾರಿ ಹಾಕಲಿರುವುದು ಐದು ಮರಿಯೋ ಆರೋ... ಅದರಲ್ಲಿ ಹೆಣ್ಣೆಷ್ಟೋ ಗಂಡೆಷ್ಟೋ... ಚರ್ಚೆ ನಡೆದಿದೆ. ಇನ್ನೂ ಯಾರೂ ಬೆಟ್ ಕಟ್ಟಿದ್ದು ಗೊತ್ತಾಗಿಲ್ಲ.

❑

# ಸಹವಾಸ ರಾದ್ಧಾಂತ!

- ಗಣೇಶ ಹೆಗ್ಗಡೆ

''ಸರ್, ಡಿ.ಸಿ.ಪಿ. ವೆಸ್ಟ್ ಲೈನಿನಲ್ಲಿದ್ದಾರೆ''

''ಗುಡ್ ಮಾರ್ನಿಂಗ್ ಸರ್. ಇನ್ಸ್‌ಪೆಕ್ಟರ್ ಎಂಗತಂಬಿ ಸ್ಪೀಕಿಂಗ್''

''ನಾವು ಒಂದು ತಿಂಗಳ ಹಿಂದೆ ಕಳುಹಿಸಿದ್ದ ವಿ.ಐ.ಪಿ. ಸರ್ಕ್ಯುಲರ್ ತಲ್ಪಿದ್ಯೇನ್ರಿ? ಅದ್ರ ಬಗ್ಗೆ ಏನು ಆ್ಯಕ್ಷನ್ ತೆಗೆದುಕೊಂಡಿದ್ದೀರ? ಮೇಲಿನವರಿಗೆ ಆ್ಯಕ್ಷನ್ ಟೇಕನ್ ರಿಪೋರ್ಟ್ ಪೆಂಡಿಂಗಿದೆ.''

''ಸರ್, ಯಾವುದರ ಬಗ್ಗೆ ತಾವು?''

''ಸ್ಟುಪಿಡ್, ಕೊಂಚವೂ ಜವಾಬ್ದಾರಿ ಇಲ್ವಲ್ರಿ. ಅದೇರಿ ನಿಮ್ ನಿಮ್ ಏರಿಯಾದಲ್ಲಿ ಕಾಂಟ್ರೋವರ್ಸಿಯಲ್ ಸಾಹಿತಿಗಳಿಗೆ ಪೋಲೀಸು ಪ್ರೊಟೆಕ್ಷನ್ ಕೊಡುವ ವಿಚಾರ.''

''ಓ ಅದಾ ಸಾರ್. ಈ ವಿಚಾರದಲ್ಲಿ ನಮ್ಮ ಸ್ಟೇಷನ್ನಿನಲ್ಲಿ ಕೊಂಚ ಎಡವಟ್ಟು ಆಗಿ ಹೋಗಿದೆ.''

**ಪೊಲೀಸಿನವರಿಗೇ ಪೊಲೀಸ್ ಪ್ರೊಟೆಕ್ಷನ್ ಕೊಡಲು ಸಾಧ್ಯವೆ?**

''ವ್ಹಾಟ್?''

''ಗುಪ್ತಚರ ದಳದ ಮಾಹಿತಿ ಆಧರಿಸಿ ನಮ್ಮ ಜೂರಿಸ್‌ಡಿಕ್ಷನ್ನಿನಲ್ಲಿ ಒಬ್ಬ ಸಾಹಿತಿಯನ್ನು ಗುರ್ತಿಸಿ, ಕೂಡಲೇ ಅವರಿಗೆ ಪೋಲೀಸು ಪ್ರೊಟೆಕ್ಷನ್ ಕೊಡಲು ಕ್ರಮ ತೆಗೆದುಕೊಂಡೆ ಸರ್...''

''ಗುಡ್ ಮತ್ತಿನ್ನೇನ್ರಿ ಪ್ರಾಬ್ಲಮ್ಮು?''

''ಪ್ರಸಿದ್ಧ ಸಾಹಿತಿ ಸಂಗಣ್ಣನವರ ಮನೆಯಲ್ಲಿ ಒಂದು ವಾರದಿಂದ ನಮ್ಮ ಪ್ಯಾದೆ ಗನ್‌ಮನ್ ಗಂಗಪ್ಪ ಡ್ಯೂಟಿಗೆಂದು ಅಪಾಯಿಂಟ್ ಆಗಿದ್ದ ಸರ್.''

''ಹೂಂ''

''ಸಂಗಣ್ಣನವರು ತಮ್ಮ ಪಾಡಿಗೆ ತಾವಿದ್ದಿದ್ದರೆ ಯಾವ ತಂಟೆ ತಕರಾರೂ ಇರುತ್ತಿರಲ್ಲಿಲ್ಲ. ದೇವರ ಮಂಗಳಾರತಿ ಕೊಡುವ ನೆಪದಲ್ಲಿ ಇವನನ್ನು ಒಳಕ್ಕೆ ಕರೆದು, ಮೇನ್ ಡೋರ್ ಲಾಕ್ ಮಾಡಿ, ಇವನಿಗೆ ಕಾಲಕಾಲಕ್ಕೆ ತಿಂಡಿ, ತೀರ್ಥ, ಊಟೋಪಚಾರ ಕೊಟ್ಟು ಮನೆ ಒಳಗೇನೆ ಮಲ್ಕೊಳ್ಳೋಕ್ಕೂ ಅಣಿ ಮಾಡಿ ಕೊಟ್ರಂತೆ.''

''ಎಂಥಹ ಹಾಸ್ಪಿಟಾಲಿಟೀರಿ ಅವರದ್ದು. ಗಂಗಪ್ಪನಿಗೆ ಟಿ.ಎ. ಡಿ.ಎ. ನೇ ಉಳಿದು ಹೋಯ್ತಲ್ರಿ.''

''ಸರ್. ಮುಂದಿನ ಕಥೆ ಕೇಳಿ..''

''ಸಂಗಣ್ಣನವರು ಸಿಕ್ಕ ಈ ಅವಕಾಶವನ್ನು ಕಳೆದುಕೊಳ್ಳಲಿಚ್ಛಿಸದೆ, ಗಂಗಪ್ಪನನ್ನೇ ಶ್ರೋತೃವಾಗಿರಿಸಿಕೊಂಡು, ಬಾಲ್ಯದಿಂದ ವೃದ್ಧಾಪ್ಯದವರೆಗೂ ತಾವು ಬರೆದಿದ್ದ ಪ್ರಕಟಿತ

ಹಾಗೂ ಅಪ್ರಕಟಿತ ಕವನಗಳನ್ನು ನಾನ್ ಸ್ಟಾಪಾಗಿ ವಾಚನ ಮಾಡಲು ಪ್ರಾರಂಭಿಸಿದ್ರಂತೆ..''

''ಅಯ್ಯೋ ಶಿವನೆ, ಮುಂದೆ?''

''ಮೊದ್ಲೇ ಇವನು ಬಿ.ಪಿ. ಹಾಗೂ ಶುಗರ್ ಪೇಷೆಂಟು. ಮೊದಲನೆಯ ದಿವಸ ಹೇಗೋ ಸಾವರಿಸಿಕೊಂಡನಂತೆ. ಎರಡನೆಯ ದಿವ್ಸ ಇಯರ್ ಇನ್‌ಫೆಕ್ಷನ್ ಆದ ಹಾಗೆ ಫೀಲ್ ಆಯ್ತಂತೆ. ಮೂರನೆಯ ದಿವಸ ಅವರನ್ನು ಹೆದರಿಸಲು ಲೋಡೆಡ್ ಗನ್ನನ್ನು ಎದುರಿರಿಸಿಕೊಂಡು ಗಂಗಪ್ಪ ಕುಳಿತರೂ ಸಂಗಣ್ಣನವರು ಕ್ಯಾರೇ ಎನ್ನದೆ ತಮ್ಮ ಕವಿತಾವಾಚನ ಮುಂದುವರಿಸ್ತಾನೆ ಇದ್ರಂತೆ..''

''ಇದೇನ್ರಿ ಗ್ರಹಚಾರ ಇದು. ಐಎಸ್ ಉಗ್ರರ ವರ್ತನೆಗಿಂತ ಇದು ಕ್ರೂರವಾಗಿದ್ಯೆಲ್ಲಾ?''

''ಮುಂದೆ ಕೇಳಿ ಸಾರ್. ಆ ರಾತ್ರೆ ಗಂಗಪ್ಪನಿಗೆ ನೂರೆರಡು ಡಿಗ್ರಿ ಜ್ವರ ಬಂದು ಎರೆಡೆರೆಡು ಕಂಬಳಿಗಳನ್ನು ಹೊದ್ದುಕೊಂಡು ಗಡ ಗಡ ನಡುಗ್ತಾ ಕೂತ್ಕೊಂಡಿದ್ನಂತೆ. ಮಲ್ಕೊಳ್ಳೋಕ್ಮುಂಚೆ ತಾವು ಲೇಟೆಸ್ಟಾಗಿ ಬರೆದ ದೆವ್ವದ ಕಥೆ ಓದಲೇ? ಆಮೇಲೆ ತಮಗೆ ಸಂಘ ಸಂಸ್ಥೆಗಳು ಮಾಡಿದ ಸನ್ಮಾನದ ಸಿ.ಡಿ. ಹಾಕಲೇ? ಎಂದು ಸಾಹಿತಿ ಸಂಗಣ್ಣನವರು ಕೇಳಿದಾಗ, ಗಂಗಪ್ಪನಿಗೆ ಎಲ್ಲಿತ್ತೋ ಕೆಟ್ಟ ಧೈರ್ಯ. ಕೈಯಲ್ಲಿ ಹಿಡಿದಿದ್ದ ಗನ್ನನ್ನು ಸಾಹಿತಿಗಳ ಪಾದಾರವಿಂದಗಳ ಬಳಿ ಇಟ್ಟು, ಮಹಾಸ್ವಾಮಿ, ಇವತ್ತು ಎರಡಲ್ಲೊಂದು ಇತ್ಯರ್ಥವಾಗಿ ಹೋಗ್ಲಿ. ಈ ಹಾಳು ಜ್ವರ ನನ್ನನ್ನು ಸುಡುವ ಮೊದಲು ತಾವು ದಯವಿಟ್ಟು ಈ ಗನ್ನಿನಿಂದ ನನ್ನನ್ನು ಸುಟ್ಟು ಹಾಕ್ಬಿಡಿ ಎಂದು ತುಂಬಾ ಅಲವತ್ತು ಕೊಂಡು ಬಿಟ್ನಂತೆ.''

''ಛೇ. ಛೇ ವ್ಹಾಟ್ ಎ ಪಿಟಿಯಬಲ್ ಇನ್ಸಿಡೆಂಟ್ ಐ ಸೇ.. ಇದು ಇಲ್ಲೀಗಲ್ ಕನ್ಫೈನ್ಮೆಂಟ್ ಆಗುತ್ರಿ.''

''ಆಮೇಲೆ ಬೆಳಗಿನಜಾವ ಸಾಹಿತಿಗಳ ಧರ್ಮಪತ್ನಿ ವರ್ತನೆಯ ಹಾಲನ್ನು ಹಾಕಿಸಿಕೊಳ್ಳುವ ನೆಪದಲ್ಲಿ ಮುಂಬಾಗಿಲು ಕೊಂಚ ತೆರೆದಿದ್ದಾಗ, ಇದೇ ಒಳ್ಳೆ ಛಾನ್ಸ್ ಅಂತಾ ಇವ್ನು ಬಿದ್ನೋ ಕೆಟ್ನೋ ಅಂತ ಸ್ಟೇಷನ್ನಿಗೆ ಓಡ್ಬಂದ್ಬಿಟ್ಟಿದ್ದಾನೆ.''

''ಸಧ್ಯ.. ಸೇಫಾಗಿ ಸ್ಟೇಷನ್ ತಲುಪಿದನಲ್ಲ...''

''ಸರ್. ಆ ಗಡಿಬಿಡೀಲಿ ಈ ಮುಂಡೆ ಗಂಡ ಅವರ್ಮನೇಲೇ ಡಬ್ಬಲ್ ಬ್ಯಾರೆಲ್ ಗನ್ನನ್ನು ಬಿಟ್ಬಿಟ್ಟು ಗಾಬರಿಯಿಂದ ಓಡ್ಬಂದ್ಬಿಟ್ಟಿದ್ದಾನೆ.''

''ಅಯ್ಯೋ ಶಿವನೆ. ಇದು ದೊಡ್ಡ ಅಫೆನ್ಸ್ ಆಗುತ್ತೇರಿ. ಮತ್ತೆ ಗನ್ ರಿಕವರೀಗೆ ಏನು ಆ್ಯಕ್ಷನ್ ತೆಗೆದುಕೊಂಡ್ರಿ?''

''ನಮ್ಮ ಪುಣ್ಯ ಸರ್. ಈಗರ್ಧಘಂಟೆ ಮುಂಚೆ ಸಾಹಿತಿ ಸಂಗಣ್ಣನವರೇ ಗನ್ನನ್ನು ಸೇಫಾಗಿ ವಾಪಸ್ಸು ತಂದ್ಕೊಟ್ರು. ದಾರೀಲಿ ಸಾಹಿತಿಗಳು ಹೆಗಲಮೇಲೆ ಗನ್ನನ್ನಿಟ್ಟುಕೊಂಡು ಸ್ಟೇಷನ್ ದಾರೀಲಿ ನಡ್ಕೊಂಡು ಬರ್ತಿರ್ಬೇಕಾದ್ರೆ ಎದುರು ಸಿಕ್ಕ ಜನ ದಿಕ್ಕಾಪಾಲಾಗಿ ಓಡಿ ಹೋದ್ರಂತೆ.''

''ಏನಾದ್ರು ಹೆಚ್ಚು ಕಮ್ಮಿ ಆಗಿದ್ದಿದ್ರೆ ಮತ್ತೆ ಲಾ ಅಂಡ್ ಆರ್ಡರ್ ಪ್ರಾಬ್ಲಮ್ಮು ಆಗ್ತಿತ್ತಲ್ರೀ. ಸಧ್ಯ ಮಾಧ್ಯಮದವರ ಕಣ್ಣಿಗೆ ಬೀಳ್ಲಿಲ್ವಲ್ಲ. ಮುಂದೇನಾಯ್ತು?''

''ಹಾಗೆ ಓಡಿಬಂದ ಗಂಗಪ್ಪ, ಮತ್ತೆ ನಾನು ಡ್ಯೂಟಿಗೆ ಹೋಗಲ್ಲಾ. ನನಗೇ ಆ ಸಾಹಿತಿಗಳಿಂದ ಪೋಲೀಸು ಪ್ರೊಟೆಕ್ಷನ್ನು ಕೊಡಿ ಎಂಬ ವಿಚಿತ್ರ ಬೇಡಿಕೆಯುಳ್ಳ ಅರ್ಜಿ ಬರೆದುಕೊಟ್ಟು ಸ್ಟೇಷನ್ನಿನೊಳಗೆ ಮಂಕಾಗಿ ಕುಳಿತು ಬಿಟ್ಟಿದ್ದಾನೆ. ಆ ಅರ್ಜೀನಾ ತಮಗೆ ಈ ಕೂಡಲೇ ಫ್ಯಾಕ್ಸ್ ಮಾಡಿದ್ದೇನೆ.''

''ಎಂಥಾ ಆಭಾಸ ಆಗಿ ಹೋಗಿದೇರಿ. ಪೋಲಿಸ್ನೋರ್ಗೆ ಪೋಲೀಸು ಪ್ರೊಟೆಕ್ಷನ್ ಹೇಗ್ರಿ ಕೊಡೋದು?''

''ಸರ್, ತಾವೇನು ವರಿ ಮಾಡ್ಕೋಬ್ಯಾಡಿ. ಇದಕ್ಕೊಂದು ಸಲ್ಯೂಷನ್ ಕಂಡು ಹಿಡಿದು ಇಟ್ಟಿದ್ದೀನಿ.''

''ಸಲ್ಯೂಷನ್ ಅಂತಂದ್ರೆ ವಿಷದ ಬಾಟ್ಲು ಹಿಡ್ಕೊಂಡು ಸಾಹಿತಿಗಳ ಮುಂದೆ ಕುಳಿತು, ಹೆದರಿಸೋದೇನ್ರಿ? ಅವ್ರು ಗನ್ನಿಗೇ ಹೆದರ್ಲಿಲ್ಲಾಂತೀರಿ.''

''ಛೇ ಛೇ ಬಿಡ್ತು ಅನ್ನಿ ಸಾರ್. ನಮ್ಮ ಠಾಣೇಲಿ ವೆಂಕಟಪ್ಪ ಅಂತ ಇನ್ನೊಬ್ಬ ಪ್ಯಾದೆ ವರ್ಕ್ ಮಾಡ್ತಿದ್ದಾನೆ. ಅವನನ್ನು ಈ ಗಂಗಪ್ಪನ ಡ್ಯೂಟಿ ಮಾಡೋಕೆ ಕಷ್ಟಪಟ್ಟು ಒಪ್ಪಿಸಿದ್ದೀನಿ.''

''ಇದೇನ್ರಿ ಅಚ್ಚರಿ. ಗಂಗಪ್ಪನಿಗಾದ ಗತಿಯೇ ಈ ವೆಂಕಟಪ್ಪಂಗೂ ಆದ್ರೆ?''

''ಸರ್. ಪ್ಲಸ್ ಪಾಯಿಂಟ್ ಅಂತಂದ್ರೆ ಈ ವೆಂಕಟಪ್ಪನಿಗೆ ದನಗಿವುಡು. ಈ ಸಾಹಿತಿಗಳ ಆಟ ವೆಂಕಟಪ್ಪನ ಮುಂದೆ ನಡೆಯೋದೆ ಇಲ್ಲ. ಆದ್ರೆ ತಮ್ಮಿಂದ ಒಂದು ಅರ್ಜೆಂಟು ಹೆಲ್ಪ್ ಆಗ್ಬೇಕು.''

''ಹೇಳ್ರಿ. ಖಂಡಿತಾ ಮಾಡ್ಕೊಡೋಣ.''

''ಸರ್. ಈ ಪ್ಯಾದೆಗಳಿಗೆ ಬೇಸಿಕ್ ಸಂಬ್ಳದ ಜತೆ, ಡಿಯರ್ನೆಸ್ ಅಲೋಯನ್ಸ್, ಕನ್ವೇಯನ್ಸ್ ಅಲೋಯನ್ಸ್ ಮುಂತಾದ ಭತ್ಯೆಗಳು ಬರುತ್ವೆ. ಸಾಹಿತಿಗಳ ಡ್ಯೂಟಿ ಮಾಡುವ ಪ್ಯಾದೆಗಳಿಗೆ ಹಿಯರಿಂಗ್ ಅಲೋಯನ್ಸ್ ಅಂತ ಒಂದಿನ್ನೂರೋ, ಮುನ್ನೂರೋ ಸ್ಯಾಂಕ್ಷನ್ ಮಾಡಿಕೊಟ್ರೆ.. ಪಾಪ ಬದ್ಕುಹೋಗ್ತಾರೆ ಅವ್ರು.''


''ಗುಡ್ ರೆಕಮೆಂಡೇಷನ್ ಐ ಸೆ. ಅಂದಹಾಗೆ ನೀವು ಇನ್ಮುಂದೆ ಡಬ್ಬಲ್ ಎಚ್ಚರಿಕೆ ಇಂದ ಇರ್ಬೇಕ್ರಿ. ಸಾಹಿತಿಗಳ ಮನೆಗೆ ವೆಂಕಟಪ್ಪ ತಪ್ಪದೇ ಗನ್ ತೆಗೆದುಕೊಂಡು ಹೋಗ್ಲಿ. ಅದ್ರೆ ತನ್ನ ಹಿಯರಿಂಗ್ ಏಡ್‌ನ್ನು ಮಾತ್ರ ಸ್ಟೇಷನ್‌ನಲ್ಲೇ ಡಿಪಾಸಿಟ್ಟು ಮಾಡಲಿ. ಯಾವ ಕಾರಣಕ್ಕೂ ಸಾಹಿತಿಗಳ ಮನೆಯೊಳಗೆ ಕಾಲಿಡೋದು ಬ್ಯಾಡ. ನೀವು ಇನ್ಸ್ಟ್ರಕ್ಷನ್ಸ್ ಕೊಡೊವಾಗ ಅವನು ಹಿಯರಿಂಗ್ ಏಡ್ ಹಾಕೊಂಡಿರ್ಲಿ. ಅಂಡರ್‌ಸ್ಟಾಂಡ್?''

''ಎಸ್ ಸರ್.''

❑

# ಕೊರವಂಜಿ ಪದಬಂಧ – 22

– ವಿದ್ಯಾ ವಿ. ಹಾಲಭಾವಿ



**ಎಡದಿಂದ ಬಲಕ್ಕೆ**

3. ಈತನಿಗೆ ಒಂಚೂರೂ ವಿವೇಕವಿಲ್ಲಾ (4)
5. ನಡುವೆ ರಂಪವಿದ್ದರೆ ಇದು ಸಂಪ್ರದಾಯ (4)
6. ಪತಿಯ ಬಳಿ ಸರ ಕೇಳಿದ್ದು ಸ್ವಂತ ಹೆಂಡತಿಯಲ್ಲ (4)
8. ನಾಡಾಡಿಯ ರಕ್ತ ಧಮನಿಯಿದು (2)
9. ನಿತ್ಯ ನುಡಿಯುವ ನಿಜ (2)
10. ಸ್ವಲ್ಪವೂ ಬುದ್ಧಿಯಿಲ್ಲದ ದಡ್ಡ (4)
13. ತರಂಗವನ್ನು ನೋಡುತ್ತಿರುವ ನಿಪುಣ (4)
14. ಆರೋಪದಲ್ಲೇ ಮುಗಿಯಿತಲ್ಲಾ, ಈ ಮುಕ್ತಾಯ ಸಮಾರಂಭ (4)

**ಮೇಲಿಂದ ಕೆಳಕ್ಕೆ**

1. ನಡುವೆ ಪತ್ರವಿದ್ದರೆ ಇದು ಕಷ್ಟ (4)
2. ಅಪ್ಪನ ಈ ರೂಪ ತುಸು ವಿರಳ (4)
3. ಮತಿಯಿಟ್ಟುಕೊಂಡು ನೀಡಿದ ಒಪ್ಪಿಗೆ (4)
4. ಕಿಡಿಯೊಳಗೇ ಆಡಿಕೊಳ್ಳುತ್ತಿದ್ದಾನೆ ಈ ತುಂಟ (4)
7. ಸತಿಗೆ ಸಿಕ್ಕಿರುವ ಮೋಕ್ಷ (3)
9. ಜೊತೆಯಲ್ಲಿ ವಾಸಿಸುವುದು (4)
10. ಮನದ ವಿಷಯ ಪ್ರಸ್ತಾಪ ಮಾಡಿದ್ದಕ್ಕೇ ಈ ದ್ವೇಷ (4)
11. ನವ ದೇವಾಲಯದ ಸಭಾಮಂಟಪವಿದು (4)
12. ಅಂತರವಿದ್ದದ್ದಕ್ಕೇ ತಾನೇ? ಇಷ್ಟೆಲ್ಲಾ ಗಡಿಬಿಡಿ (4)

*(ಉತ್ತರಕ್ಕೆ 30ನೇ ಪುಟ ನೋಡಿ)*

# Advertisement

# Advertisement

# ಚಿನ್ನ ನೀನಿಲ್ಲದಿರೆ ಎಷ್ಟು ಚೆನ್ನ!

**- ಕೃಷ್ಣ ಸುಬ್ಬರಾವ್**

**ಈ** ಮಾತನ್ನು ಹೇಳಿದ ಭೂಪತಿಗಂಡು ಯಾರೆಂದು ಯೋಚಿಸಬೇಡಿ. ತನ್ನ ಹೆಂಡತಿಯನ್ನು ಪ್ರೀತಿಗಾಗಿ ಕರೆಯುವ ಪೆಟ್‌ನೇಮ್ 'ಚಿನ್ನ'ವೆಂದೂ ತಿಳಿಯುವ ಅಗತ್ಯವಿಲ್ಲ. ಹಾಗೆ ಹೇಳಲು ಯಾವ ಗಂಡನಿಗೆ ಧೈರ್ಯವಿರುತ್ತದೆ. ಹಾಗಾದರೆ ಅಂತಹ ಉದ್ಗಾರ ಎಲ್ಲಿಂದ ಬಂತು? ನನ್ನಂತಹ ಒಬ್ಬ ಬಡಪಾಯಿ ಬ್ಯಾಂಕ್ ಮ್ಯಾನೆಜರ್‌ನಿಂದ ಬಹಳ ವರ್ಷಗಳ ಹಿಂದೆ ಬರಬಹುದಾದ ಮಾತದು.

ವಿಚಿತ್ರವಾಗಿದೆಯಲ್ಲ! ಒಂದು ಕಾಲದಲ್ಲಿ ಒಳ್ಳೆ ಸಂಬಳ ಪಡೆಯುತ್ತಿದ್ದ ಬ್ಯಾಂಕ್ ಸಿಬ್ಬಂದಿಗೆ ಚಿನ್ನದಿಂದ ಉದ್ಭವಿಸಿದ ಕಷ್ಟಕಾರ್ಪಣ್ಯವೇನು? ಎನಿಸುವುದು ಸಹಜ. ಪ್ರತಿ ಮೂರು ಅಂಗಡಿಗಳಲ್ಲಿ ಒಂದು ಚಿನ್ನದಂಗಡಿಯನ್ನು ಕಾಣುವ ಈಗಿನ ಪೀಳಿಗೆಗೆ ಸಮಸ್ಯೆಯ ಸ್ವರೂಪ ಅರ್ಥವಾಗುವುದಿಲ್ಲ. ಚಿನ್ನದಿಂದ ಸಮಸ್ಯೆ ಹುಟ್ಟಬಹುದೆಂಬ ಕಲ್ಪನೆಯೂ ಕಷ್ಟ. 'ಓಲ್ಡ್ ಇಸ್‌ಗೋಲ್ಡ್' ಎಂದು ಹೇಳುವ ಚಿನ್ನದ ಹಳೆಕತೆಯನ್ನು ಕೇಳಿಸಿಕೊಳ್ಳಿ.

ಹಣವೇನಾದರೂ, ಅಪ್ಪಿತಪ್ಪಿ ಉಳಿದರೆ ಅದನ್ನು ಭೂಮಿಗೆ ಅಥವಾ ಚಿನ್ನಕ್ಕೆ ಹಾಕಿ ಎಂದು ಹಿರಿಯರು ಬಲವಾಗಿ ನಂಬಿದ್ದರು ಹಾಗೆ ನಡೆದುಕೊಂಡರೂ ಕೂಡ. ಆಪತ್ಕಾಲಕ್ಕೆ ಆದ ನೆಂಟನೆಂದರೆ ಅದು 'ಚಿನ್ನ'ಪ್ಪನೆ! ಮಾರವಾಡಿಗಳ ಆರ್ಥಿಕತೆಯ ಅಡಿಪಾಯವೇ ಚಿನ್ನ, ಬಡವರು ಬಿಡಿಸಿಕೊಳ್ಳಲಾದ ಅಡವಿಟ್ಟ ಚಿನ್ನ!

ಬ್ಯಾಂಕುಗಳು ರಾಷ್ಟ್ರೀಕರಣಗೊಂಡು ಹಳ್ಳಿಹಳ್ಳಿಗಳಲ್ಲಿ ತನ್ನ ಶಾಖೆಗಳನ್ನು ಹರಡಿಕೊಂಡಾಗ ಬೆಳೆಸಾಲ, ಅಭಿವೃದ್ಧಿ ಸಾಲ ಎಲ್ಲ ಕೊಡುವುದರ ಜತೆಗೆ ಚಿನ್ನದ ಸಾಲ ಸೌಲಭ್ಯವನ್ನು ರೈತರಿಗೆ ಕೊಡಲಾಯಿತು. ರೈತರಿಗೆ ಚಿನ್ನದ ಒಡವೆಗಳ ಮೇಲೆ ರೈತರಿಗೆ 'ಬೆಳೆಸಾಲ'ದ ರೂಪದಲ್ಲಿ ಬ್ಯಾಂಕುಗಳು ಆರ್ಥಿಕ ನೆರವು ನೀಡಲಾರಂಭಿಸಿದವು.

ಹಳ್ಳಿಶಾಖೆಯಲ್ಲಿ ಸೇವೆ ಸಲ್ಲಿಸುವುದು ಕಡ್ಡಾಯ ಮಾಡಿದಾಗ ಅನೇಕರಿಗೆ ಹಳ್ಳಿನು ಜೀವನ ನೋಡುವ ಸೌಭಾಗ್ಯ ಲಭಿಸಿತು. ಅಂತಹ 'ಭಾಗ್ಯ'ಶಾಲಿಗಳಲ್ಲಿ ನಾನೂ ಒಬ್ಬ. ಹೋದ ಹೊಸತರಲ್ಲಿ ಹಳ್ಳಿಯ ಜನರೆಲ್ಲ ಒಂದೇ ರೀತಿ ಕಾಣೆಸತೊಡಗಿದ ಅವರ ಹೆಸರುಗಳಲ್ಲೂ ಅಷ್ಟೇನೂ ವ್ಯತ್ಯಾಸವಿರುತ್ತಿರಲಿಲ್ಲ. ಮುನಿಸ್ವಾಮಿ, ಮುನಿಗೌಡ.. ಹೀಗೆ ಎಲ್ಲ ಹೆಸರಿನ ಮುಂದೆ 'ಮುನಿ'ಯೊಬ್ಬ ಕೂತಿರುತ್ತಿದ್ದ ಮನೆಮಂದಿಗೆಲ್ಲ ಒಂದೇ ಹೆಸರು. ಅವರನ್ನು ಗುರುತಿಸಲು 'ಚಿಕ್ಕ' ಮುನಿಯಪ್ಪ 'ದೊಡ್ಡ' ಮುನಿಯಪ್ಪ, 'ಸಣ್ಣ' ಮುನಿಯಪ್ಪ ಎಂದು ಕರೆಯುತ್ತಿದ್ದರು. ಊರಿನ ದೇವರ ಹೆಸರೊ ಅಥವಾ ವಂಶಾವಳಿಯಲ್ಲಿ ಹರಿದು ಬಂದ ಹೆಸರೊ ಎಲ್ಲರೂ ಇಟ್ಟುಕೊಳ್ಳುತ್ತಿದ್ದರು. ಸ್ವಲ್ಪ ಸಮಯದ ನಂತರ ಹಳ್ಳಿಗ್ರಾಹಕರನ್ನು ಪ್ರತ್ಯೇಕವಾಗಿ ಗುರುತು ಹಚ್ಚುವಷ್ಟು ನಾನೂ ಲೋಕಲ್ಪೆಸ್ ಆದೆ.

ಚಿನ್ನದ ಸಾಲ ನನಗೆ 'ಪೇನ್ ಇನ್ ದಿ ನೆಕ್' ಪ್ಯೂರ್ ಕನ್ನಡದಲ್ಲಿ ಹೇಳುವುದಾದರೆ ದೊಡ್ಡ ತಲೆನೋವಾಗಿತ್ತು. ಒಂದೇ ಒಂದು ಸಮಾಧಾನದ ವಿಷಯವೆಂದರೆ ಚಿನ್ನದ ಆಭರಣಗಳನ್ನು ಪರೀಕ್ಷಿಸಿ ತಕ್ಕಡಿಯಲ್ಲಿ ತೂಗಿ ಬೆಲೆಯನ್ನು ನಿಗದಿಪಡಿಸುವ ಜವಾಬ್ದಾರಿ ಒಬ್ಬ ಅಕ್ಕಸಾಲಿಗನ ಮೇಲಿತ್ತು. ಅವನು ಕೊಟ್ಟ ಪರ್ಟಿಫಿಕೇಟ್ ಆಧಾರದ ಮೇಲೆ ಬ್ಯಾಂಕ್ ನಿಗದಿಪಡಿಸಿದ ದರದಲ್ಲಿ ಗರಿಷ್ಟಮಿತಿಯ ಒಳಗಡೆ ಮ್ಯಾನೆಜರ್ ಸಾಲ ಕೊಡಬಹುದಾಗಿತ್ತು. ಕೆಲವು ಬ್ಯಾಂಕುಗಳಲ್ಲಿ ಚಿನ್ನದ ಸಾಲದ ಸಂಪೂರ್ಣ ಜವಾಬ್ದಾರಿ ವ್ಯವಸ್ಥಾಪಕನ ತಲೆಯ ಮೇಲೆ ಇತ್ತು. ಅಂತಹ ಮ್ಯಾನೆಜರ್‌ಗಳನ್ನು ನೋಡಿ ನಾನು ಸ್ವಲ್ಪ ಸಮಾಧಾನ ಪಡುತ್ತಿದ್ದೆ. ಹಳ್ಳಿ ಶಾಖೆಗಳಲ್ಲಿ ಸ್ಟ್ರಾಂಗ್ ರೂಂ ಇರುತ್ತಿರಲಿಲ್ಲ. ಹಣವಿಡಲು ಹಾಗೂ ಚಿನ್ನವಿಡಲು ಪ್ರತ್ಯೇಕ ಗಾದ್ರೆಜ್ ಸೇಫ್ ಇರುತ್ತಿದ್ದವು. ಸ್ವಲ್ಪ ದಿನಗಳ ನಂತರ ಅಲಾರಂ ಸಿಸ್ಟಮ್ ಬಂತು ಆದರೂ ಅಂತಹ ಉಪಯೋಗವಿರುತ್ತಿರಲಿಲ್ಲ. ಹಳ್ಳಿಯ ಹತ್ತಿರವಿರುವ ಪಟ್ಟಣಗಳಲ್ಲಿ ಮ್ಯಾನೆಜರ್ ವಾಸವಾಗಿರುತ್ತಿದ್ದರು. ಬ್ಯಾಂಕಿಗೆ ಸೇರಿರುವ ಕ್ವಾರ್ಟರ್ಸ್‌ನಲ್ಲಿ ಯಾರೂ ಇರುತ್ತಿರಲಿಲ್ಲ. ಅಲ್ಲಿ ಶಾಖೆಯ ಹಳೆಯ ಕಡೆತಗಳ ರಾಶಿಯನ್ನು ಗುಡ್ಡೆಹಾಕಿ ಅಲ್ಲಿವಾಸವಾಗಿರುವುದನ್ನು ತಪ್ಪಿಸಿಕೊಳ್ಳುತ್ತಿದ್ದರು.

'ಚಿನ್ನ'ವೆಂದು ಹೇಳಿ 'ನಕಲಿ'ಯನ್ನು ತಂದಿಟ್ಟರೆ ಏನ್ ಗತಿ? ಬ್ಯಾಂಕಿನವರು ಒಪ್ಪಿಕೊಂಡ ಗೋಲ್ಡ್ ಅಪ್ರೈಸರ್ ಅಕ್ಕಸಾಲಿಗ ರೈತರ ಜೊತೆ ಕೈ ಜೋಡಿಸಿ ಮೋಸಮಾಡಿದರೆ? ಎಂಬ ಭಯ ಕಾಡುತ್ತಿತ್ತು. ಅನುಮಾನ ವ್ಯಕ್ತಪಡಿಸಿದರೂ ಅಪಾಯವೆಂದು ನಾನು ''ಬರಿಕಣ್ಣಿನಲ್ಲೇ ಅಸಲಿ-ನಕಲಿ ಚಿನ್ನದ ವ್ಯತ್ಯಾಸ ಕಂಡುಹಿಡಿಯಬಲ್ಲೆ ಎಂದು ನಟಿಸುತ್ತಿದ್ದೆ. ಅಕ್ಕಸಾಲಿಗ ಒಂದು ಆ್ಯಸಿಡ್ (ಆ್ಯಜಿಧ) ಪರೀಕ್ಷೆಗೆ ಆಭರಣಗಳನ್ನು ಅಳವಡಿಸುತ್ತಿದ್ದ. ಚಿಕ್ಕ ತಕ್ಕಡಿಯಲ್ಲಿ ಆಭರಣಗಳನ್ನು ತೂಗಿ ಹಾಕಿ, ಒಂದಿಷ್ಟು ವೇಸ್ಟೇಜ್ ಕಳೆದು ಮೌಲ್ಯಮಾಪನ ಮಾಡಿ ಸಾಲದ ಪ್ರಮಾಣವನ್ನು ನಿಗಧಿ ಮಾಡಿ ಸರ್ಟಿಫಿಕೇಟ್ ಕೊಟ್ಟು ಸಹಿ ಹಾಕುತ್ತಿದ್ದ. ಸಾಲ ಮಂಜೂರು ಮಾಡಿದ ಮೇಲೆ ಚಿನ್ನದ ಆಭರಣವನ್ನು ಒಂದು ಚಿಕ್ಕ ಹತ್ತಿಯ ಚೀಲದಲ್ಲಿಟ್ಟು ಅದನ್ನು ಹೊಲೆದು ಅದರ ಮೇಲೆ ಮೇಣ ಅರಗನ್ನು ಕಾಯಿಸಿ ಮೋಹರನ್ನು ಹಾಕಿ ಬ್ಯಾಂಕ್ ಸೀಲನ್ನು ಒತ್ತುತ್ತಿದ್ದ ನಂತರ ಅದಕ್ಕೆ ಗುರುತಿನ ಚೀಟಿ, (ಆಭರಣದ ತೂಕ, ಕ್ರಮಸಂಖ್ಯೆ, ಸಾಲಗಾರನ ಹೆಸರು ನಮೂದಿಸಿದ್ದು) ಲಗತ್ತಿಸಿ ಆಭರಣದ ಸೇಫ್‌ನಲ್ಲಿ ಇಡಲಾಗುತ್ತಿತ್ತು. ಸಾಲಗಾರನಿಗೆ ಚೀಟಿಯ ಒಂದು ಪ್ರತಿ ಕೊಡಲಾಗುತ್ತಿತ್ತು. ಚಿನ್ನದ ಸಾಲ ವಾರದಲ್ಲಿ ಒಂದು ದಿನ ಮಾತ್ರ ಕೊಡಲಾಗುತ್ತಿತ್ತು. ಆದರೂ ತುರ್ತು ಪರಿಸ್ಥಿತಿಯಲ್ಲಿ ಅನೇಕ ಸಂದರ್ಭದಲ್ಲಿ ರೈತರೆ ಅಕ್ಕಸಾಲಿಗನನ್ನು ತಮ್ಮ ಮೋಟರ್‌ಸೈಕಲ್‌ನಲ್ಲೊ ಟ್ರ್ಯಾಕ್ಟರ್‌ನಲ್ಲೊ ಶಾಖೆಗೆ ಕರೆದುಕೊಂಡು ಬಂದು ಚಿನ್ನದ ಸಾಲಕ್ಕಾಗಿ ದುಂಬಾಲು ಬೀಳುತ್ತಿದ್ದರು. ಅಂತಹ ಸಮಯದಲ್ಲೇ ಅನುಮಾನದ ಭೂತ ಗರಿಗೆದರುತ್ತಿತ್ತು.

ನಗರ ಶಾಖೆಗಳಲ್ಲಿ ಚಿನ್ನದ ಸಾಲದ ಸೌಲಭ್ಯವಿರಲಿಲ್ಲ ಹೀಗಾಗಿ ರೈತರ ನೆಂಟರಿಷ್ಟರು ತಮ್ಮ ಅಗತ್ಯಕ್ಕಾಗಿ ನಮ್ಮ ಗ್ರಾಹಕರ ಮೂಲಕ ಬರಬಹುದೆಂಬ ಗುಮಾನಿ ಇರುತ್ತಿತ್ತು.

ಒಮ್ಮೆ ನನ್ನ ಕಸಿನ್ ಈ ರೀತಿಯ ಬೇಡಿಕೆ ಇಟ್ಟ. ನಾನು ಸ್ಪಷ್ಟವಾಗಿ ನಿರಾಕರಿಸುತ್ತ ''ನೀನು ನಗರದಲ್ಲಿದ್ದವನು, ಅದೂ ಅಲ್ಲದೆ ಈ ಸಾಲ ಬೆಳೆಸಾಲದ ರೂಪದಲ್ಲಿ ಲಭ್ಯ, ಯಾವ ಭೂಮಿ ಆಧಾರದ ಮೇಲೆ ಕೊಡಬೇಕು?'' ಎಂದೆ. ಅದಕ್ಕೆ ಅವನು ''ನೀನು ಮನಸ್ಸು ಮಾಡಿದರೆ ನಿನ್ನ ಗ್ರಾಹಕ-ರೈತರ ಹೆಸರಿನ ಮೇಲೆ ಅವರ ಭೂಮಿಯ ಪಾಣಿ ಮೇಲೆ ಕೊಡಬಹುದೆಂಬ ಸಲಹೆ ಕೊಟ್ಟ. ನಾನು ನಿರಾಕರಿಸಿದಾಗ ನಾನೊಬ್ಬ 'ಯೂಸ್‌ಲೆಸ್ ಫೆಲೊ' ಎಂದು ಬೈದು ಹೋದ. ಈಗ ನಗರದಲ್ಲೂ ಚಿನ್ನದ ಸಾಲ ಲಭ್ಯ. ಬ್ಯಾಂಕ್‌ಗಳಿಗಿಂತ ಬೇರೆ ಸಂಸ್ಥೆಗಳೇ ಧಾರಾಳವಾಗಿ ಸಾಲಕೊಡುತ್ತಾರೆ?''

ಚಿನ್ನದ ಸಾಲ ತೆಗೆದುಕೊಂಡು ಅದನ್ನು ಅವಧಿಯೊಳಗೆ ತೀರಿಸದಿದ್ದರೆ ಅದನ್ನು ಹರಾಜುಹಾಕುವ ಹಕ್ಕು ಇದೆ. ಆದರೆ ಅದನ್ನು ಮಾಡುವಾಗ ಅಸಲಿಯೆಂದುಕೊಂಡದ್ದು ನಕಲಿಯಾಗಿ ದೃಢಪಟ್ಟರೆ? ಎಂಬ ಭಯ. ಹೀಗಾಗಿ ಆದಷ್ಟುಮಟ್ಟಿಗೆ ಸಾಲವಸೂಲಿಗೆ ಶ್ರಮವಹಿಸುತ್ತಿದ್ದರು. ಕಡೇ ಪಕ್ಷ ಸಾಲವನ್ನು ರಿನ್ಯೂಮಾಡಿಸುತ್ತಿದ್ದರು.

ಎಲ್ಲ ಸಾಲಕ್ಕಿಂತ ಚಿನ್ನದ ಸಾಲದ ವಸೂಲಾತಿಗೆ ಹೆಚ್ಚು ಗಮನ ಕೊಡುತ್ತಿದ್ದ ನನ್ನನ್ನು ನೋಡಿ ಕೆಲವರಿಗೆ ಆಶ್ಚರ್ಯ. ಒಮ್ಮೆ ವಸೂಲಿಗೆ ಒಬ್ಬ ರೈತನ ಮನೆಗೆ ಹೋದೆ ಅಲ್ಲಿ ಗ್ರಾಹಕ ಇರಲಿಲ್ಲ. ಮನೆಯ ಒಡತಿಗೆ ಚಿನ್ನದ ಸಾಲದ ಬಗ್ಗೆ ಗೊತ್ತೇ ಇರಲಿಲ್ಲ. ಇದರ ಪರಿಣಾಮವಾಗಿ ಅರ್ಧಘಂಟೆಯಲ್ಲೇ ಯಜಮಾನ ಮೋಟರ್‌ಸೈಕಲ್‌ನಲ್ಲಿ ಬ್ಯಾಂಕ್‌ಗೆ ಬಂದ ''ಏನ್ ಸಾಹೆಬ್ರೆ'' ನನ್ನ ಹೆಂಡ್ರು ನನ್ನ ತರಾಟೆಗೆ ತೆಗೆದುಕೊಂಡಳು, ಅವಳಿಗೆ ಅವಳ ಸರ ಬಳೆ ಮೇಲೆ ಸಾಲ ತೆಗೆದುಕೊಂಡಿದ್ದೆ ಗೊತ್ತಿರಲಿಲ್ಲ. ನೀವು ಎಡವಟ್ಟು ಮಾಡಿಬಿಟ್ರಿ. ನಮ್ಮ ಒಡವೆ ಮೇಲೆ ಸಾಲಕೊಟ್ಟು ವಸೂಲಿಗೆ ಹೀಗೆ ಮೇಲ್‌ಬಿದ್ರೆ ಹೇಗೆ? ಎಂದು ರೇಗುತ್ತಾ ಚಿನ್ನದ ಸಾಲ ತೀರಿಸಿ, ಒಡವೆ ತೆಗೆದುಕೊಂಡು ಹೋದ. ಇನ್ಮೇಲೆ ರೈತರು ಇಲ್ಲದ ಸಮಯದಲ್ಲೇ ನಾನೇ ಅವರ ಮನೆಗಳಿಗೆ ಹೋಗಿ ಅವರ ಹೆಂಗಸರಿಗೆ ಒಡವೆ ಸಾಲದ ಬಗ್ಗೆ ಜ್ಞಾಪಿಸುವುದು ನನಗೆ ಒಳ್ಳೆದು ಎನಿಸಿತು!

ಹಿಂದಿನ ಕಷ್ಟದ ದಿನಗಳನ್ನು ನೆನಸಿಕೊಂಡಾಗ ಇತ್ತಿಚಿನ ಅತಿ ಹೆಚ್ಚಿನ ಚಿನ್ನದ ವ್ಯಾಮೋಹ ಕಂಡಾಗ 'ಮೊರಾರ್ಜಿ ಮತ್ತೊಮ್ಮೆ ಹುಟ್ಟಿ ಬಾ' ಎನಿಸುತ್ತದೆ. ಇಲ್ಲಸಲ್ಲದ ಬೆಲೆಯನ್ನು ನಾವೇ ಚಿನ್ನದ ಮೇಲೆ ಹೇರುತ್ತೇವೆ. ಎಲ್ಲರ ಮನೆಯಲ್ಲೂ ಎಷ್ಟು 'ಚಿನ್ನ'ವಿದೆ ಎಂದು ಡಿಕ್ಲೇರ್ ಮಾಡಬೇಕೆಂದು ಕಾನೂನು ಜಾರಿಯಲ್ಲಿತ್ತು. ಆಗೊಮ್ಮೆ ಹಾಸ್ಯಸಾಹಿತಿ ನಾಡಿಗೇರ್ ಕೃಷ್ಣರಾಯರು ತಮ್ಮಲ್ಲಿರುವ ಚಿನ್ನವನ್ನು ಡಿಕ್ಲೇರ್ ಮಾಡಲು ಪೋಲಿಸ್ ಇನ್ಸ್‌ಪೆಕ್ಟರ್‌ನನ್ನು ಮನೆಗೆ ಕರೆಸಿದರು. ಬಡಸಾಹಿತಿಯ ಮನೆಯಲ್ಲಿ 'ಚಿನ್ನವೆ?' ಎಂಬ ಕೌತುಕದಿಂದ ಬಂದ ಇನ್ಸ್‌ಪೆಕ್ಟರ್‌ಗೆ ಆಶ್ಚರ್ಯ ಕಾದಿತ್ತು. ಅವರು ಬರುತ್ತಿದ್ದಂತೆ ನಾಡಿಗೇರರವರು ''ಲೇ ಚಿನ್ನ'' ಎಂದು ಅವರು ಮಡದಿಯನ್ನು ಕರೆದು ''ನೋಡಿ ನನ್ನ ಬಳಿ ಇರುವ 80ಕೆ.ಜಿ'' ಎಂದರಂತೆ!

ಚಿನ್ನದ ತೂಕ ತಕ್ಕಡಿಯ ತಾಕತ್ತನ್ನು ಪರೀಕ್ಷಿಸಬಾರದಲ್ಲವೆ!

❑

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**– ದಂಡಿ**

- ಬದುಕುವುದಕ್ಕಾಗಿ ಆರೋಗ್ಯವಾಗಿರಬೇಕೇ ಹೊರತು ಆರೋಗ್ಯವಾಗಿರಲಿಕ್ಕೇ ಬದುಕಬಾರದು.
- ಆಯುಷ್ಯ ಬರೆಯುವವನು ಬ್ರಹ್ಮ ಎಂದು ನಂಬುತ್ತೇವೆ. ಅದನ್ನು ಸಿಗರೇಟ್ ಕಮ್ಮಿ ಮಾಡುತ್ತದೆ ಎಂದೂ ನಂಬುತ್ತೇವೆ. ಅಂದರೆ ಬ್ರಹ್ಮನಿಗಿಂತಲೂ ಸಿಗರೇಟ್ ಮಹಿಮೆಯೇ ಜಾಸ್ತಿ ಆದಂತಾಯಿತು. ಇಲ್ಲದಿದ್ದರೆ ಸಿಗರೇಟ್‌ನಿಂದ ಬ್ರಹ್ಮ ಬರೆದ ಆಯಸ್ಸು ಕಡಿಮೆ ಆಗುವುದಾದರೂ ಹೇಗೆ?
- ಗಂಡ ಹೆಂಡತಿ ಒಟ್ಟಿಗೆ ಇರುವುದನ್ನೇ ಅವಿಭಕ್ತ ಕುಟುಂಬ ಎಂದು ಕರೆಯಬಹುದಾದ ಸ್ಥಿತಿ 20 ವರ್ಷಗಳ ನಂತರ ಬರಬಹುದು.
- ನೊಬಡಿ ಈಸ್ ಪರ್‌ಫೆಕ್ಟ್ ಅಂಡ್ ಐ ಅಮ್ ಮಿ. ನೊಬಡಿ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಅರುಣ್ ಜೇಟ್ಲಿ ಪ್ರಕಾರ ರಾಹುಲ್ ಗಾಂಧಿ ಈಸ್ ಅನ್ ಎಕ್ಸ್‌ಪರ್ಟ್ ವಿಥೌಟ್ ನಾಲೆಡ್ಜ್.
- ಇಫ್ ಯು ಆರ್ ವಾಟ್ ಯು ಈಟ್ ಯು ಶುಡ್ ಅವಾಯ್ಡ್ ಈಟಿಂಗ್ ನಟ್ಸ್.
- ಹೆಣ್ಣುಗಳಿಲ್ಲದ ಕಡೆ ಬ್ರಹ್ಮಚಾರಿ ತನ್ನ ಬ್ರಹ್ಮಚಾರಿತ್ರ್ಯವನ್ನು ಕಾಪಾಡಿಕೊಳ್ಳುವುದು ಸುಲಭ.
- ನೀನು ಸರಿ ಇದ್ದಾಗ ಕೋಪ ಮಾಡಿಕೊಳ್ಳಬೇಕಾದ ಅಗತ್ಯ ಇರದು. ತಪ್ಪು ನಿನ್ನದೇ ಆದಾಗ ಕೋಪ ಮಾಡಿಕೊಳ್ಳಲು ಹೋಗಲೇಬಾರದು.
- ತಮ್ಮ ಎರಡೂ ಮುಖಗಳಿಗೆ ಮೇಕಪ್ ಮಾಡಿಕೊಳ್ಳುವುದು ಕಷ್ಟ ಎನ್ನುವ ಕಾರಣಕ್ಕೇ ರಾಜಕಾರಣದಲ್ಲಿ ಹೆಚ್ಚು ಮಹಿಳೆಯರಿಲ್ಲ.
- ನಗು ಎಂಬ ವಕ್ರರೇಖೆಗೆ ಎಲ್ಲವನ್ನೂ ನೇರ ಮಾಡುವ ಶಕ್ತಿ ಇದೆ.
- ನಾನು ಮರೆಯಲೇಬೇಕು ಎಂದುಕೊಂಡಿದ್ದ ಹುಡುಗಿಯ ಹೆಸರು ನೆನಪಾಗುತ್ತಲೇ ಇಲ್ಲ.
- ಬದುಕು ಎಂಬುದು ಒಂದು ಕ್ಲಿಷ್ಟ ಪರೀಕ್ಷೆ. ಅನೇಕರು ಫೇಲಾಗಲು ಕಾರಣ ಎಂದರೆ ಅವರು ಇತರರನ್ನು ನಕಲು ಮಾಡಲು ಹೋಗುತ್ತಾರೆ. ಆದರೆ ಪ್ರತಿಯೊಬ್ಬರ ಪ್ರಶ್ನೆ ಪತ್ರಿಕೆಯೂ ಬೇರೆ ಬೇರೆ ಇರುತ್ತದೆ ಎಂಬುದನ್ನು ಮರೆತಿರುತ್ತಾರೆ.
- ಎ ಗನ್ ವಿಲ್ ಗೆಟ್ ದಿ ಬಾಡಿ ಬಟ್ ನಾಟ್ ದಿ ಬರ್ಡ್.
- ಮಾರುವುದಕ್ಕೆ ಹೋಗಬೇಡ; ಕೊಳ್ಳುವುದಕ್ಕೆ ಕಾರಣಗಳನ್ನು ಸೃಷ್ಟಿಸು.

❑

# ಮಾರಾಯ್ರಾ, ಅದು ಹಾಗಲ್ಲ, ಹೀಗೆ..

**- ವಸುಮತಿ ಉಡುಪ**

**ಶಿ**ಸ್ತಾಗಿ ಅಲಂಕರಿಸಿಕೊಂಡು ಇಳಿಸಂಜೆಯ ಆರೂವರೆಗೆ ವಾಯುವಿಹಾರ ಹೊರಟ ವೃದ್ಧ ದಂಪತಿಯನ್ನು ಮನೆಯ ಕಿಟಕಿಯಿಂದ ನೋಡಿ ಶರಾವತಿ ಉತ್ಸುಕತೆಯಿಂದ ಗಂಡನನ್ನು ಕರೆದಳು.

'ರೀ, ಓಡ್ಬನ್ರೀ ಇಲ್ಲಿ, ಬೇಗ..'

'ಮದುವೆಯಾಗಿ ತಿಂಗಳಿಲ್ಲ ನೋಡಿರಣ್ಣ ಹೇಗಿದೆ, ನಾನು ಕೂಗಿದಾಗಲೆಲ್ಲ ಬರುವಳೆನ್ನ ಶಾರದೆ' ಅನ್ನುವ ಕವಿತೆ ಇಲ್ಲಿ ಸ್ವಲ್ಪ ತಿರುಗಾಮುರುಗಾ. ಇವರ ಮದುವೆಯಾಗಿ ವರ್ಷ ಕಳೆಯುವುದರಲ್ಲಿದೆ ಮತ್ತು ವಿಘ್ನೇಶ ಮಡದಿ ಕರೆದರೆ ಎಲ್ಲಿದ್ದರಲ್ಲಿಂದ, ಹೇಗಿದ್ದರೆ ಹಾಗೆ, ಹಾರಿ ಬರುತ್ತಾನೆ.

'ಏನೇ ಅದು, ಅರ್ಜೆಂಟು?'

ಜೋಕಾಗಿ ವಾಕಿಂಗ್ ಹೊರಟವರನ್ನು ತೋರಿಸಿದಳು ಶರಾವತಿ. ನೋಡಿದ ವಿಘ್ನೇಶ. ವಿಶೇಷವಾದ್ದೇನೂ ಕಾಣಲಿಲ್ಲ.

'ಏನಿದೆ ನೋಡೋಕೆ? ಈ ಊರಿಗೆ ನಿವೃತ್ತರ ಸ್ವರ್ಗ ಅಂತಾರೆ. ಇಂತೋರು ಬೇಕಾದಷ್ಟು ಜನ..'

'ಆ ಹೆಂಗಸು ಉಟ್ಟಿರೋ ಸೀರೆ ನೋಡ್ರೀ..'

ನೋಡಿದ ವಿಘ್ನೇಶ. ವಿಶೇಷವಾದ್ದೇನೂ ಕಾಣಲಿಲ್ಲ.

'ಏನಿದೆ ನೋಡೋಕೆ? ಈ ಊರು ರೇಷ್ಮೆಸೀರೆಗೆ ಪ್ರಸಿದ್ಧಿ. ದುಡ್ಡಿರೋ ಜನ ದಿನಾ ಉಡ್ತಾರೆ.'

'ಮುದುಕ ಭರ್ಜರಿ ದುಡ್ಡು ಮಾಡಿದಾನೆ ಅಂತ ಕಾಣುತ್ತೇರೀ. ಹೆಂಗಸಿನ ಕಿವಿ ಓಲೆ ವಜ್ರದ್ದಿರಬೇಕು. ಫಳ್ ಅಂತ ಹೇಗೆ ಹೊಳೀತಿದೆ..'

ನೋಡಿದ ವಿಘ್ನೇಶ. ವಿಶೇಷವಾದ್ದೇನೂ ಕಾಣಲಿಲ್ಲ.

'ಏನಿದೆ ನೋಡೋಕೆ? ರಿಟೈರ್ ಆಗೋ ಹೊತ್ತಿಗೆ ನಾನೂ ನಿಂಗೆ ವಜ್ರದ ಬೆಂಡೋಲೆ ಮಾಡಿಸಿಕೊಡ್ತೀನಿ, ಒಟ್ಟುಗಟ್ಟಲೆ ದುಡ್ಡು ಬಂದಾಗ..' ಅಂದ.

ಗಂಡಯ್ಯನಿಗೆ ವರ್ಗ ಆಗಿ ಇತ್ತೀಚೆಗೆ ಈ ಮನೆಗೆ ಬಂದು ಠಿಕಾಣಿ ಹೂಡಿದಾಗಿನಿಂದ ಶರಾವತಿಗೆ ನೆರೆಮನೆಯ ದಂಪತಿಯ ಮೇಲೆ ಕಣ್ಣು. ಆ ಮನೆಯ ಕೆಲಸಗಿತ್ತಿ ದಿವಸಾ ಬಟ್ಟೆ ಒಗೆದು ಹರಡುವುದು ಟೆರೇಸಿನ ಮೇಲೆ. ಶರಾವತಿ ತಮ್ಮ ಮನೆಯ ಬಟ್ಟೆ ಒಣಗಿಸಲು ಮೆಟ್ಟಿಲೇರಿ ಟೆರೇಸಿಗೆ ಹೋದಾಗ ಕಣ್ಣು ಸೆಳೆಯುತ್ತದೆ ಆ ಮನೆಯ ವಸ್ತ್ರ ವೈವಿಧ್ಯ. ಟವೆಲ್ಲು, ಬೆಡ್ ಸ್ಪ್ರೆಡ್ಡು, ಸೀರೆಗಳು, ಕೊನೆಗೆ ಸೊಳ್ಳೆಕರ್ಟನ್ ಕೂಡಾ ಏನೋ ಸ್ಪೆಷಲ್.

ಚಿತ್ತಾಕರ್ಷಕ ವರ್ಣವೈವಿಧ್ಯ. ಎಲ್ಲಿಂದ ಹೊಡೆದುಕೊಂಡು ಬರುತ್ತಾರೋ? ಈ ಊರಲ್ಲಿ ಇದ್ದು ಇದ್ದು ಎಲ್ಲೆಲ್ಲಿ, ಯಾವ್ಯಾವ ನಮೂನೆಯ ವಸ್ತುವಿಶೇಷಗಳು ಸಿಗುತ್ತವೆಯೋ ಎಲ್ಲಾ ಪತ್ತೆ ಮಾಡಿಕೊಂಡಿರುತ್ತಾರೆ. ಕೇಳಬೇಕು ಒಂದು ದಿನ ಆಂಟಿಯನ್ನು ಅಂದುಕೊಂಡಾಗಲೆಲ್ಲಾ ಆಂಟಿಯ ಮೇಲೆ ಒಂಥರಾ ಜಿಗುಪ್ಸೆ, ಅಸಹನೆ. ಗಂಡ ಬೇಕಾದ್ದು ಕೊಂಡುಕೊಡುತ್ತಾರೆ ಅಂದರೆ ಆತ್ಮಗೌರವವನ್ನೇ ಬಲಿ ಕೊಡಬೇಕಾ? ಒಂದು ಇದಿರು ಮಾತು? ಆಕ್ಷೇಪಣೆಯ ದನಿ? ಪ್ರತಿಭಟನೆ? ತಾನಾಗಿದ್ದರೆ ಯಾವತ್ತೋ ಡೈವೋರ್ಸ್ ಆಗಿ ಮರೆತೂ ಹೋಗಿರುತ್ತಿತ್ತೇನೋ? ಹಳೆಗಾಲದ ಹೆಂಗಸರು ಅಂದರೆ ಹೀಗೇನಾ? ಗಂಡ ಹೇಳಿದ್ದಕ್ಕೆಲ್ಲಾ ಕೋಲೆಬಸವ? ಅದಕ್ಕೆ ಪತಿವ್ರತಾಧರ್ಮ ಎನ್ನುವ ದೊಡ್ಡ ಹೆಸರು. ಆ ಗಂಡ ಅನಿಸಿಕೊಂಡವನಾದರೂ ಎಂತಾ ಪ್ರಾಣಿ? ಬೆಳಿಗ್ಗೆ ಎದ್ದಾಗಿನಿಂದ ಹೆಂಡತಿಗೆ ಸಹಸ್ರನಾಮಾರ್ಚನೆ ಶುರು. ಅಯ್ಯಬ್ಬಾ, ಮುದುಕನ ಗಂಟಲು ಅಂದರೆ ಗಂಟಲು. ಅಕ್ಕಪಕ್ಕದವರಿಗೆ ಕೇಳಿದರೆ ಏನೆಂದುಕೊಳ್ಳಬಹುದು ಎನ್ನುವ ಫಿಕೀರೇ ಇಲ್ಲ. ಎಷ್ಟೋ ಸಲ ಶರಾವತಿಗೆ ಅನಿಸುತ್ತಿತ್ತು, ಇದೂ ಸ್ತ್ರೀ ಶೋಷಣೆಯ ಒಂದು ಮುಖ. ಯಾವುದಾದರೂ ಸಂಘಟನೆಗೆ ವರ್ತಮಾನ ಮುಟ್ಟಿಸಿ ಮುದುಕನನ್ನು ಮಟ್ಟ ಹಾಕಬೇಕು. ಶರಾವತಿ ಆ ಮನೆಯ ಕಡೆಗಿನ ಕಿಟಕಿ ತೆಗೆದಿಟ್ಟಿರುತ್ತಾಳೆ ಮತ್ತು ಆ ಮನೆಯವರು ಈ ಕಡೆಗಿನ ಕಿಟಕಿ ಮುಚ್ಚಿರುತ್ತಾರೆ. ಕಿಟಕಿ ಮುಚ್ಚಿದ್ದರೆ ಸ್ವರ ಆಚೆಯಿಂದ ಈಚೆಗೆ ಕೇಳಿಸುವುದಿಲ್ಲ ಎಂದು ಮುದುಕನ ಹುನ್ನಾರ ಇರಬೇಕು. ಅವನ ಥರ ಕಿವಿ ಮಂದ ಆಗಿದೆಯಾ? ಒಂದು ದಿನ ತಪ್ಪಿಸದೆ ಹೆಂಡತಿ ಜೊತೆ ವಾಕಿಂಗ್ ಏನು, 'ಮಹಾ ಸುಭಗ' ಅನ್ನುವಂತಾ ಮುಖಚರ್ಯೆ ಏನು? ಎಲ್ಲಾ ನಾಟಕ..

★★★

ಗೌರಿಹಬ್ಬದ ದಿನ ಆಂಟಿ ಅರಿಶಿನ, ಕುಂಕುಮಕ್ಕೆ ಕರೆದಿದ್ದರು ಅಂತ ಮೊದಲ ಸಲ ನೆರೆಮನೆಗೆ ಹೋಗಿದ್ದಳು ಶರಾವತಿ. ನಡುಮನೆಯ ಸೋಫಾದಲ್ಲಿ ಕೂತು ಟೀವಿ ನೋಡುವುದರಲ್ಲಿ ಗರ್ಕಾಗಿದ್ದ ಮುದುಕ ಇವಳ ಕಡೆ ತಿರುಗಿ ನೋಡಿರಲಿಲ್ಲ. ವಿಶ್ವಾಸದಿಂದ ಒಳಗೆ ಕರೆದು ಕೂರಿಸಿ ಆಂಟಿ ಅರಿಶಿನ, ಕುಂಕುಮದ ಬೆಳ್ಳಿತಟ್ಟೆ ಎದುರಿಗೆ ಹಿಡಿದಿದ್ದಾರೆ, ಶರಾವತಿ ಬಟ್ಟಲಿನ ಅರಿಶಿನಕ್ಕೆ ಬೆರಳ ತುದಿ ಸೋಕಿಸಿದ್ದಾಳೆ, 'ನಡುರಸ್ತೇಲಿ ನಿಲ್ಸಿ ಕಲ್ಲಿಂದ ಹೊಡೀಬೇಕು, ಆಗ ಬರುತ್ತೆ ಬುದ್ಧಿ..' ಮುದುಕನ ದನಿ ಕಿವಿಗೆ ಅಪ್ಪಳಿಸಿತು. ಶರಾವತಿ ಬೆಚ್ಚಿ ಬಿದ್ದು ಆಂಟಿಯ ಮುಖ ನೋಡಿದರೆ ಅಲ್ಲಿ ಮುಗ್ಧ ಮಂದಹಾಸ. ಹೂವಿನ ದಂಡೆ ಕೊಟ್ಟು, ಮಡಿಲು ತುಂಬಿ, ಶರಾವತಿ ತುಂಬುಹೃದಯದಿಂದ ಆಂಟಿಯ ಕಾಲಿಗೆ ನಮಸ್ಕರಿಸುವಾಗ ಮತ್ತೆ ಮುದುಕನ ಅಸಮಾಧಾನದ ಸ್ಫೋಟ.

'ತೆಗೆದು ಎರಡು ಬಿಟ್ಟಾ ಅಂದ್ರೆ ಹಲ್ಲು ಉದುರಿ ಹೋಗ್ಬೇಕು. ಇಂತೋರನ್ನೂ ಸಹಿಸ್ಕೊಳ್ಳೋ ಜನ ಇರ್‍ತಾರೆ ಅಂದ್ರೆ ಕರ್ಮಾನೇ..'

'ಸುಮ್ನಿರಿ ಮಾರಾಯ್ರೇ..' ಒಳಗಿನಿಂದಲೇ ಗಂಡನಿಗೆ ಹುಕುಂ ಮಾಡಿದರು ಆಂಟಿ, ತಣ್ಣನೆಯ, ಸಣ್ಣನೆಯ ದನಿಯಲ್ಲಿ. ಶರಾವತಿಯ ಮುಖ ನೋಡುತ್ತಾ ಹೇಳಿದರು,

‘ಧಾರಾವಾಹಿ ನೋಡ್ತಾ ಬೈದೇ ಇದ್ರೆ ತಿಂದಿದ್ದು ಅರಗಲ್ಲ ಪುಣ್ಯಾತ್ಮರಿಗೆ. ಬೈತಾ ಇರೋದು, ಮತ್ತೆ ಅದನ್ನೇ ಬಾಯಿ ಕಳ್ಕೊಂಡು ನೋಡೋದು, ಅದೇ ಅಭ್ಯಾಸ ಆಗ್ಬಿಟ್ಟಿದೆ..’

‘ಅಷ್ಟೇನಾ?’ ತನ್ನನ್ನು ತಾನು ಭಾರೀ ಬುದ್ಧಿವಂತೆ ಅಂದುಕೊಂಡಿದ್ದ ಶರಾವತಿ ಪೆಚ್ಚುಪೆಚ್ಚು. ಗಂಡನ ಹತ್ತಿರ ಏನೆಲ್ಲಾ ಹೇಳಿ ಅವನಲ್ಲೂ ತಪ್ಪು ಅಭಿಪ್ರಾಯ ಮೂಡಿಸಿದ ಕುರಿತು ಪಶ್ಚಾತ್ತಾಪ. ಪ್ರತಿಕ್ರಿಯೆ ತೋರಿಸದೆ ಧಾರಾವಾಹಿ ನೋಡುವವರು ಇರಲಿಕ್ಕೇ ಇಲ್ಲ, ಆದರೆ ವಾಲ್ಯೂಂ ಎಷ್ಟಿರಬೇಕು ಅನ್ನುವ ತಿಳಿವಳಿಕೆ ಬೇಡವಾ? ‘ಮಾರಾಯ್ರಾ, ಅದು ಹಾಗಲ್ಲ, ಹೀಗೆ..’ ಎಂದು ಗಂಡಯ್ಯನಿಗೆ ವರದಿ ಒಪ್ಪಿಸಲು ಶರಾವತಿಯ ನಾಲಿಗೆ ತುರಿಸತೊಡಗಿತ್ತು.

❑

---

**ದಸರಾ ವಿಶೇಷ**

ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಅನೇಕ ಭಾಷೆಗಳಲ್ಲಿ ಪಾಂಡಿತ್ಯವಿತ್ತು. ಮಾತೃಭಾಷೆ ಕನ್ನಡ, ಸಂಸ್ಕೃತ, ಇಂಗ್ಲಿಷ್, ಉರ್ದು ಭಾಷೆಗಳಲ್ಲಿ ಸರಾಗವಾಗಿ ಭಾಷಣ ಮಾಡುತ್ತಿದ್ದರು. ಪಂಡಿತ ಮದನ ಮೋಹನ ಮಾಳವೀಯರು ಮೈಸೂರು ಸಂಸ್ಥಾನದ ಪ್ರಜೆಗಳು ಅತ್ಯಂತ ಸುಖಿಗಳು ಮತ್ತು ಅದೃಷ್ಟವಂತರು. ತಂಪಾದ ಹವೆ, ನೆಲ, ಜಲಗಳೊಂದಿಗೆ ರಾಜಋಷಿಯಾಗಿರುವ ಈ ಮಹಾರಾಜರನ್ನು ಪಡೆದಿದ್ದೀರಿ ಎಂದು ಶ್ಲಾಘಿಸಿದ್ದರು.

ಲಾಲಾ ರಜಪತರಾಯ್ ಅವರು ಮೈಸೂರಿನ ರಾಜ್ಯ ಅತ್ಯುನ್ನತ ಶ್ರೇಣಿಗೆ ಸೇರಿರುವ ಸಂಸ್ಥಾನವೆಂದು ಉತ್ತಮ ಸನಾತನ ರಾಜನಾದ ಇವರಿಗೆ ಮುಸಲ್ಮಾನ್ ಪಂಗಡದವರು ಪ್ರೈವೇಟ್ ಸೆಕ್ರೆಟರಿ ಆಗಿರುವುದು ಸಂಸ್ಥಾನದ ವೈಶಿಷ್ಟ್ಯ. ಈ ವೈಶಿಷ್ಟ್ಯಗಳೇ ರಾಜ್ಯವನ್ನು ಪ್ರತ್ಯೇಕ ಶ್ರೇಷ್ಠತೆಯಲ್ಲಿ ಮೇರು ಸ್ಥಾನದಲ್ಲಿರಿಸಿದೆ ಎಂದು ಬರೆದಿದ್ದರು.

# ಹುಟ್ಟು ಹಬ್ಬದ ಉಡುಗೊರೆ

**- ಬೇಲೂರು ರಾಮಮೂರ್ತಿ**

ಅವನು ತನ್ನ ಕೆಲಸಕ್ಕೆಂದು ಮನೆ ಬಿಟ್ಟಾಗ ಹತ್ತು ಗಂಟೆಯಾಗಿತ್ತು. ಆ ದಿನ ಅವನ ಆರು ವರ್ಷದ ಮಗುವಿನ ಹುಟ್ಟಿದ ಹಬ್ಬ. ಇವತ್ತು ನನಗೆ ವಾರದ ಸಂಬಳ ಬರುತ್ತೆ. ಬರುವಾಗ ನಿನಗೆ ಹೊಸ ಬಟ್ಟೆ, ಏನಾದರೂ ಉಡುಗೊರೆ ತರ್ತೀನಿ, ಸಿಹಿ ತಿಂಡಿ ಕಟ್ಟಿಸಿಕೊಂಡು ಬರ್ತೀನಿ ಅಂತ ಮಗುವಿಗೆ ಹೇಳಿದ್ದ. ಹಾಗೇ ಮುಂದಿನ ವಾರಕ್ಕೆ ಬೇಕಾಗುವ ಮನೆ ಪದಾರ್ಥಗಳನ್ನೂ ತರಬೇಕೆಂದು ಹೆಂಡತಿ ನೆನಪಿಸಿದ್ದಳು. ದೊಡ್ಡ ದೊಡ್ಡವರು ಮಾಡೋ ಹಾಗೆ ನಾವು ಒಂದು ದಿನ ಕೆಲಸಕ್ಕೆ ರಜ ಹಾಕಿ ಮನೇಲೇ ಇದ್ದು ಮಗುವಿಗೆ ಹೊಸ ಬಟ್ಟೆ ತಂದು, ಮನೇಲಿ ಹಬ್ಬದ ಅಡಿಗೆ ಮಾಡಿ ದೇವಸ್ಥಾನಕ್ಕೋ, ಸಿನಿಮಾಕ್ಕೋ ಹೋಗಿ ಸುಖ ಪಡೋದು ಕಷ್ಟ. ಒಂದು ದಿನ ಕೆಲಸಕ್ಕೆ ಹೋಗಲಿಲ್ಲ ಅಂದ್ರೆ ಮುಂದೆ ಯಾವತ್ತೋ ಒಂದು ದಿನ ಉಪವಾಸ ಅಂತ ನಿಶ್ಚಯ. ಹಬ್ಬ, ಹರಿದಿನ ಏನೇ ಆಗಲಿ ಕೆಲಸಕ್ಕೆ ಹೋಗೋದು ಅನಿವಾರ್ಯ.

ಮುನಿಸ್ವಾಮಿ ದಾರಿಯುದ್ದಕ್ಕೂ ಹೀಗೆ ಯೋಚಿಸಿಕೊಂಡೇ ಹೋಗುತ್ತಿದ್ದ. ಅವನು ಕೆಲಸ ಮಾಡುತ್ತಿದ್ದ ಕಟ್ಟಡದ ಮಾಲೀಕರಿಂದ ಅವತ್ತು ವಾರದ ಕೂಲಿ ಜೊತೆ ಕೊಂಚ ಮುಂಗಡಾನೂ ಕೇಳಿದ್ದ. ಅವರು ಕೊಡ್ತೀನಿ ಅಂತಾನೂ ಹೇಳಿದಾರೆ. ಇದರಿಂದ ಅವನ ಮನಸ್ಸಿಗೆ ಉಲ್ಲಾಸವಾಗಿತ್ತು.

ಎಂದಿನಂತೆ ಸಂಜೆ ಕೆಲಸ ಮುಗಿಸಿದಾಗ ಆರು ಗಂಟೆ. ವಾರದ ಬಟವಾಡೆ ಬಂತು. ಮುನಿಸ್ವಾಮಿ ನಿರೀಕ್ಷಿಸಿದ್ದ ಮುಂಗಡವೂ ಬಂತು. ಅವನು ಖುಷಿಯಿಂದ ಮಾಲೀಕರಿಗೆ ನಮಸ್ಕರಿಸಿ ಹೊರಟ. ಮೊದಲು ಮಗುವಿಗೆ ಆಗುವಂಥ ಬಟ್ಟೆ ತಗೊಂಡ. ನಂತರ ಅಂಗಡಿಗೆ ಹೋಗಿ ಸಾಕಷ್ಟು ಜಿಲೇಬಿ ಕಟ್ಟಿಸಿಕೊಂಡ. ಇನ್ನೇನು ಅಂಗಡಿಗೆ ಹೋಗಿ ಮನೆಗೆ ಬೇಕಾದ ದಿನಸಿ ತಗೋಬೇಕು ಎಂದುಕೊಂಡಾಗ ಎದುರಿನಿಂದ ಸಿದ್ದಪ್ಪ ಬರುತ್ತಿರೋದು ಕಾಣಿಸಿತು. ಅವನು ಕೆಲಸಕ್ಕೆ ಬಂದ ಹಾಗಿರಲಿಲ್ಲ. ಬಟವಾಡೆನೂ ತಗೊಂಡ ಹಾಗಿರಲಿಲ್ಲ. ಯಾವುದೋ ಯೋಚನೆಯಲ್ಲಿದ್ದ. ಸಿದ್ದಪ್ಪನನ್ನು ವಿಚಾರಿಸಿದಾಗ ಹೋದ ವಾರ ಹುಷಾರಿರಲಿಲ್ಲ. ಕೆಲಸಕ್ಕೆ ಬರೋಕೆ ಆಗಲಿಲ್ಲ. ಹೀಗಾಗಿ ಬಟವಾಡೆಯೂ ಇಲ್ಲ. ಮುಂಗಡ ಕೇಳಿದರೆ ಮಾಲೀಕರು ಕೊಡಲಿಲ್ಲ ಅಂದ. ಇಬ್ಬರೂ ದಾರಿ ಬದಿಯ ಅಂಗಡಿಯಲ್ಲಿ ಟೀ ಕುಡಿದು ಒಂದೊಂದು ಸಿಗರೇಟ್ ಸೇದಿದರು.

ಸಿದ್ದಯ್ಯ ಅಳುವಿನ ಧ್ವನಿಯಿಂದ ಹಾಗೆ ನೋಡಿದರೆ ಇವತ್ತು ನನ್ನ ಮಗನ ಹುಟ್ಟಿದ ಹಬ್ಬ. ಮನೇಲಿ ಏನೂ ಇಲ್ಲ. ಅದಕ್ಕೆ ಒಂದು ಹೊಸ ಬಟ್ಟೆ ತಂದುಕೊಡೋ ಯೋಗ್ಯತೆ ನನಗಿಲ್ಲ. ಸಿಹಿಯಂತೂ ದೂರದ ಮಾತೇ. ಇದ್ದಬದ್ದ ನಾಲ್ಕು ಕಾಸನ್ನು ಡಾಕ್ಟರಿಗೆ

ಕೊಟ್ಟಾಯಿತು. ಇನ್ನೊಂದು ವಾರ ಹೇಗೆ ಕಳೆಯೋದೋ ಏನೋ ಅಂದ. ಅವನ ಮನದಲ್ಲಿ ಅತೀವ ಸಂಕಟವಿತ್ತು.

ನಡೀ ನಿನ್ನ ಮನೆಗೆ ಹೋಗೋಣ ಅಂತ ಮುನಿಸ್ವಾಮಿ ಸಿದ್ದಪ್ಪನನ್ನು ಹೊರಡಿಸಿದ. ಅವನ ಮನೆಗೆ ಹೋದ ತಕ್ಷಣ ಸಿದ್ದಪ್ಪನ ಮಗು ಓಡಿ ಬಂದು ಅವನನ್ನು ಅಪ್ಪಿತು. ಅಪ್ಪ ನನಗೆ ಏನೋ ತಂದಿರಬಹುದು ಅಂತ ಹುಡುಕಿತು. ಮುನಿಸ್ವಾಮಿ ತನ್ನ ಮಗನಿಗೆಂದು ತಂದಿದ್ದ ಹೊಸ ಷರಟನ್ನು ಆ ಮಗೂಗೆ ಕೊಟ್ಟು ಇದು ನಿನ್ನ ಹುಟ್ಟಿದ ಹಬ್ಬಕ್ಕೆ ಅಂದ. ಜಿಲೇಬಿಯನ್ನೂ ಮಗುಗೆ ತಿನ್ನಿಸಿದ. ಸಿದ್ದಪ್ಪ ಇದೇನು ಮಾಡ್ತಿದೀಯ ಮನೆಗೆ ತಗೊಂಡು ಹೋಗಕ್ಕೆ ಅಂತ ಇಟ್ಕೊಂಡಿದ್ದನ್ನು ನನ್ನ ಮಗುಗೆ ಕೊಟ್ಯಲ್ಲ ಅಂದ. ಮುನಿಸ್ವಾಮಿ ತನ್ನ ವಾರದ ಬಟವಾಡೆಯಿಂದ ಒಂದಿಷ್ಟು ಹಣವನ್ನೂ ಅವನಿಗೆ ಕೊಟ್ಟು ರೇಷನ್ ತಗೊಂಡು ಬಾ ಅಂದ. ಆ ಕ್ಷಣದಲ್ಲಿ ಸಿದ್ದಪ್ಪ ಅವನ ಹೆಂಡತಿ ಮತ್ತು ಮಗುವಿನ ಮುಖದಲ್ಲಿ ಕಂಡ ಆನಂದದಿಂದ ಮುನಿಸ್ವಾಮಿ ಮನಸ್ಸು ಹಗುರವಾಯಿತು. ನಿಜವಾದ ಸುಖ, ಆನಂದ ಅಂದ್ರೆ ಇದೇ ಅಂದುಕೊಂಡ.

ಮುನಿಸ್ವಾಮಿ ಉಳಿದ ದುಡ್ಡಲ್ಲಿ ತನ್ನ ಮನೆಗೆ ರೇಷನ್ ತಗೊಂಡು ಹೋದ. ಹೆಂಡತಿ ಇದೇನು ಮಗೂಗೆ ಹೊಸ ಬಟ್ಟೆ ಸಿಹಿ ತಿಂಡಿ ತರ್ತೀನಿ ಅಂದಿದ್ಯಲ್ಲ ಅಂತ ಕೇಳಿದ್ದಕ್ಕೆ ನನಗೆ ಹಿರಿಯರೊಬ್ಬರು ಹೇಳಿದರು ಮಗು ಹುಟ್ಟಿದ ಹಬ್ಬನ ಅದೇ ದಿನ ಮಾಡದೇ ಸ್ವಲ್ಪ ದಿನ ಹೆಚ್ಚಿಸಿ ಮಾಡಿದರೆ ಮಗೂಗೆ ಒಳ್ಳೇದಾಗುತ್ತಂತೆ. ಅದಕ್ಕೆ ನಾವು ನಮ್ಮ ಮಗು ಹುಟ್ಟಿದ ಹಬ್ಬನ ಮುಂದಿನ ವಾರ ಮಾಡೋಣ. ಅದಕ್ಕೇ ಇವತ್ತು ಏನೂ ತರಲಿಲ್ಲ ಅಂದ.

ಸಿದ್ದಪ್ಪನ ಮನೆಯಲ್ಲಿ ಕಂಡ ಆನಂದದ ಕ್ಷಣಗಳನ್ನು ಮತ್ತೆ ನೆನಪು ಮಾಡಿಕೊಂಡ ಮುನಿಸ್ವಾಮಿ ನಮ್ಮ ಮತ್ತು ನಮ್ಮ ಮಕ್ಕಳ ಹುಟ್ಟಿದ ಹಬ್ಬದ ದಿನ ನಾವು ಮಾತ್ರ ಸುಖ ಸಂತೋಷಪಟ್ಟರೆ ಸಾಲದು, ಬೇರೆಯವರನ್ನೂ ಸ್ವಲ್ಪವಾದರೂ ಸಂತೋಷಪಡಿಸಿದರೆ ಅದೇ ನಿಜವಾದ ಹುಟ್ಟಿದ ಹಬ್ಬ ಅನಿಸಿತು. ಮುಂದಿನ ವಾರ ನನ್ನ ಮಗನ ಹುಟ್ಟಿದ ಹಬ್ಬನ ಚೆನ್ನಾಗಿ ಮಾಡೋಣ ಅಂದುಕೊಂಡ.

❑

---

## ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

3. ಅವಿವೇಕಿ 5. ಪರಂಪರೆ 6. ಪರಸತಿ 8. ನಾಡಿ 9. ಸತ್ಯ 10. ಮತಿಹೀನ 13. ಪಾರಂಗತ 14. ಸಮಾರೋಪ

**ಮೇಲಿಂದ ಕೆಳಕ್ಕೆ**

1. ತಾಪತ್ರಯ 2. ಅಪರೂಪ 3. ಅನುಮತಿ 4. ಕಿಡಿಗೇಡಿ 7. ಸದ್ಗತಿ 9. ಸಹವಾಸ 10. ಮನಸ್ತಾಪ 11. ನವರಂಗ 12. ಅವಾಂತರ

ಸಿಂಗಪುರ ಪತ್ರ

# ಮೇಯ್ಡ್ ಇನ್ ಸಿಂಗಪುರ

**- ರೇಖಾ ಹೆಗಡೆ ಬಾಳೇಸರ**

ಸಿಂಗಪುರದ ಯಾವುದೇ ಸೂಪರ್ ಮಾರ್ಕೆಟ್ ಹೊಕ್ಕರೆ 'ಮೇಡ್ ಇನ್ ಸಿಂಗಪುರ್' ವಸ್ತುಗಳು ನಿಮಗೆ ಒಟ್ಟಾರೆ ಕಾಣದೇ ಇರಬಹುದು, ಆದರೆ 'ಮೇಯ್ಡ್ ಇನ್ ಸಿಂಗಪುರ' ಮಾತ್ರ ಹೋದಲ್ಲಿ, ಬಂದಲ್ಲಿ ಎಡತಾಕುತ್ತಾರೆ. ಯಾರು ಅಂದ್ರಾ? ಅದೇ ಕಣ್ರೀ, ಮನೆ ಕೆಲಸದಾಕೆಯರು. ಔಪಚಾರಿಕವಾಗಿ ಹೇಳಬೇಕೆಂದರೆ 'ವಿದೇಶಿ ಗೃಹಕೃತ್ಯ ಕೆಲಸಗಾರರು' ಆಡುಭಾಷೆಯಲ್ಲಿ ಮೇಯ್ಡ್‌ಗಳು ಅರ್ಥಾಥ್ ಮನೆಗೆಲಸದ ಮಹಿಳೆಯರು!

**ವರ್ಷಗಟ್ಟಲೇ ತಮ್ಮ ಸ್ವಂತ ಮಕ್ಕಳಿಂದ, ಕುಟುಂಬದಿಂದ ದೂರವಿರುವ ಈ ಮೇಯ್ಡ್‌ಗಳು ಇಲ್ಲಿ ಬೇರೆ ಯಾರದೋ ಮಗುವಿಗೆ ತಾಯಾಗಿ ಬದುಕುತ್ತಾರೆ.**

ಸಿಂಗಪುರದ ಮಧ್ಯಮವರ್ಗದ ಜೀವನದೋಟದಲ್ಲಿ ಗಂಡ-ಹೆಂಡತಿ ಇಬ್ಬರು ಸುಗಮವಾಗಿ ಓಡುವ ಕಾಲುಗಳಾದರೆ, ಮಕ್ಕಳು ಆ ಕಾಲುಗಳಿಗೆ ತೊಡರು ಹಾಕುವ ನೆರಿಗೆ, ಚುಂಗುಗಳು... ಇಂಥ ಸ್ಪೀಡ್ ಬ್ರೇಕರುಗಳನ್ನು ಒಪ್ಪವಾಗಿ ಎತ್ತಿ, ಸಂಭಾಳಿಸಿ, ಅಪ್ಪ-ಅಮ್ಮನ ನಾಗಾಲೋಟಕ್ಕೆ ಸಿಗ್ನಲ್‌ಫ್ರೀ ದಾರಿ ತೋರಿಸುವ ಕೈಗಳು ಮೇಯ್ಡ್‌ಗಳು. ಮಕ್ಕಳ ಪಾಲಿನ 'ಆಂಟಿ'ಯರು. ಮನೆಯಲ್ಲಿ ಉಳಿದು, ದುಡಿಯುವ ಈ ಮೇಯ್ಡ್‌ಗಳನ್ನು ಸೇರಿಸಿಕೊಳ್ಳದೇ ಹೋದಲ್ಲಿ ಇಲ್ಲಿನ ಮುಕ್ಕಾಲಂಶ ಮನೆಗಳ ಚಿತ್ರಣ ಅಪೂರ್ಣ.

ದಿನಾ ಬೆಳಿಗ್ಗೆ ಶಾಲೆ ಶುರುವಾಗುವ ಹೊತ್ತಿನಲ್ಲಿ ಗರಿಗರಿ ಯುನಿಫಾರ್ಮ್ ಹಾಕಿ, ಮಿರಿಮಿರಿ ಮಿಂಚುತ್ತ ಕೈಬೀಸಿ ಹೊರಟ ಮಗುವಿನ ಜೊತೆ ಅದರ ಪಾಟಿಚೀಲ, ತಿಂಡಿಚೀಲ ಹೊತ್ತ ಅರೆಮಾಸಿದ ಬಟ್ಟೆ ತೊಟ್ಟ ಯುವತಿಯೊಬ್ಬಾಕೆ ಸರಸರ ಸಾಗುತ್ತಿದ್ದಾಳೆಂದರೆ ಶಂಕೆಯೇ ಇಲ್ಲ, ಆಕೆ ಒಬ್ಬ ಮೇಯ್ಡ್. ಶಾಲೆ, ಕಚೇರಿಗೆ ಹೋಗುವವರೆಲ್ಲ ಅತ್ತ ತೆರಳುತ್ತಿದ್ದಂತೆ ಇತ್ತ ಕೈಲೊಂದು ಗಾಲಿಚೀಲ ಹಿಡಿದು ದಿನಸಿ, ತರಕಾರಿ ಖರೀದಿಗೆಂದು ಸೂಪರ್ ಮಾರ್ಕೆಟ್‌ಗೆ ಸೂಪರ್ ವೇಗದಲ್ಲಿ ಸಾಗುವವಳೂ ಮೇಯ್ಡ್! ವಯಸ್ಸಾದ ಅಜ್ಜನನ್ನೋ, ಅಜ್ಜಿಯನ್ನೋ ಗಾಲಿಕುರ್ಚಿಯಲ್ಲಿ ಕುಳ್ಳಿರಿಸಿಕೊಂಡು, ಹವಾಸೇವನೆಗೆ ಕರೆ ತರುವವಳು ಅವಳು. ತುಂಟ ಮಗುವಿನ ಟೈಂಪಾಸಿಗೆಂದು ಕೈಗಾಡಿಯಲ್ಲಿ ಕೂಡ್ರಿಸಿಕೊಂಡು ಅತ್ತ, ಇತ್ತ, ಮನೆ ಸುತ್ತ ಸುತ್ತು ಹೊಡೆಸುವವಳೂ ಅವಳೇ.

ಇಲ್ಲಿನ ಬಹುತೇಕ ಮನೆಗಳಲ್ಲಿ ಗಂಡ-ಹೆಂಡತಿ ಇಬ್ಬರೂ ದುಡಿಯುವವರೇ. ಭಾರಿ ದುಬಾರಿಯ ಊರು ಸಿಂಗಪುರ. ಉಂಡುಟ್ಟು, ಸುಖ ಸೌಲಭ್ಯಗಳಿಂದ ಬದುಕಬೇಕೆಂದರೆ ಎರಡು ಮೂಲಗಳಿಂದ ಬರುವ ಆದಾಯ ಅನಿವಾರ್ಯ ಇಲ್ಲಿ. ಡಿಸೈನರ್ ಬ್ಯಾಗು, ಬಟ್ಟೆ

ಧರಿಸುತ್ತ, ಬಿಎಂಡಬ್ಲ್ಯುನಂತಹ ಲಕ್ಷುರಿ ಕಾರಿನಲ್ಲಿ ತಿರುಗುತ್ತ, ವಿದೇಶಗಳಲ್ಲಿ ರಜಾ ಮಜಾ ಸವಿಯುವ ಜೀವನಶೈಲಿ ಕಾಪಾಡಿಕೊಂಡು ಹೋಗುವುದು ಸುಲಭವಲ್ಲ. ಇದು ಮೇಲ್ವರ್ಗದವರ ಪಾಡಾದರೆ, ಇನ್ನು ಇವರಂತೆ ಆಗಬಯಸುವ ಮಧ್ಯಮವರ್ಗದವರಿಗೂ ಅದಕ್ಕಿರುವ ಏಕೈಕ ದಾರಿ ಎಂದರೆ ಉದ್ಯೋಗ. ಜೊತೆಗೆ ಭಾರತದಂತೆ ಅಪ್ಪ-ಅಮ್ಮ, ಮಗ-ಸೊಸೆ, ಮೊಮ್ಮಕ್ಕಳು ಎಲ್ಲ ಸೇರಿ ಬದುಕುವವರು ಅನೇಕ ಜನ. ಅಜ್ಜ-ಅಜ್ಜಿಗೆ ಮೊಮ್ಮಕ್ಕಳನ್ನು ಹೇಗೆ ನೋಡಿಕೊಳ್ಳಬೇಕು ಎಂಬ ಕಲ್ಪನೆ ಇರುತ್ತದಾದರೂ ಅದನ್ನು ಕಾರ್ಯಗತಗೊಳಿಸಲು ವಯಸ್ಸು ಬಿಡುವುದಿಲ್ಲ, ಸೊಂಟ ಬಗ್ಗುವುದಿಲ್ಲ. ಬದುಕಲು ಬಂಗಲೆ ಉಂಟು, ಶುದ್ಧವಿಟ್ಟುಕೊಳ್ಳುವ ಶಕ್ತಿ ಇಲ್ಲ. ಇಂತಹ ಎಲ್ಲ ಸಂದರ್ಭಗಳಲ್ಲಿ ಸಲ್ಲುವವರು ಮತ್ತದೇ ಮೇಯ್ಡ್‌ಗಳು. ಸಧ್ಯದ ಸ್ಟಾಟಿಸ್ಟಿಕ್ಸ್ ಪ್ರಕಾರ ಸಿಂಗಪುರದಲ್ಲಿ 2,10,000 ರಿಜಿಸ್ಟರ್ಡ್ ಮನೆಕೆಲಸದಾಕೆಯರಿದ್ದಾರಂತೆ. ಅಂದಹಾಗೆ ಇಲ್ಲಿನ ಜನಸಂಖ್ಯೆ 54 ಲಕ್ಷದ ಮೇಲಿದೆ, ವಿದೇಶೀಯರನ್ನೂ ಸೇರಿಸಿ.

ಸಿಂಗಪುರದ ಮನೆಗಳಲ್ಲಿ ಕೆಲಸ ಮಾಡಲು ಬರುವ ಬಹುಪಾಲು ಮಹಿಳೆಯರು ನೆರೆಯ ಇಂಡೋನೇಷ್ಯ, ಫಿಲಿಪ್ಪೀನ್ಸ್‌ನವರು. ಮಿಯನ್ಮಾರ್ ಮೂಲದವರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಫಿಲಿಪ್ಪಿನಾ ಕೆಲಸದಾಕೆಗೆ ಹೆಚ್ಚು ಬೇಡಿಕೆ, ಸಂಬಳವೂ ಹೆಚ್ಚು. ಏಕೆಂದರೆ ಅವರು ಸಾಮಾನ್ಯವಾಗಿ ಸುಲಲಿತ ಇಂಗ್ಲೀಷ್ ಮಾತನಾಡಲು ಬಲ್ಲರು. ಹೀಗೆ ಸಿಂಗಪುರ, ಹಾಂಕಾಂಗ್, ದುಬೈನಂತಹ ಊರುಗಳಿಗೆ ಮನೆಕೆಲಸಕ್ಕೆ ತೆರಳುವವರಿಗೆಂದೇ ವಿಶೇಷ ತರಬೇತಿ ನೀಡುವ ಸಂಸ್ಥೆಗಳು ಇಂಡೋನೇಷ್ಯ, ಫಿಲಿಪ್ಪೀನ್ಸ್‌ನಲ್ಲಿವೆ. ಮನೆವಾರ್ತೆಯಿಂದ ಹಿಡಿದು, ಮಕ್ಕಳನ್ನು ಸಂಭಾಳಿಸುವವರೆಗೆ ಅಲ್ಲಿ ತರಬೇತಿ ನೀಡುತ್ತಾರೆ. ಹೇಳಿದ್ದನ್ನು ಅರ್ಥ ಮಾಡಿಕೊಳ್ಳುವಷ್ಟು, ಅರ್ಥ ಆಗುವಂತೆ ಮಾತನಾಡುವಷ್ಟು ಇಂಗ್ಲೀಷ್ ಹೇಳಿಕೊಡುತ್ತಾರೆ. ಆಮೇಲೆ ಅವರಿಗೊಂದು ಪರೀಕ್ಷೆ ಕೈಗೊಂಡು, ಅವರು 'ಮನೆಗೆಲಸ ಪರೀಕ್ಷೆ'ಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಸರ್ಟಿಫಿಕೇಟ್ ನೀಡಿ ಕಳಿಸುತ್ತಾರೆ. ಇಲ್ಲಿನ ಮೇಯ್ಡ್ ಹಂಚಿಕೆ ಏಜೆನ್ಸಿಗಳು ಅವರನ್ನು ಕರೆಸಿ, ಕೆಲಸ ಒದಗಿಸುತ್ತವೆ. ಇದೆಲ್ಲ ನಡೆಯುವುದು ಮಾನವ ಸಂಪನ್ಮೂಲ ಇಲಾಖೆಯ ನಿಗರಾನಿಯಲ್ಲಿ. ಕೆಲಸದವರನ್ನು ಇಟ್ಟುಕೊಳ್ಳಲೂ ಇಲಾಖೆಯ ಅನುಮತಿ ಬೇಕು, ಲೆವಿ ತೆರಬೇಕು! ಮನೆಗೆಲಸ ಎಂದರೆ ಕಸ, ಮುಸುರೆ ಬಳಿಯಲು ಬಂದರಾಯಿತು ಎಂದವರಾರು!? ಅದೆಲ್ಲಾ ಹಿಂದಾನೊಂದು ಕಾಲದಲ್ಲಿ!

ಇನ್ನು ಉಳಿದಂತೆ ಭಾರತ, ಶ್ರೀಲಂಕಾ, ವಿಯೆಟ್ನಾಂ ಮತ್ತಿತರ ದೇಶಗಳಿಂದ ಮನೆಗೆಲಸಕ್ಕೆಂದು ಬರುವವರೂ ಇದ್ದಾರೆ. ಅವರೆಲ್ಲ ಹೆಚ್ಚಿನದಾಗಿ ಆಯಾ ದೇಶದ ಮೂಲದ ಮಾಲೀಕರ ಮನೆಗಳಲ್ಲಿ 'ಆಯಾ' ಕೆಲಸಕ್ಕೋ, ಅಡುಗೆ ಕೆಲಸಕ್ಕೋ ಬರುವವರು. ತವರು ದೇಶದಲ್ಲಿನ ಬಡತನ, ಕುಟುಂಬ ಪಾಲನೆಯ ಹೊಣೆಗಾರಿಕೆ, ಕೆಲಸದ ಅಲಭ್ಯತೆ, ಇಲ್ಲಿನ ಡಾಲರ್ ಸಂಬಳದ ಆಮಿಷ... ಹೀಗೆ ನಾನಾ ಕಾರಣಕ್ಕೆ ಜನ ಇತ್ತ ಬರುತ್ತಾರೆ. ಇವರಿಗೆ ಕನಿಷ್ಠ ವೇತನ ನಿಗದಿ ಇದೆ, ವಾರಕ್ಕೊಂದು ದಿನ ರಜೆ ನೀಡಬೇಕು, ಸರಿಯಾಗಿ ಊಟ ನೀಡಬೇಕು ಎಂಬೆಲ್ಲ ಸರ್ಕಾರಿ ನಿಯಮಗಳೂ ಇವೆ.

ಅಂದ ಹಾಗೆ ಈ ಫಿಲಿಪ್ಪೀನ್ಸ್, ಇಂಡೋನೇಷ್ಯ ಮತ್ತಿತರ ಆಗ್ನೇಯ ಏಷ್ಯ ಮೂಲದ ಮೇಯ್ಡ್‌ಗಳ ಅನಧಿಕೃತ ಯುನಿಫಾರ್ಮ್ ಎಂದರೆ ಒಂದು ಟೀ-ಶರ್ಟ್, ಗಿಡ್ಡ ಚಡ್ಡಿ. ಸಿಂಗಪುರದ ಹವಾಮಾನಕ್ಕೆ ಸೂಕ್ತ ದಿರಿಸು! ಹೆಚ್ಚಿನವರು ಕುಳ್ಳಿಯರು, ಸಣ್ಣ ದೇಹ. ಸಾಮಾನ್ಯ ಸಿಂಗಪುರಿಯನ್ ಜನರ ಚೀನಿ/ಮಲಯ್/ತಮಿಳು ಮುಖಕಟ್ಟಿಗಿಂತ ಭಿನ್ನವಾದ ಆಗ್ನೇಯ ಏಷ್ಯ ಮುಖ. ನಮ್ಮೂರಿನಂತೆ ಪಾತ್ರೆ ತೊಳೆಯಲಿಕ್ಕೆ ಇಷ್ಟು, ಕಸ ಗುಡಿಸಿ ಒರೆಸಲು ಇಷ್ಟು ಎಂದೆಲ್ಲ ಲೆಕ್ಕ ಕೇಳುವಂತಿಲ್ಲ. ಮಾಲೀಕರ ಮನೆಯಲ್ಲಿ ಉಳಿದು, ಉಂಡು, ಹೇಳಿದ ಎಲ್ಲ ಕೆಲಸ ಮಾಡಬೇಕು. ಎರಡು ವರ್ಷಕ್ಕೊಮ್ಮೆ ಸ್ವಂತ ದೇಶಕ್ಕೆ, ರಜೆಯ ಮೇಲೆ ಹೋಗಬಹುದು. ವಾರಕ್ಕೊಮ್ಮೆ ರಜೆ ಪಡೆದು (ಸಾಮಾನ್ಯವಾಗಿ ಭಾನುವಾರ) ತಂತಮ್ಮ ಸ್ನೇಹಿತೆ/ತರೊಂದಿಗೆ ಮೋಜು ಮಾಡುತ್ತಾರೆ.

ಹೀಗೆ ಮೋಜು ಮಾಡುವಾಗ ಎಲ್ಲೆಲ್ಲೋ ಕ್ರಾಸ್ ಕನೆಕ್ಷನ್ ಬೆಳೆದು ಗೋಜಲಾಗುವುದೂ ಉಂಟು. ಪರಿಚಯದವರೊಬ್ಬರ ಮನೆಯಲ್ಲಿ ಒಂದಿನ ಪುಟ್ಟ ಮಗಳು 'ಆಂಟಿ' ಜೊತೆ 'ಅಂಕಲ್' ಎನ್ನುವ ಶಬ್ದವನ್ನೂ ಆಡಲು ತೊಡಗಿದಾಗ ತಂದೆ-ತಾಯಿ ಬೆಚ್ಚಿಬಿದ್ದರು. ಪರೀಕ್ಷಿಸಿ ನೋಡಲೆಂದು ಕ್ಯಾಮೆರಾ ಅಳವಡಿಸಿದಾಗ, ಮನೆಕೆಲಸದಾಕೆ ತನ್ನ ಬಾಯ್‌ಫ್ರೆಂಡ್ ಅನ್ನು ಮನೆಗೆ ಕರೆತರುತ್ತಿದ್ದುದು ಗೊತ್ತಾಯಿತು. ಪುಟ್ಟಮಗಳ ಸುರಕ್ಷತೆ ಹಾಗೂ ಕುಟುಂಬದ ಮರ್ಯಾದೆಯ ದೃಷ್ಟಿಯಿಂದ ಆಕೆಗೆ ಗೇಟ್‌ಪಾಸ್ ಕೊಡುವುದು ಅನಿವಾರ್ಯವಾಯಿತು. ಯುಎಸ್‌ಎಯಲ್ಲಿ ಜನಪ್ರಿಯವಿರುವ 'ನ್ಯಾನ್ನಿ ಕ್ಯಾಮ್' (ದಾಯಿಯ ಮೇಲೆ ಕಣ್ಣಿಡಲು ಬಳಸಲು ಉಪಯೋಗಿಸುವ ಗುಪ್ತ ಕ್ಯಾಮೆರಾ) ತರಹವೇ ಇಲ್ಲೂ ಅನೇಕ ಮನೆಗಳಲ್ಲಿ 'ಮೇಯ್ಡ್ ಕ್ಯಾಮ್' ಬಳಕೆಯಲ್ಲಿದೆ.

ಸ್ನೇಹಿತರೊಬ್ಬರ ಮನೆಯಲ್ಲೂ ಹೀಗೆ ಒಬ್ಬಾಕೆ ಕೆಲಸದಾಕೆ. ಒಂದಿನ ಕಿಟಕಿ ಒರೆಸಲು ಹೇಳಿದರು ಮನೆಯಾಕೆ. ಕಿಟಕಿಯೋ ಗೋಡೆಯುದ್ದಕ್ಕೂ ಇತ್ತು, ಮೇಯ್ಡ್ ಮೂರು ಮುಕ್ಕಾಲು ಅಡಿ ಮಾತ್ರ! ಸರಿ, ಸ್ಟೂಲು ತಂದು ಹಾಕಿ ಮಾಡಿಬಿಡು ಎಂದು ಮನೆಯಾಕೆ ಸೂಚಿಸುತ್ತಿದ್ದಂತೆ ಅದನ್ನು ತಂದು ಅವರೆದುರು ಇಟ್ಟ ಮೇಯ್ಡ್, 'ಯು ವೈಫ್, ಐ ಶಾರ್ಟ್' ಎಂದು ಶಾರ್ಟಾಗಿ ಹೇಳಿದಳಂತೆ, ಹರುಕುಮುರುಕು ಇಂಗ್ಲೀಷಿನಲ್ಲಿ, ಹಾವಭಾವಸಹಿತ. ಅವಳ ಹತ್ರ ಅಭಿನಯಪೂರ್ವಕ ವಾದ ಮಾಡಲು ಒಲ್ಲದ, ಅವಳ ಆಕಾರದೆದುರು ಸೋತ ಮನೆಯಾಕೆ ಗತಿ ಇಲ್ಲದೇ ತಾವೇ ಒರಸುವ ಬಟ್ಟೆ ಕೈಗೆತ್ತಿಕೊಂಡರಂತೆ.

ಇನ್ನೊಮ್ಮೆ ಇನ್ನೊಬ್ಬ ಮನೆಕೆಲಸದಾಕೆ. ಆಕೆಗೂ ಕಿಟಕಿ ಒರೆಸಲು ಹೇಳಿದ್ದರು ಮನೆಯಾಕೆ. ಮನೆಯ ಒಳಭಾಗದಿಂದ ಮಾತ್ರ ಒರೆಸಿದ ಆಕೆ ಹೊರಗಡೆ ಹಾಗೆಯೇ ಬಿಟ್ಟಿದ್ದಳು. 'ಏಕೆ ಒರೆಸಿಲ್ಲ' ಎಂದು ಕೇಳಿದ್ದಕ್ಕೆ, 'ರೇಯ್ನ್ ವಿಲ್ ಕ್ಲೀನ್' (ಮಳೆ ಸ್ವಚ್ಛಗೊಳಿಸುತ್ತದೆ) ಎಂದಳಾಕೆ. 'ನಾಯಿಗೆ (ಕೆಲಸ) ಹೇಳಿದರೆ, ನಾಯಿ ತನ್ನ ಬಾಲಕ್ಕೆ ಹೇಳಿತಂತೆ' ಎಂಬ ಗಾದೆ ಇದೆ ನಮ್ಮ ಕಡೆ. ಇದೂ ಹಂಗಾಯ್ತು.

ನಮ್ಮ ಪಕ್ಕದ ಮನೆಯಲ್ಲಿ ಇಬ್ಬರು ಪರಮ ತುಂಟ ಮಕ್ಕಳು, ಎಂಟು ವರ್ಷದ ಅಣ್ಣ, ಮೂರರ ತಂಗಿ. ಗುಂಡು ಗುಂಡಾಗಿ, ಬಲಿಷ್ಠವಾಗಿಯೂ ಇದ್ದರು. ಅಪ್ಪ-ಅಮ್ಮ ಕೆಲಸಕ್ಕೆ

ಹೋಗುತ್ತಿದ್ದುದರಿಂದ ಇವರ ಲಾಲನೆ, ಪಾಲನೆ ಕೆಲಸಗಳೆಲ್ಲ ಮೇಯ್ಡ್ ಹೊಣೆ. ಲೆಕ್ಕ ಮಾಡಿದ್ರೆ ಮೂರೇ ಮೂರು ಅಡಿ ಉದ್ದ ಇರಬಹುದಾದ ಆಕೆ ಈ ಇಬ್ಬರು ಹೈಪರ್ ಆಕ್ಟೀವ್ ಮಕ್ಕಳನ್ನು ನಿಭಾಯಿಸುತ್ತಿದ್ದಳು ಎಂಬುದೇ ನನಗೆ ಸೋಜಿಗವಾಗಿತ್ತು ಮೊದಲು. ಆಕೆಯ ಗಂಟಲು ದೊಡ್ಡದಿತ್ತು ಎಂಬುದು ಆಮೇಲೆ ತಿಳಿಯಿತು, ಅದು ಬೇರೆ ವಿಷಯ.


ಇನ್ನೊಂದು ಮನೆಯಲ್ಲಿ ಮಕ್ಕಳಿಬ್ಬರಿಗೂ ಬೇಕೆಂದಾಗ ಆಟ ಆಡಿಸಿ, ರುಚಿರುಚಿ ಅಡುಗೆ ಮಾಡಿ ಬಡಿಸುವ ಮನೆಕೆಲಸದ ಆಂಟಿಯೇ ಅದಕು, ಇದಕು, ಯದಕೂ ಎಲ್ಲ ಆಗಿದ್ದಳು. ದಿನಾ ರಾತ್ರಿ ಮನೆಗೆ ಬರುವ ತಂದೆ-ತಾಯಿ ಆಗೀಗ ಪಾಕೆಟ್‌ಮನಿ ಕೊಡಲಷ್ಟೇ. ಬಹಳಷ್ಟು ಮೇಯ್ಡ್‌ಗಳು ಹೀಗೆಯೇ! ಪರಿಣಾಮ, ವರ್ಷಗಟ್ಟಲೇ ತಮ್ಮ ಸ್ವಂತ ಮಕ್ಕಳಿಂದ, ಕುಟುಂಬದಿಂದ ದೂರವಿರುವ ಈ ಹೆಂಗಸರು, ಇಲ್ಲಿ ಬೇರೆ ಯಾರದೋ ಮಗುವಿಗೆ ತಾಯಾಗಿ ಬದುಕುತ್ತಾರೆ. ಇವರ ಮಡಿಲಲ್ಲಿ ಒಡೆಯರ ಮಕ್ಕಳಿಗೆ ಸಿಹಿನಿದ್ದೆ, ದೂರದೇಶದಲ್ಲಿ ಅಜ್ಜ-ಅಜ್ಜಿ, ನೆಂಟರ ಮನೆಯಲ್ಲಿ ತೂಕಡಿಸುವ ಇವರ ಮಕ್ಕಳಿಗೆ ಇವರದ್ದೇ ಕನಸು! ಇವರು ಕಳುಹಿಸುವ ಹಣ ಮುದಿ ತಂದೆ-ತಾಯಿಗೆ ಆಸರೆಯಾದರೆ, ಇಲ್ಲಿ ಒಡೆಯರ ವಯಸ್ಸಾದ ಅಪ್ಪ-ಅಮ್ಮನಿಗೆ ಇವರೇ ಊರುಗೋಲು!

ಕೆಲವೊಮ್ಮೆ ಅತಿಯಾದ ಕೆಲಸ, ತಮ್ಮವರ ಅಗಲಿಕೆ-ಅಂತರ ಇತ್ಯಾದಿ ಸಂಗತಿಗಳು ಮನಸ್ಸಿನ ಮೇಲೆ ಪರಿಣಾಮ ಬೀರಿ ಹಲವರು ಸಿಡಿದೆದ್ದು ಹಿಂಸೆಗಿಳಿದು ಸುದ್ದಿಯಾಗಿದ್ದುಂಟು. ಮಾಲೀಕರ ಕ್ರೂರ ನಡವಳಿಕೆಯಿಂದ, ಅಪಾಯಕಾರಿ ಕೆಲಸದಿಂದ ಜೀವ ಕಳೆದುಕೊಂಡಿದ್ದು, ಆಸ್ಪತ್ರೆ ಪಾಲು ಆಗಿದ್ದೂ ಉಂಟು.


ಆದರೂ ಹಸಿದ ಹೊಟ್ಟೆ, ರಂಗಿನ ಭವಿಷ್ಯದ ಭರವಸೆ, ಡಾಲರ್ ಡ್ರೀಮ್ಸ್ ಇವರನ್ನು ಈ ದ್ವೀಪರಾಷ್ಟ್ರದತ್ತ ಸೆಳೆಯುತ್ತದೆ. ಸಿಂಗಪುರ ಕೈ ಚಾಚಿ ಸ್ವಾಗತಿಸುತ್ತದೆ. ಅಂದಹಾಗೆ, ಬಹಳ ಮನೆಗಳಲ್ಲಿ ಇವರೇ ಕೈ, ಲೇಖನದ ಶುರುವಿನಲ್ಲಿ ಹೇಳಿದಂತೆ.

❑

---



**ದಸರಾ ವಿಶೇಷ**



ನವರಾತ್ರಿ ಹಬ್ಬವನ್ನು ಪ್ರತಿವರ್ಷವೂ ಆಶ್ವಯುಜ ಮಾಸದಲ್ಲಿ ಹಿಂದೂಗಳು ವೈಭವದಿಂದ ಆಚರಿಸುತ್ತಾರೆ. ಇದನ್ನು ಆಶ್ವಯುಜ ಶುಕ್ಲ ಪಾಡ್ಯಮಿಯಿಂದ ದಶಮಿಯವರೆಗೆ ಆಚರಿಸಲ್ಪಡುವ ಈ ಉತ್ಸವಕ್ಕೆ ಬಹಳ ಹಿರಿಮೆಯಿದೆ. ಒಂಭತ್ತು ರಾತ್ರಿಗಳ ಪರ್ಯಂತ ಆಚರಿಸುವ ಹಬ್ಬವಾದ್ದರಿಂದ ಇದಕ್ಕೆ ನವರಾತ್ರಿ ಎಂಬ ಹೆಸರು ಬಂದಿರುತ್ತದೆ.. ಇದು ಹತ್ತು ಹಗಲುಗಳು ನಡೆಯುವ ಉತ್ಸವ. ಅದಕ್ಕೇ ದಸರಾ ಎಂದು ಹೆಸರಾಗಿದೆ. ದಶ ಅಂದರೆ ಹತ್ತು ಅಹ ಎಂದರೆ ಹಗಲು. ಈ ದಿನಗಳಲ್ಲಿ ಶಕ್ತಿದೇವಿ, ಜಗನ್ಮಾತೆಯನ್ನು ಪೂಜಿಸುತ್ತಾರೆ.

# ಚಪ್ಪಲಿಗೂ ಚಪಲ

**- ಸಿ.ಎನ್. ಕೃಷ್ಣಮಾಚಾರ್**

**ಚಿ**ತೆಗೂ ಚಿಂತೆಯಾದರೆ, ಚಪ್ಪಲಿಗೆ ಚಪಲವಾಗದೆ? ಚಿಂತೆ, ಚಾಪಲ್ಯ, ಚಾಂಚಲ್ಯ ಇತ್ಯಾದಿ ಮಾನುಷ ದೌರ್ಬಲ್ಯಗಳು ಕೇವಲ ಜಂಗಮವನ್ನು ಮಾತ್ರ ಕಾಡುತ್ತವೆ ಎಂತಲೆ? ಎಲ್ಲವು ಸ್ಥಾವರಕ್ಕೂ ಅಂಟುತ್ತವೆ. ಇಷ್ಟಕ್ಕೂ, ಚಪ್ಪಲಿ ಸ್ಥಾವರವಲ್ಲ. ತನ್ನೊಡೆಯನ ಯಾ ಒಡತಿಯ ಕಾಲನ್ನು ತಬ್ಬಿಹಿಡಿದು, ಬೆರಳುಗಳನ್ನು ಬಿಗಿಯಾಗಿ ಚುಂಬಿಸುತ್ತ 'ಮದುವೆಗೋ ಮಸಣಕ್ಕೋ ಹೋಗೆಂದ ಕಡೆ ಹೋಗೆನಲು ಪದ (ಪಾದ) ಕುಸಿಯೆ ನೆಲವಿಹುದು ಮಂಕುತಿಮ್ಮ'. ಅದುಕಾರಣ, ಚಪ್ಪಲಿ, ಜಂಗಮ, ಜಡಕ್ಕೆ ಅಳಿವುಂಟು. ಜಂಗಮಕ್ಕಿಲ್ಲ, ಅದು ಆತ್ಮದಂತೆ ಅವಿನಾಶಿ ತನ್ನ ಹೊತ್ತವನು/ಳು ರಾಜಮಾರ್ಗದಲ್ಲಿ ನಡೆಯುತ್ತ, ಅತ್ತಿತ್ತ ಫ್ಲೆಕ್ಸ್ ಫಲಕಗಳ, ಅರೆತೆರೆದೆದೆಯ, ಸಣಕಲ ಸೊಂಟಿಯರನ್ನು ನೋಡುತ್ತ, ಗುಂಡಿಗುರುಳಿ ಗುಂಡಿಗೆಯೊಡೆದು, 'ಹರಿಹರಿ' ಎಂದರೆ ಹರಿಯುವುದು ಎಕ್ಕಡವೇನೋ ಸರಿಯೆ. ಕಳೇಬರ ಕಬರಸ್ತಾನಕ್ಕೆ ಹೋದೀತೇ ಶಿವಾಯಿ, ತೊಟ್ಟ ಛಡಾವಿಗೆ ಬಿಟ್ಟಲ್ಲೆ ಬೀಡು. ಯಜಮಾನರ ಅಂತ್ಯೇಷ್ಟಿಯಲ್ಲಿ, ಬೀಸಣಿಗೆ, ಕೊಡೆ, ಪಾದುಕೆ ದಾನ ಕೊಡಬೇಕು. ಆಗ ಈ ಹರಿದ ಚಪ್ಪಲಿಯನ್ನು ಹೊಲಿಸಿಕೊಟ್ಟರೂ ನಡೆದೀತು. ದೇಹದಿಂದ ದೇಹಕ್ಕೆ ಕ್ಷಮಿಸಿ ಪಾದದಿಂದ ಪಾದಕ್ಕೆ ಪದಪಲ್ಲಟಗೊಳ್ಳುವ ಚಪ್ಪಲಿಗೂ ಚಪಲ. ಈ ದರಿದ್ರ ಎಕ್ಸಿಮಾ ಪೀಡಿತ ಕಾಲನ್ನು ಹಿಡಿದಿದ್ದು ಸಾಕು. ಬಿಡೆ ನಿನ್ನ ಪಾದವ ಬಿಂಕವಿನ್ನೇಕೋ? ಎಂದು ಹಳೆಯ ಮಾಲೀಕನನ್ನು ಗೋಗರೆಯುವುದೇಕೆ. ಹಾಗಂತ, ಹೊಚ್ಚ ಹೊಸ ಪಾದ ಪದ್ಮಂಗಳ ಮಕರಂದವನ್ನು ಹೀರುವ ಚಪಲ. ನೆಪಕ್ಕೆ ಕಾಯುತ್ತಿರುತ್ತೆ. ಮಠ ಮಂದಿರಗಳಲ್ಲಿ, ಮದುವೆ ಮನೆಗಳಲ್ಲಿ, ಬಾಸ್ ತನ್ನನ್ನು ಕಳಚಿದ ಕೂಡಲೆ, 'ಹೊಸ ಗಂಡನ ಪಾದವೆ ಗತಿ' ಅಂತ ಪಲ್ಲಟಗೊಳ್ಳುವುದು ಅದರ ಚಾಪಲ್ಯಕ್ಕೆ ಸಾಕ್ಷಿ. ಗೀತಾವಾಕ್ಯಕ್ಕೆ ಹೇಳಿಮಾಡಿಸಿದಂತಿದೆ, ಪರಮಪವಿತ್ರವಾದ ಪಾದರಕ್ಷೆ

*ವಾಸಾಂಸಿ ಜೀರ್ಣಾನಿ ಯಥಾವಿಹಾಯ*
*ನವಾನಿ ಗೃಹ್ಣಾತಿ ನರೋಪರಾಣಿ*
*ತಥಾ ಶರೀರಾಣಿ ವಿಹಾಯ ಜೀರ್ಣಾನಿ*
*ಅನ್ಯಾನಿ ಸಂಯಾತಿ ನವಾನಿ ದೇಹೀ॥*

ಫುಟ್ ವೇರ್ ಎಂಬುದು ಸಂವೇದನಾಶೀಲ ಭೌತ ವಸ್ತುವೆಂಬುದನ್ನು ಮರೆಯಬಾರದು. ಅದಕ್ಕೂ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಾದಿ ಮನೋವಿಕಾರಗಳುಂಟು. ಪೂರ್ವಾಗ್ರಹವುಂಟು, ಗರ್ವವುಂಟು. 'ಬಾಟಾ'ಷೋ ರೂಮಿನಿಂದ ಹೊರಬಂದ, ತರುಣಿಯ ಕಾಲಿಗಂಟಿದ ಚಪ್ಪಲಿ, ಎದುರಿಗೆ ಸಿಕ್ಕ ಸ್ಯಾಂಡೆಕ್ಸ್ ಧಾರಿಯನ್ನು ಕಂಡು ಹೇಗೆ ಕೆಕ್ಕರಿಸಿ ನೋಡುತ್ತೆ ಬಲ್ಲಿರಾ? ತನ್ನ ತೊಟ್ಟವಳ ಕಾಲು

ಸವೆಯುತ್ತದೆಯೇ ಶಿವಾಯಿ, ತಾನು ಮಾತ್ರ ಚಿರಂಜೀವಿಯೆಂಬ ಬೀಗು. ಫುಟ್ ಮಾತ್ರವೇ ವೇರ್ ಆಗುವುದು, ತಾನಲ್ಲವೆಂಬ ಹಮ್ಮು ತೊಟ್ಟವಳು ಅಜ್ಜಿಯಾದರೆ, ಆ ಬೀಗು, ಬಾಗಿ. ಚಾಪಲ್ಯ ಹಳಸಿದ ಪಲ್ಯದಂತೆ ನಾರುತ್ತದೆ. ಚಪ್ಪಲಿಯ ಚಪಲವೂ ಶ್ರೇಣೀಕೃತ್ಯವೆಂಬುದು ಗಮನಾರ್ಹ.

ಅರವತ್ತು ವರುಷಗಳ ಹಿಂದೆ ಮೈಸೂರು ಮಾರುಕಟ್ಟೆಯ ಹಿಂದಣ ರಸ್ತೆಯಲ್ಲಿ ಒಬ್ಬ ಮೋಚಿ ಇದ್ದ. ಹೆಸರು ದಾಸಪ್ಪ ಆದರೆ ವಸ್ತುಶಃ ಯಾರಿಗೂ ಆತ ದಾಸನಾಗಿರಲಿಲ್ಲ. ಚರ್ಮಲೋಕದ ಸರ್ವತಂತ್ರ ಸ್ವತಂತ್ರ ಸಾರ್ವಭೌಮನಾಗಿದ್ದ. ಇವತ್ತು ಅವನಿದ್ದಿದ್ದರೆ, ಅವನಿಗೆ ನೂರಿಪತ್ತು ವರುಷ. ಅವನಿಲ್ಲ ಆ ಅಂಗಡಿಯೂ ಇಲ್ಲ. ಅದೇ ತಾಣದಲ್ಲಿ ಉತ್ತರಕರ್ನಾಟಕದ ಭೂತನಾಥೇಶ್ವರ ಖಾನಾವಳಿ ತಲೆ ಎತ್ತಿದೆ. ಅಲ್ಲಿ ಜಮಖಂಡಿ ಜ್ವಾಳದ ರೊಟ್ಟಿ ಪುಂಡಿಪಲ್ಲೆ, ಉಳ್ಳಾಗಡಿ, ಉರಳ್‌ಚಟ್ನಿ, ಎಮ್ಮಿ ಮೊಸರು, ಎಣ್ಣೆಗಾಯಿ ಭರ್‌ಪೂರ್. ಬಕರಿ ಬಾಯಿಗಿಟ್ಟರೆ, ದಾಸಪ್ಪನ ಥಡಾವು ನೆನಪಾಗುತ್ತೆ ಆಪಾಟಿಮೃದು, ಅಂಥನಯ ಅದಾವ ಪ್ರಾಣಿಯ ತೊಗಲೋ ಕಾಣೆ. (ಆ ದಿನಗಳಲ್ಲಿ ರೆಕ್ಸಿನ್, ಪ್ಲಾಸ್ಟಿಕ್ ಎಂಬ ವಿಶ್ವಾಮಿತ್ರ ಸೃಷ್ಟಿ ಇರಲಿಲ್ಲ. ಪ್ರಾಣಿ ಸಂರಕ್ಷಣಾ ಸಂಘವೂ ಹುಟ್ಟಿರಲಿಲ್ಲ) ಆ ತೊಗಲಿನಲ್ಲಿ ಬೂಟು ಮಾಡ್ರಿ ಅದರ ಮುಖಸಂಕೇರುಹಕ್ಕೆ ಸ್ನೋ ಪೌಡರ್, ಕ್ರೀಂ ಹಚ್ಚಿ ಕೊಟ್ಟರೆ, ಬೂಟುಧಾರಿ ತನ್ನ, ಕಾಲು ನೋಡಿ ಮುಖಕ್ಷೌರ ಮಾಡಿ ಕೊಳ್ಳಬಹುದಾದಂಥ ಹೊಳಪು ಒಂದು ಅನಿರೀಕ್ಷಿತ ಸಂದರ್ಭದಲ್ಲಿ, ಕಳ್ಳಿಯೊಬ್ಬಳ ಕಾಲನ್ನೇ ನೋಡುತ್ತ ಅವಳು ಕದ್ದ ಚಿನ್ನದ ಕಾಲಂದುಗೆಯ ಸುಳಿವನ್ನು ಪೋಲಿಸರಿಗೆ ಕೊಟ್ಟಿದ್ದ – ತಲೆ ಎತ್ತದೆ ನಡೆಸಿದ ತನಿಖೆ! (ನಾಹಂ ಜಾನಾಮಿ ಕೇಯೂರೇ, ನತುಜಾನಾಮಿ ಕುಂಡಲೇ! ನೂಪುರೇತ್ವಭಿಜಾನಾಮಿ ನಿತ್ಯ ಪಾದಾಭಿವಂದನಾತ್' ನೆನಪಿದೆಯೇ!) ಪಾದ ರಕ್ಷಗೆ ಕಳ್ಳಿ, ಸುಳ್ಳಿ, ಮಳ್ಳಿಯೆಂಬ ಭೇದವಿಲ್ಲ. ತನ್ನ ತೊಡುವ ಪಾದಗಳ ಸಾಂಗತ್ಯದ ಚಪಲವಷ್ಟೆ!

ಚಪ್ಪಲಿಯ ಚಪಲ ಮೀಮಾಂಸೆ, ಬಹುಪುರಾತನ, ಹದಿಮೂರನೇ ಶತಮಾನದಲ್ಲಿ ವಿದ್ವಾಂಸನೋರ್ವನ ಸವಾಲನ್ನು ಸ್ವೀಕರಿಸಿ, ಒಂದು ರಾತ್ರಿ, ಕೇವಲ ಒಂದೂವರೆ ತಾಸಿನಲ್ಲಿ ಒಂದು ಸಾವಿರ ಶ್ಲೋಕಗಳನ್ನು ವೇದಾಂತದೇಶಿಕ ಕವಿ ರಚಿಸಿದುದಾಗಿ ಪ್ರತೀತಿ ಕಾರ್ಯದ ಹೆಸರೇನು ಗೊತ್ತೆ? ಪಾದುಕಾಸಹಸ್ರಂ! ಅದರ ಎರಡನೇ ಶ್ಲೋಕ, ಶ್ರೀರಾಮನ ಪಾದುಕೆಗೆ ಪ್ರಭಾವ ಬಂದಿದ್ದು, ರಾಮನ ಪಾದಸ್ಪರ್ಶದಿಂದಲ್ಲ, ಭರತನ ಭಕ್ತಿವಿಶೇಷದಿಂದ ಎಂದು ತಿಳಿಸುತ್ತದೆ.

ಭರತಾಯ ಪರಂ ನಮೋಽಸ್ತು ತಸ್ಮೈ ಪ್ರಥಮೋದ ಹರಣಾಯ ಭಕ್ತಿ ಭಾಜಾಮ್।
ಯದುಪಜ್ಞಮಶೇಷತಃ ಪೃಥಿವ್ಯಾಂ ಪ್ರಥಿತೋ ರಾಘವ ಪಾದುಕಾ ಪ್ರಭಾವಃ॥

ಅಂತೆಯೇ ಜಮ್ಮಾರ ಚನ್ನಯ್ಯನ ಚಪ್ಪಲಿಗೆ ಪ್ರಾಮುಖ್ಯ ಬಂದದ್ದು ಬಸವಣ್ಣ ಅದನ್ನು ಶಿರೋಧಾರಣೆ ಮಾಡಿದ್ದರಿಂದ (ವಯಂ ತು ಶಿವಭಕ್ತಾನಾಂ ಪಾದರಕ್ಷಾವ ಲಂಬಿನಃ) ಒಟ್ಟಿನಲ್ಲಿ ಸಾರಸ್ಯಕ ಲೋಕದೊಳಗೂ ಮೂಗುತೂರಿಸಿ, ತನ್ನ ಪ್ರಾಶಸ್ತ್ಯ ಮೆರೆದ ಚಪ್ಪಲಿಯ ಚಾಪಲ್ಯ ಏಸು ಆಗಾಧ!

ಅದು ಆ ಕಾಲ. ಈಗಲೂ ಮೆಟ್ಟುಗಳು ಬಜಾರಿನ ಮೆಟ್ಟಲು ತುಂಬ ತುಂಬಿತುಳುಕುತ್ತಿವೆ. ಕಾಲಿಟ್ಟಲ್ಲಿ ಕಚ್ಚುತ್ತವೆ. ಆದರೆ ಹೀನ ಚಪಲ, ಕೊಳಕು ಅಭಿರುಚಿಯುಳ್ಳವು, ಇವತ್ತು ಬೆಳಿಗ್ಗೆ ಎದ್ದು. 'ಕೌಸಲ್ಯಾ ಸುಪ್ರಜಾರಾಮ' ಹೇಳುತ್ತ ಹೊರಬಂದರೆ, ಒಂದು ಚಪ್ಪಲಿ ಕಾಣೆ. ನಮ್ಮ ಹವೇಲಿಯ ಬಿಡಾಡಿ ನಾಯಿಯೋ, ಪಕ್ಕದ ಮೊಹಲ್ಲೆಯ ಮತಿಗೆಟ್ಟ ಶ್ವಾನವೋ, ವಾಸನೆ ಹಿಡಿದು ಬಂದಿರಬೇಕು. ಹೊತ್ತೊಯ್ದಿರಬೇಕು. ನಾಯಿ ಎಂದಿದ್ದರೂ ನಾಯಿಯೇ ಅದಕ್ಕೆ ಚಪ್ಪಲಿಯೂ ಒಂದೇ ಚಪಾತಿಯೂ ಒಂದೇ. ಆದರೆ ಈ ಗತಿಕೆಟ್ಟ ಎಕ್ಕಡಕ್ಕೇನು ಬಂತು ಕೇಡು. ಕಚ್ಚಿಸಿಕೊಳ್ಳಲು ಬೇರೆ ದಂತಪ್ರಜೆಗಳೇ ಸಿಗಲಿಲ್ಲವೇ?

ಕೊಂಡ ಹೊಸತಲ್ಲಿ ನನ್ನ ಕಾಲನ್ನು ಹೀಗೆಯೇ ಕಚ್ಚಿತ್ತು. ವಿಸಿಟ್ ಆಫ್ ನೆಮಿಸಿಸ್ ಎಂದು ನಿಡುಸುಯ್ಯಲೆ ಎಂದರೆ, ಇನ್ನೊಂದು ಚಪ್ಪಲಿ ಕಾಲಿಗೇರಿಸಿ, ಸನ್ಮಾನ ಸಮಾರಂಭಕ್ಕೆ ಹೋಗಲೆಂತ? ಅಲ್ಲಿ ಕಳೆದುಹೋದ ಚಪ್ಪಲಿಗೆ ಕಾಂಪನ್‌ಸೇಶನ್ ಕೊಡುತ್ತಾರೆಯೇ? ಹೀಗಾಗಿ ಚಪಲವಿತ್ತು ಚಪ್ಪಲಿಯನ್ನು ತೊಡಬಾರದೆಂದು ಸಂಕಲ್ಪಮಾಡಿದ್ದೇನೆ.

❑

---

**ದಸರಾ ವಿಶೇಷ**

ಮೈಸೂರಿನ ಅನೇಕ ರಾಣಿಯರ ಪೈಕಿ ದಿಟ್ಟತನ ಪ್ರದರ್ಶಿಸಿದ ರಾಣಿ ವಾಣಿ ವಿಲಾಸ ಸನ್ನಿಧಾನ ಎಂದೇಕರೆಯುತ್ತಿದ್ದ ಮಹಾರಾಣಿ ಕೆಂಪನಂಜಮ್ಮಣ್ಣಿಯವರು. 10ನೇ ಚಾಮರಾಜ ಒಡೆಯರ್ ಅವರು ಕಲ್ಕತ್ತದಲ್ಲಿ ತೀರಿಕೊಂಡಾಗ ಹತ್ತು ವರ್ಷದವರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಪ್ರಾಪ್ತ ವಯಸ್ಕರಾಗುವವರೆಗೆ ರೀಜೆಂಟ್ ಆಗಿ ಮೈಸೂರು ಒಡೆಯರ್ ಆಳ್ವಿಕೆಯನ್ನು ರಕ್ಷಿಸಿ ಮುಂದುವರಿಸಿಕೊಂಡು ಹೋದ ದಿಟ್ಟ ಮಹಿಳೆ.

ಅಮೆರಿಕದ ಜನರಲ್ ಎಲೆಕ್ಟ್ರಿಕ್ ಕಂಪನಿಯ ತಜ್ಞರನ್ನು ಕರೆಯಿಸಿ ಶಿವನಸಮುದ್ರದಿಂದ 1902ನೇ ಜೂನ್ 30ರಂದು ಕೆಜೆಎಫ್ ಗೂ 1905ರಲ್ಲಿ ಬೆಂಗಳೂರಿಗೂ ಮತ್ತು ಮೈಸೂರು ಅರಮನೆಗೂ ವಿದ್ಯುದ್ದೀಪ ತರಿಸಿದ ಕೆಂಪನಂಜಮ್ಮಣ್ಣಿ ಅವರ ದೂರದೃಷ್ಟಿತ್ವ ಹಾಗೂ ಪ್ರಜಾ ವಾತ್ಸಲ್ಯ ಅನುಪಮವಾದದ್ದು. ಇಡೀ ಏಷ್ಯಾದಲ್ಲೇ ವಿದ್ಯುತ್ ಪಡೆದ ಮೊದಲ ನಗರ ಎಂಬ ಹೆಮ್ಮೆ ಬೆಂಗೂರು ನಗರದ್ದಾಯಿತು. ಆಗ ಕೆ. ಶೇಷಾದ್ರಿ ಅಯ್ಯರ್ ಅವರು ಮೈಸೂರಿನಲ್ಲಿ ದಿವಾನರಾಗಿದ್ದರು. ಈ ಅವಧಿಯಲ್ಲಿ ಮೈಸೂರು ನಗರಕ್ಕೂ ವಿದ್ಯುತ್ ದೀಪ ಬಂದಾಗ ಜನರು "ಕೃಷ್ಣರಾಜ ಭೂಪ ಮನೆ ಮನೆಗೆಲ್ಲ ದೀಪ" ಎಂದು ಕುಣಿದಾಡಿದರಂತೆ

## ಅಪರಂಜಿಗೆ ಹಾರ್ದಿಕ ಶುಭಾಶಯಗಳು

## ಡಾ. ಎಚ್.ಎಸ್. ಮುರಳಿ

ನೇತ್ರ ವೈದ್ಯರು

**ದಿ ಐ ಕ್ಲಿನಿಕ್**

ಅಣ್ಣಯ್ಯ ಕಾಂಪ್ಲೆಕ್ಸ್

ಹೊಸಳ್ಳಿ ರಸ್ತೆ, ಮಂಡ್ಯ

ಫೋನ್: 224834

ಸಮಯ: ಬೆಳಗ್ಗೆ 9 ರಿಂದ 1 ಗಂಟೆ

**ಮಾಲಸ ಐ ಕ್ಲಿನಿಕ್**

ಬಸ್ ಸ್ಟಾಂಡ್ ಸರ್ಕಲ್

ಚಾಮುಂಡೀಪುರಂ

ಮೈಸೂರು 570 004

ಫೋನ್: 2332225

ಸಮಯ: ಸಂಜೆ 5 ರಿಂದ 8 ಗಂಟೆ

ಮೊಬೈಲ್: 94487 40093

# ಐ.ಎಸ್.ಒ. ಸ್ಟ್ಯಾಂಡರ್ಡ್ ಗಂಡ

- ಪ್ರಶಾಂತ ಅಡೂರ

**ಮೊ**ನ್ನೆ ಬೆಂಗಳೂರಿಂದ ರಾಜಾ ಬಂದಿದ್ದಾ, ಪಾಪಾ ಭಾಳ ದಿವಸಾದ ಮ್ಯಾಲೆ ಕನ್ಯಾ ಫಿಕ್ಸ್ ಆಗಿತ್ತ ನಮಗೇಲ್ಲಾ ಪಾರ್ಟಿ ಗೀರ್ಟಿ ಕೊಡ್ತಾನ ತಡಿ ಅಂತ ಕೇಳಿದರ ಮಗಾ 'ಏ, ಎಲ್ಲೆ ಪಾರ್ಟಿ ಹೋಗರಲೇ' ಅಂತ ನಮಗ ಜೋರ್ ಮಾಡಿದಾ. ಇಂವಾ ಯಾಕ ಈ ಪರಿ ಬರೇ ಕನ್ಯಾ ಫಿಕ್ಸ್ ಆಗಿದ್ದಕ್ಕ ಬೇಜಾರ ಆಗ್ಯಾನ, ಇನ್ನೂ ಲಗ್ನ ಆಗಬೇಕು, ಹೆಂಡ್ತಿ ಕೈಯಾಗ ಸಿಕ್ಕೊಂಡ ಒದ್ಯಾಡಬೇಕು, ಒಂದ್ಯಾರಡ ಹಡಿಬೇಕು ಆಮ್ಯಾಲೆ ಸಂಸಾರದಾಗ ಜಿಗೂಪ್ಸೆ ಹೊಂದಿ ನಮ್ಮಂಗ ಬೇಜಾರ ಆದ್ರ ಆ ಮಾತ ಬ್ಯಾರೆ ಇತ್ತ.

ನಾ ಇವಂದ ಏನ ಹಕೀಕತ್ ಕೇಳಿದರಾತ ತಡಿ ಅಂತ

'ಯಾಕಲೇ ಫಿಕ್ಸ್ ಆಗಿದ್ದ ಕನ್ಯಾ ಏನ ನಿನಗ ಮನಸ್ಸಿಗೆ ಬಂದಿಲ್ಲೇನಲೇ?' ಅಂತ ನಾ ಕೇಳೋದ ತಡಾ ಒಂದ ದೊಡ್ಡ ಕಥಿನ ಶುರು ಮಾಡಿದಾ.

ಅವರ ಮನ್ಯಾಗ ಇವಂಗ ಕನ್ಯಾ ನೋಡಿ ನೋಡಿ ಸಾಕಾಗಿ ಕಡಿಕೆ ಒಂದ ಯಾವದೋ ಹುಡಗಿ ಇದ್ದಿದ್ದರಾಗ ಇವಂಗ 'ಹೂಂ' ಅನ್ನೋದ ತಡಾ ಇವನ ಮದ್ವಿ ನಿಕ್ಕಿ ಮಾಡಿ ಬಿಟ್ಟಿದ್ದರು. ಆ ಹುಡುಗಿ ಬೆಂಗಳೂರಾಗ ಒಂದ ಕಂಪನಿ ಒಳಗ ಮ್ಯಾನೇಜಮೆಂಟ್ ರೆಪ್ರೆಸೆಂಟೇಟಿವ್ ಅಂತ ಕೆಲಸಾ ಮಾಡ್ತಿದಳು. ಅಕಿ ದಿವಸಾ ಬೆಳಕ ಹರದರ ಸಾಕ ಐ.ಎಸ್.ಒ ಸ್ಟ್ಯಾಂಡರ್ಡ್ ಬಗ್ಗೆನ ಮಾತಾಡ್ತಿದ್ದಳಂತ. ಪ್ರತಿಯೊಂದಕ್ಕು ಒಂದ ಸ್ಟ್ಯಾಂಡರ್ಡ್ ಇರಬೇಕು ಇದ್ದದ್ದೇಲ್ಲಾ ಸ್ಟ್ಯಾಂಡರ್ಡ್ ಇರಬೇಕು ಅನ್ನೋ ಲೆಕ್ಕದ ಹೆಣ್ಣಮಗಳ. ಇನ್ನ ಹಂತಾಕಿ ಲಗ್ನಾ ಮಾಡ್ಕೊಳಿಕತ್ತಾಳ ಅಂದರ ಸ್ಟ್ಯಾಂಡರ್ಡ್ ಗಂಡನ್ನ ಇಲ್ಲಾ ಗಂಡನೊಳಗ ಸ್ಟ್ಯಾಂಡರ್ಡ್ ನೋಡೋದ ಸಹಜ.

ಅಕಿ ಇವನ ಜೊತಿ ಹಿಂಗ ಲಗ್ನ ಫಿಕ್ಸ ಆಗೋದ ಗ್ಯಾರಂಟಿ ಅನ್ನೋದಕ್ಕ ಇವನ ತಲಿ ತಿನ್ನಲಿಕತ್ತಳಂತ. ಮಾತ ಮಾತಿಗೆ ಎನ್.ಸಿ. (ನಾನ್ ಕನ್‌ಫಾರ್ಮನ್ಸ್), ರಿವರ್ಕ್, ಓಕೆ ಪ್ರಾಡಕ್ಟ್, ಕ್ವಾಲಿಟಿ ಮ್ಯಾನೇಜ್ಮೆಂಟ್ ಅಂತೇಲ್ಲಾ ಐ.ಎಸ್.ಒ. ಟರ್ಮಿನಾಲಜಿ ಒಳಗ ಇವನ ಜೊತಿ ಮಾತಾಡೋಕಿ. ಇವಂಗರ ಯಾಕರ ಇಕಿ ಜೊತಿ ಲಗ್ನ ಫಿಕ್ಸ್ ಆತೊ ಅನಿಸಿ ಪಾಪ ಅಂವಾ ಒಂದ ಹತ್ತ ಸರತೆ ತಮ್ಮ ಮನಿ ಟಾಪ್ ಮ್ಯಾನೇಜ್ಮೆಂಟ್ ಮಿಟಿಂಗ್ ಕರದ ನಂಗ ಈ ಕನ್ಯಾ ಬ್ಯಾಡ, ಕನ್ಯಾ ಬ್ಯಾಡಾ ಅಂತ ಗೋಳಿಟ್ಟರೂ ಅವರ ಮನ್ಯಾಗ ಕೇಳಲಿಲ್ಲಾ.

ಯಾಕಂದರ, ಒಂದ ಇವಂಗ ಕನ್ಯಾ ಸಿಗೋದ ಏಳೂ ಹನ್ನೇರಡ ಆಗಿತ್ತ ಮ್ಯಾಲೆ ಆ ಹೆಣ್ಣಿನವರದ ರಿಸೋರ್ಸ್ ಮ್ಯಾನೇಜ್ಮೆಂಟ್ ಭಾರಿ ಇತ್ತ. ಬೊಮ್ಮನಳ್ಳಿ ಒಳಗ ಆ ಹುಡುಗಿ ಹೆಸರಿಲೇ ಒಂದ ಹತ್ತ ಎಕರೆ ಹೊಲಾ, ಪೂಣಾದಾಗ ಒಂದ ಆರನೇ ಅಂತಸ್ತಿನಾಗ ಫ್ಲ್ಯಾಟ ಹಿಂಗಾಗಿ ಇವರ ಮನ್ಯಾಗ ಆ ಹುಡುಗಿನ್ನ ಅಕಿ ಹಂಗ ನೋಡಲಿಕ್ಕೆ ಛಂದ ಇಲ್ಲಾ ಅಂದರು ಡೀವೇಷಿಯನ್ ಮ್ಯಾಲೆ ಅಕ್ಸೆಪ್ಟ್ ಮಾಡ್ಕೊಂಡಿದ್ದರು.

ಪಾಪ ಇವನ ಹಣೆಬರಹ ನೋಡ್ರಿ ಇಂವಾ ಎಷ್ಟ ಜೀವನದಾಗ ಕಸ್ಟಮರ್ ಸ್ಯಾಟಿಸ್ಫ್ಯಾಕ್ಷನ್ ಇಂಪಾರ್ಟೆಂಟ್ ಅಂದರು ಯಾರು ಅವನ ಮಾತ ಕೇಳಲಿಲ್ಲಾ.

ಇವಂಗೇನೊ ಕನ್ಯಾ ತೊರಸಲಿಕ್ಕೆ ಬಂದಾಗ ಆ ಹುಡುಗಿ ನಿಂದ ಸಿಕ್ಸ್ ಸಿಗ್ಮ ಆಗೇದನ ಅಂತ ಕೇಳಿದ್ಲಂತ? ಪಾಪ ಇವರ ಮನ್ಯಾಗಿನವರ ಇಕೇನ ಹಿಂಗ ಅಸಂಯ್ಯ ಅಸಂಯ್ಯ ಮಾತಾಡ್ತಾಳಾ ಅನ್ಕೊಂಡಿದ್ದರಂತ. ಆಮ್ಯಾಲೆ ಅದ ಸೆಕ್ಸ್ ಅಲ್ಲಾ ಸಿಕ್ಸ್ ಸಿಗ್ಮ ಅಂತ ತಿಳಿಸಿ ಹೇಳೋದರಾಗ ಪಾಪ ಆ

ಹುಡುಗಿಗೆ ರಗಡ ಆಗಿತ್ತಂತ. ಅಷ್ಟಕ್ಕ ಮುಗಿಲಿಲ್ಲಾ ಗಂಡಗ 5 ಎಸ್ ಕಾನ್ಸೆಪ್ಟ್ ಆಫ್ ಹೌಸ್ ಕೀಪಿಂಗ್ ಬರ್ತದೋ ಇಲ್ಲೊ, ಎಂ.ಐ.ಎಸ್ (ಮ್ಯಾನೇಜ್ಮೆಂಟ್ ಇನ್ಫರ್ಮೇಷನ್ ಸಿಸ್ಟಮ್ ರಿಪೋರ್ಟಿಂಗ್ ಬರ್ತದೋ ಇಲ್ಲೋ ಅಂತೇಲ್ಲಾ ಜೀವಾ ತಿಂದಾಗ ಅಂವಾ ನಂಗ ಯಾ ಸುಡಗಾಡ ಕಾನ್ಸೆಪ್ಟ್ ಗೊತ್ತಿಲ್ಲಾ. ಆದರ ನಿಂಗ ಮಾತ್ರ ಒಂದ ಕಾನ್ಸೆಪ್ಟ್ ಕ್ಲಿಯರ್ ಇರಲಿ ಒಂದ ಗಂಡು ಒಂದ ಹೆಣ್ಣು ಲಗ್ನಾಗಿ ಮೂರ ವರ್ಷದಾಗ ರೆಡಿ ಆಗಬೇಕು ಅಂತ ಅಂದ ಅಕಿ ಆಮ್ಯಾಲೆ ಇವಂಗ 'ಮೊದ್ಲ ನೀ ಛಂದಾಗಿ ಪ್ರೊಡಕ್ಷನ್ ಫ್ಲೊಚಾರ್ಟ್ ಬರದ ತೊರಸ, ಆಮ್ಯಾಲೆ ಮಕ್ಕಳ ಮಾತ' ಅಂತ ಬೈಸಿಗೊಂಡಿದ್ನಂತ.

ಇತ್ತಲಾಗ ಆ ಹುಡುಗಿ ಅಕ್ಕಾ ಒಂದ ಸರತೆ ಇವರ ಮನಿಗೆ ಅಪ್ರೈಸಲ್ ಫಾರ್ಮ್ ತೊಗೊಂಡ ಬಂದ ಈಡಿ ಮನೆತನದ್ದ ಅಪ್ರೈಸಲ್ ಮಾಡ್ಕೊಂಡ ಹೋಗಿದ್ಲಂತ, ಪಾಪ ನಮ್ಮ ರಾಜಂದ ಸಿಕ್ಕಾಪಟ್ಟೆ ಆಡಿಟ್ ಮಾಡಿ ಕಡಿಕೆ ಅವನ ಹಣೆ ಮ್ಯಾಲೆ ಟೆಸ್ಟೆಡ್ ಓಕೆ ಅಂತ ಒಂದ ಹಸಿರ ಶರ್ಟ ಪೀಸ ಉಡಿ ತುಂಬಿ ಕೆಂಪ ಸ್ಟಿಕರ್ ಹಚ್ಚಿ ಹೊದ ಮ್ಯಾಲೆ ಈ ಹುಡಗಿ ಫಿಕ್ಸ್ ಆಗಿದ್ದ.

ಒಂದ ಸರತೆ ರಾಜಾನ ಅಪ್ಪನ ಫ್ರೆಂಡ್ ಒಬ್ಬರ ಬಂದ ಇವರ ಮನಿದ ಥರ್ಡ್ ಪಾರ್ಟಿ ಇನ್ಸ್ಪೆಕ್ಷನ್ ಬ್ಯಾರೆ ಮಾಡಿ ಹೋಗಿದ್ದರಂತ. ಅವರ ಆ ಹೆಣ್ಣಿನವರಿಗೆ ದೂರಿಂದ ಬಳಗ ಆಗಬೇಕ ಹಿಂಗಾಗಿ ಇಲ್ಲೆ ಬೆಂಗಳೂರಿಗೆ ಬಂದಿದ್ದೆ ನಿಮನ್ನ ಮಾತಾಡಿಸಿಗೊಂಡ ಹೋದರಾತು ಅಂತ ಬಂದೆ ಅಂತ ಸುಳ್ಳ ಸುಳ್ಳ ನೆಪಾ ಹೇಳಿ ಇವರ ಕುಂಡಲಿ ಅಳಗ್ಯಾಡಸ್ಕೊಂಡ ವಾಲ್ಯುಯೇಷನ್ ಮಾಡ್ಕೊಂಡ ಹೊಗಿದ್ದರಂತ.

ಹಿಂಗ ಆ ಹುಡುಗಿದ ಇಡಿ ಫ್ಯಾಮಿಲಿ ಮಂದಿ ಬಂದ ನಮ್ಮ ರಾಜಾನ್ನ ಗೋಳ ಹೊಯ್ಕೊಂಡ ಹೋಗಿ ಕಡಿಕೆ 'ವರಾ' ಕನ್‌ಫಾರ್ಮಿಂಗ್ ಟು ಅವರ್ ಸ್ಟಾಂಡರ್ಡ್ಸ್ ಅಂತ ಹೇಳಿದ್ದರಂತ. ಪಾಪ ನಮ್ಮ ರಾಜಾ 'ಈಗ ಹಿಂಗ.. ಮುಂದ ಮದುವಿ ಆದಮ್ಯಾಲೆ ಹೆಂಗೋ' ಅಂತ ಹೆದರಿ ಬಿಟ್ಟಾನ. ಏನ್ಮಾಡ್ತೀರಿ ಇತ್ತಲಾಗ ಕನ್ಯಾ ಒಲ್ಲೆ ಅನ್ನಲಿಕ್ಕೆ ಬರಂಗಿಲ್ಲಾ, ಅಪರೂಪಕ್ಕ ಸಿಕ್ಕದ್ದ ಕನ್ಯಾ, ಅದರಾಗ ಇವರ ಮನಿ ಟಾಪ್ ಮ್ಯಾನೇಜ್ಮೆಂಟ್ ಅಂತೂ ನೀ ಸುಮ್ಮನ ಬಾಯಿ ಮುಚಗೊಂಡ ಲಗ್ನಾ ಮಾಡ್ಕೋಕೊ. ಆ ಹುಡುಗಿ ಹೂಂ ಅಂದಿದ್ದ ಗ್ರೇಟ್ ಅಂತ ಎಂಗೇಜಮೆಂಟ್ ಡೇಟ್ ಬ್ಯಾರೆ ಫಿಕ್ಸ್ ಮಾಡಿ ಬಿಟ್ಟಾರ. ಅದರಾಗ ನಮ್ಮ ರಾಜಾ ಮೊದ್ಲ ರಾಜಾ ಮನಷ್ಯಾ ತಿಳದಾಗ ಏಳೋಂವಾ, ತಿಳದಾಗ ಸ್ನಾನ, ಸಂಧ್ಯಾವಂದನಿ, ಒಂದಕ್ಕೂ ಟೈಮ ಇಲ್ಲಾ ಷೆಡ್ಯೂಲ್ ಇಲ್ಲಾ. ನಮ್ಮ ಗತೆ ಮಹಾ ಮುಗ್ಗಲಗೇಡಿ. ಇನ್ನ ಹಂತಾವ ಹಿಂಗ ಐ.ಎಸ್.ಓ ಸ್ಟ್ಯಾಂಡರ್ಡ್ ಹುಡುಗಿನ್ನ ಕಟಗೊಂಡ ಹೆಂಗ ಸಂಸಾರ ಮಾಡ್ತಾನೋ ಏನೊ ಆ ದೇವರಿಗೆ ಗೊತ್ತ. ಅಲ್ಲಾ, ಹಂಗ ಈ ಗಂಡಂದರಿಗೂ ಯಾರರ ಐ.ಎಸ್.ಓ ಕೊಡ್ತಾರೇನ? ಯಾಕಂದರ ಇವತ್ತ ಈ ಕನ್ಯಾಗೊಳ ಡಿಮಾಂಡ್ ನೋಡಿದರ ನಾಳೆ ನಂಗ ಐ.ಎಸ್.ಓ ಸ್ಟ್ಯಾಂಡರ್ಡ್ ಗಂಡನ ಬೇಕು ಅವಂಗ ಐ.ಎಸ್.ಐ ಹಾಲ್ಮಾರ್ಕ್ ಇರಬೇಕು ಅಂತ ಗಂಟ ಬಿದ್ದರ ಏನ ಮಾಡೋದು. ಅಲ್ಲಾ ಹಂಗ ಜಗತ್ತಿನಾಗ ಎಲ್ಲಾದಕ್ಕೂ ಒಂದೊಂದ ಸ್ಟ್ಯಾಂಡರ್ಡ್ ಮಾಡ್ಯಾರ ಅಂದಮ್ಯಾಲೆ ನಾಳೆ ಈ ಗಂಡಂದರಿಗೆ ಮಾಡಲಾರದ ಇರ್ತಾರ?

ಹೋಗಲಿ ಬಿಡ್ರಿ ನಾವ ಯಾಕ ಅಷ್ಟ ತಲಿಕೆಡಸಿಗೊಳ್ಳೊದು, ನಂಬದಂತು ಐ.ಎಸ್.ಓ/ಐ.ಎಸ್.ಐ ಇಲ್ಲದ ಮದುವಿ ಆಗಿ ಬಿಟ್ಟದ. ಇನ್ನ ಮುಂದ ಮದ್ವಿ ಮಾಡ್ಕೋಳೊರ ಅದರ ಬಗ್ಗೆ ತಲಿಕೆಡಸಿಗೊ ಬೇಕ ಇಷ್ಟ.

ಅನ್ನಂಗ ನಮ್ಮ ರಾಜನ್ನ ಎಂಗೇಜಮೆಂಟ್ ಡೇಟ ಅಕ್ಟೋಬರ 14ಕ್ಕ ಫಿಕ್ಸ್ ಆಗೇದ, ಅವತ್ತ ಯಾಕ ಹೇಳ್ರಿ... ಯಾಕಂದರ ಅವತ್ತ ವರ್ಲ್ಡ್ ಸ್ಟ್ಯಾಂಡರ್ಡ್ ಡೇ ಅಂತ ಅವನ ಹೆಂಡ್ತಿ ಅವತ್ತ ಇಟಗೊಂಡಾಳ.

ಏನ್ಮಾಡ್ತೀರಿ ಈ ಪರಿ ಸ್ಟ್ಯಾಂಡರ್ಡ್ ಹೆಣ್ಣಮಗಳಿಗೆ? ನಾಳೆ ಮದುವಿ ಆದಮ್ಯಾಲೆ ರಾಜಾನ ಹಣೆಬರಹ ಏನ ಅದನೋ ಏನೋ?

❑